10-30 A.M.

SRI KAGODU THIMMAPPA.—The way in which he has mis-used the power is a clear proof.

SRI B. SUBBAYYA SHETTY.—If he has mis-used his office definitely action will be taken. Sofar as the appointment is concerned I have not asked the Board to reconsider it. But about the emoluments I have asked the Board to reconsider. Even his appointment will have to be approved by the Government and also by the Company Law Dept., of the Government of India.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಾನು ಹೇಳುವುದೇನೆಂದರೆ, ಮಾನ್ಯ ಕೆಂಪರಾಜ ಅರಸ್ ಅವರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಮುಂದುವರಿಯುವ ಸಲುವಾಗಿ ಜನರಲ್ ಬಾಡಿ ಮೀಟಿಂಗ್ ಕರೆಯುವುದನ್ನು ರದ್ದುಪಡಿಸಿದ್ದಾರೆ. ಬೋರ್ಡ್ ಮೀಟಿಂಗ್ ಪ್ರಕಾರ ಜನವರಿ ಒಂದರಿಂದ ಕೆಲಸದಲ್ಲಿದ್ದಾರೆ. ಇವತ್ತು ನಮ್ಮ ಒತ್ತಾಯವೇನೆಂದರೆ ಅವರನ್ನು ಮ್ಯಾನೆಜಿಂಗ್ ಡೈರೆಕ್ಟರ್ ಆಗಿ ಮುಂದುವರಿಯಲು ಅವಕಾಶ ಕೊಡದೆ ಅನಾಮತ್ತುಗೊಳಿಸಬೇಕು ಮತ್ತು ಜನರಲ್ ಬಾಡಿ ಮೀಟಿಂಗ್ ಆಗಿ ಆಯ್ಕೆಯಾಗುವವರೆಗೆ ಜಾರಿಗೆ ಕೊಡಬಾರದೆಂದು.

ಅಧ್ಯಕ್ಷರು.—ಅವರು ಡೈರಕ್ಟರೇ ಹೊರತು ಮ್ಯಾನೇಜಿಂಗ್ ಡೈರೆಕ್ಟರ್ ಅಲ್ಲ.

ಬಿ. ಸುಬ್ಬಯ್ಯ ಶೆಟ್ಟಿ.—ಅವರು ಮೊದಲು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಫಂಕ್ಷನ್ ಮಾಡುತ್ತಿದ್ದರು. ಆದರೆ ಅವರು ಈಗ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಫಂಕ್ಷನ್ ಮಾಡುವುದಿಲ್ಲ. ಅವರು ಈಗ ಡೈರೆಕ್ಟರ್ ಆಗಿ ಕೆಲಸ ಮಾಡುತ್ತಿರುವುದರಿಂದ ಅವರಿಗೆ ಎಮೊಲ್ಯುಮೆಂಟ್ಸ್ ಕೊಡುವ ಬಗ್ಗೆ ರೆಸಲ್ಯೂಷನ್ ಪಾಸಾಗಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ಫಿಲಂಗಳು ಜನತೆಯ ಮನರಂಜನೆಗೆ ಬಹಳ ಅವಶ್ಯಕವೆಂದು ಸಮರ್ಥನೆ ಮಾಡಿ ಮಾನ್ಯ ಕೆಂಪರಾಜ್ ಅರಸ್‌ರವರಿಗೆ ಸಹಾಯ ಮಾಡಿದ್ದೀರಿ. ಆದರೆ ಫಿಲಂ ಪ್ರೊಡ್ಯೂಸರ್ಸ್ ಡೆವಲಪ್‌ಮೆಂಟ್ ಬಗ್ಗೆ ವಿವರಣೆ ನೀಡಿಲ್ಲ. ಅದು ಎಲ್ಲಿ ಮುಳುಗಿತೆಂಬುದನ್ನು ಹೇಳಲಿಲ್ಲ. ನಾನು ಈ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅದರದ್ದೇ ಒಂದು ಇತಿಹಾಸ ಇದೆ. ಮಾನ್ಯ ಕೆಂಪರಾಜ್ ಅರಸ್‌ರವರಿಗಿಂತ ಉತ್ತಮವಾಗಿ ಕೆಲಸ ಮಾಡತಕ್ಕವರು ರಾಜ್ಯದಲ್ಲಿ ಇಲ್ಲ ಎಂದು ತಿಳಿದುಕೊಳ್ಳಬಾರದು. ರಾಷ್ಟ್ರ ಮಟ್ಟದಲ್ಲಿ ಉನ್ನತವಾದ ಸ್ಥಾನವನ್ನು ಪಡೆದಂತಹ ವ್ಯಕ್ತಿಗಳಿದ್ದಾರೆ. ಮಾನ್ಯ ದೇವರಾಜ್ ಅರಸ್‌ರವರು ಮುಖ್ಯಮಂತ್ರಿಗಳಾಗುವುದಕ್ಕೆ ಮುಂಚೆ ಮಾನ್ಯ ಕೆಂಪರಾಜ್ ಅರಸ್‌ರವರು ಎಲ್ಲಿದ್ದರು? ಅವರ ಬೆಂಬಲ ಇಲ್ಲದಿದ್ದರೆ ಎಲ್ಲಿ ಬರುತ್ತಿದ್ದರು? ಆದುದರಿಂದ ಈ ರೀತಿಯಾಗಿ ಇದು ನಮಗೆ ಗೊತ್ತಾಗುವುದಿಲ್ಲ, ದೇಶದ ಜನತೆಗೆ ಗೊತ್ತಾಗುವುದಿಲ್ಲವೆಂದು ಹೇಳುವುದು ಬೇಡ. ಇಂಥ ವಿಷಯಗಳನ್ನು ಇನ್ನು ಮೇಲಾದರೂ ನಿಲ್ಲಿಸಿ ಯೋಗ್ಯವಾದ ಆಡಳಿತವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಬೇಕೆಂದು ತಿಳಿಸಬಯಸುತ್ತೇನೆ.

(ಉತ್ತರ ಇಲ್ಲ)

MOTION OF THANKS TO GOVERNOR'S ADDRESS

SRI B. BASAVALINGAPPA (Uttarahalli).—Madam Speaker, I beg to move:

"That we the Members of the Karnataka Legislative Assembly assembled in this Session, beg leave to thank Governor for the Address delivered to the Members of the Legislature on 25th March, 1977".

SMT. SUMATI B. MADIMAN (Dharwar).—Madam Speaker, I second the Motion of Thanks to the Governor's Address moved by hon. — Member Sri B. Basavalingappa.

MADAM SPEAKER.—Motion Moved:

'That we the members of the Karnataka Legislative Assembly assembled in this Session, beg leave to thank the Governor for the Address delivered to the Members of the Legislature on 25th March 1977.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸಭಾಧ್ಯಕ್ಷಿಣಿಯವರೇ, ಲೋಕಸಭೆಯ ಚುನಾವಣೆ ನಂತರ ಈ ಸಭೆ ಸೇರಿರತಕ್ಕದ್ದು ಬಹಳ ವೈಶಿಷ್ಟ್ಯವಾದುದು. ಈ ಚುನಾವಣೆಯಲ್ಲಿ, 30 ವರ್ಷಗಳಿಂದ ಸತತವಾಗಿ ಆಡಳಿತ ನಡೆಸಿದ್ದ ಕಾಂಗ್ರೆಸ್ ಸರ್ಕಾರ ಬದಲಾಗಿ ಜನತಾ ಸರ್ಕಾರ ಕೇಂದ್ರದಲ್ಲಿ ಬಂದಿದೆ. ಕೆಲವು ರಾಜಕೀಯ ಪಕ್ಷಗಳು ಜನತಾ ಪಕ್ಷ ಎಂಬ ಹೆಸರಿನಲ್ಲಿ ಸೇರಿಕೊಂಡು ಒಂದು ಹೊಸ ಪ್ರಚಾರನೇ ಪ್ರಾರಂಭ ಮಾಡಿವೆ. ಈ ಚುನಾವಣೆಯಲ್ಲಿ ನಮಗೆ ತಿಳಿದಿರತಕ್ಕದ್ದು ಬಹಳವಾಗಿದೆ, ಮತ್ತು ಬಹಳ ಮಹತ್ವರವಾದ ಘಟನೆಗಳು ನಡೆದಿವೆ. ಇದುವರೆಗೆ ಈ ದೇಶದಲ್ಲಿ ಏನು ಒಂದು ರೀತಿಯ ಜಾತಿಗಳ ಸಂಘರ್ಷಣೆ ಇತ್ತು. ಅದು ಈ ಚುನಾವಣೆ ಕಾಲದಲ್ಲಿ ಒಂದು ವರ್ಗ ಸಂಘರ್ಷಣೆ ಆಗಿದ್ದು ಒಂದು ಇತಿಹಾಸ ಘಟನೆ. ಇದನ್ನು ಮಾನ್ಯ ಸದಸ್ಯರುಗಳೆಲ್ಲರೂ ಒಪ್ಪುತ್ತಾರೆಂದು ಹೇಳುತ್ತಿದ್ದೇನೆ. ಇದನ್ನು ನನ್ನ ಜೀವನದಲ್ಲಿ ಒಂದು ಪ್ರಯೋಗವನ್ನು ಮಾಡಲಿಕ್ಕೆ ಪ್ರಾರಂಭ ಮಾಡಿದೆ. ಆದರೆ ನಾನು ಅದಕ್ಕೆ ಬಲಿಯಾಗಿಲ್ಲ ಮತ್ತು ಆಗುವುದೂ ಇಲ್ಲ. ಮಂತ್ರಿ ಪದವಿಯಲ್ಲಿದ್ದಾಗ ಬಹಳ ಪ್ರಾಶಸ್ತ್ಯ ಸಿಕ್ಕಿತ್ತು; ಮಂತ್ರಿ ಪದವಿಯಿಂದ ಹೊರಟು ಹೋದ ಮೇಲೆ ಆ ಪ್ರಾಶಸ್ತ್ಯ ದೊರೆಯಲಿಲ್ಲ ಎಂಬುದನ್ನು ನಾನು ಒಪ್ಪುವುದಿಲ್ಲ. ನಾನು ಏನು ಒಂದು ಪ್ರಯತ್ನ ಮಾಡಿದೆನೆಂದರೆ, ಈ ದೇಶದ ಬಡತನ ಬಯಲಾಗಬೇಕಾದರೆ, ಸಮಾಜ ಬದಲಾಗಬೇಕಾದರೆ ಜನಗಳ ಮನಸ್ಸು ಬದಲಾವಣೆಯಾಗಬೇಕೆಂದು ಒಂದು ಪ್ರಯೋಗವನ್ನು ಮಾಡಿದೆ. ಅದಕ್ಕೆ ಪ್ರತಿಯಾಗಿ ಜನರು ಏನು ಪ್ರತಿಕ್ರಿಯೆ ತೋರಿಸಿದರು ಎಂಬುದು ನಮ್ಮ ಮುಂದೆ ಇದೆ, ಮತ್ತು ಎಲ್ಲರಿಗೂ ಗೊತ್ತಿದೆ. ಆದರೆ ಈ ಚುನಾವಣೆಯಲ್ಲಿ ಮಾನಸಿಕ ಬದಲಾವಣೆಯಾಗಿರುವುದು ನಮಗೆ ಸ್ವಾಗತಾರ್ಹವಾದುದು. ಯಾರು ಬಡವರ್ಗದವರಿದ್ದರೋ, ಯಾರು ಕೀಳು ಜನರೆಂದು ಪರಿಗಣಿಸಲ್ಪಟ್ಟಿದ್ದರೋ, ಮತ್ತು ಯಾರು ದೇಶದ ಸಂಪತ್ತನ್ನು ಅಭಿವೃದ್ಧಿಪಡಿಸುತ್ತಿದ್ದರೋ ಅಂಥ ಜನರಿಗೆ ಒಂದು ಹುಮ್ಮಸ್ಸು ಬಂದಿದೆ.

ಈಗ ಬಲ್ಲಿದರ ವಿರುದ್ಧ ಹೋರಾಟ ಮಾಡತಕ್ಕಂಥಾ ಮನಸ್ಸು ಬಂದಿದೆ. ಈ ದೆಸೆಯಲ್ಲಿ ಯಶಸ್ಸನ್ನು ಗಳಿಸಬೇಕೆನ್ನುವ ಬಗ್ಗೆ ನಾನು ಧೃಡ ಸಂಕಲ್ಪ ಮಾಡಿದ್ದೇನೆ. ಇದು ಒಂದು ಒಳ್ಳೆಯ ಪ್ರತಿಕ್ರಿಯೆ ಅನ್ನುವುದು ವ್ಯಕ್ತವಾಗಿದೆ. ಆದರೆ ನಾವು ಅದನ್ನು ಕಾದು ನೋಡಬೇಕು. ದೇಶದಲ್ಲಿ ಹಲವಾರು ರಾಜಕೀಯ ಪಕ್ಷದವರು ಸೇರಿಕೊಂಡು ಸರ್ಕಾರ ನಡೆಸತಕ್ಕಂಥಾದ್ದು ಪ್ರಾರಂಭವಾಗಿದೆ. ಆದರೆ ಅದು ಯಾವ ರೀತಿ ಯಶಸ್ವಿಯಾಗುತ್ತದೆ ಅನ್ನುವುದನ್ನು ಕಾದು ನೋಡಬೇಕಾಗಿದೆ. ಈ ಚುನಾವಣೆಯಲ್ಲಿ ಜನ ಹಲವಾರು ವಿಷಯಗಳ ಬಗ್ಗೆ ತೀರ್ಪು ಕೊಟ್ಟಿದ್ದಾರೆ. ನನ್ನ ದೃಷ್ಟಿಯಲ್ಲಿ ಕೇಂದ್ರ ಸರ್ಕಾರದಲ್ಲಿ ಬದಲಾವಣೆಯಾಗಲಿಕ್ಕೆ ಕಾರಣ ಏನು ಎಂದರೆ ಮುಖ್ಯವಾಗಿ ಇರತಕ್ಕಂಥಾದ್ದು ಒಂದನೆಯದು ತುರ್ತು ಪರಿಸ್ಥಿತಿ ಎರಡನೇದು ಮಿತ ಸಂತಾನ ಯೋಜನೆ. ಈ ಎರಡು ಕಾರಣಗಳಿಂದಾಗಿ ಜನರು ಚುನಾವಣೆಯಲ್ಲಿ ತೀರ್ಪು ಕೊಟ್ಟಿದ್ದಾರೆ. ಈಗ ದೇಶದಲ್ಲಿ ಜನತಾ ಪಾರ್ಟಿಯ ಆಶ್ರಯದಲ್ಲಿ ಕೇಂದ್ರ ಸರ್ಕಾರ ಅಧಿಕಾರಕ್ಕೆ ಬಂದಿದೆ. ನಾವು ಅದರ ಪ್ರಯೋಗವನ್ನು ಕಾದು ನೋಡೋಣ. ಅವರು ಯಾವರೀತಿ ಯಶಸ್ವಿ ಗಳಿಸುತ್ತಾರೆ ಅನ್ನುವುದನ್ನು ಕಾದು ನೋಡಬೇಕಾಗಿದೆ. ನನ್ನ ಅನುಭವದಲ್ಲಿ ಹೇಳಬೇಕಾದರೆ ಪ್ರಪಂಚದಲ್ಲಿ ಎಲ್ಲೂ ಕೂಡ ಈ ತರಹ ಸರ್ಕಾರ ಬಹಳ ದಿವಸ ಯಶಸ್ವಿಯಾಗಿ ರಾಜ್ಯಾಡಳಿತ ಮಾಡಿರುವುದು ನನ್ನ ಅನುಭವಕ್ಕೆ ಬಂದಿಲ್ಲ. ಆದರೆ ಈ ದೇಶದಲ್ಲಿ ಇಂಥ ಕೇಂದ್ರ ಸರ್ಕಾರ ಯಶಸ್ವಿ ಆಗುವುದಾದರೆ ನಾನಂತೂ ಬಹಳ ಸ್ವಾಗತ ಮಾಡುತ್ತೇನೆ, ಆದರೆ ಅದನ್ನು ಕಾದು ನೋಡಬೇಕಾಗಿದೆ. ಜನಗಳ

ಸೇವೆ, ಜನಗಳ ಮನಸ್ಸನ್ನು ಒಲಿಸಿಕೊಂಡು ಕೆಲಸ ಮಾಡಲಿ ಎಂದು ಜನ ಅದನ್ನು ಸ್ವಾಗತ ಮಾಡಿದ್ದಾರೆ. ನಾನೂ ಸ್ವಾಗತ ಮಾಡುತ್ತೇನೆ. ಅದರಲ್ಲೂ ಈ ಪ್ರಜಾಪ್ರಭುತ್ವದಲ್ಲಿ ಜನಗಳ ತೀರ್ಪನ್ನು ಯಾರಾದರೂ ಆಗಲಿ ಒಪ್ಪಿಕೊಳ್ಳಲೇ ಬೇಕು. ಆದರೆ ಆ ಬಗ್ಗೆ ಯಾವರೀತಿ ತೀರ್ಪು ಬರುತ್ತದೆ ಅದನ್ನು ಕಾದು ನೋಡಬೇಕಾಗುತ್ತದೆ. ಅವರು ಯಾವರೀತಿ ತೀರ್ಪು ಕೊಡುತ್ತಾರೆ ಅದಕ್ಕೆ ತಕ್ಕಂತೆ ನಾವು ನಡೆಯ ಬೇಕಾಗುತ್ತದೆ. ಜನಗಳ ಒಂದು ತೀರ್ಪಿನಂತೆ ಕೆಲಸ ಮಾಡುತ್ತಾ ಹೋದರೆ ಅದು ಎಲ್ಲರಿಗೂ ಒಳ್ಳೆಯದು. ವಿರೋಧ ಪಕ್ಷದವರಿಗೂ ಒಳ್ಳೆಯದು, ನನಗಂತೂ ಬಹಳ ಸಮಾಧಾನ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನು ಕರ್ನಾಟಕ ಸರ್ಕಾರದ ಬಗ್ಗೆ ಹೇಳುವುದಾದರೆ ನಾವು ಏನೇನು ಸಾಧನೆ ಮಾಡಿದ್ದೇವೆ ಎಂಬುದರ ಬಗ್ಗೆ ಹೇಳುವುದಾದರೆ, ಮಾಡಿರುವ ಕೆಲಸಕ್ಕೆ ಜನಗಳು ಮೆಚ್ಚಿಕೊಂಡು ಈಗ ತಾನೆ ನಡೆದಿರುವ ಲೋಕ ಸಭೆಯ ಚುನಾವಣೆಯಲ್ಲಿ ತೀರ್ಪು ಕೊಟ್ಟಿದ್ದಾರೆ. ಶ್ರೀಮಾನ್ ದೇವರಾಜ್ ಅರಸ್‌ರವರ ನೇತೃತ್ವದಲ್ಲಿ ನಡೆಯುತ್ತಿರುವ ಸರ್ಕಾರ ಏನು ಸಾಧನೆ ಮಾಡಿದ್ದಾರೆ ಅನ್ನುವುದನ್ನು ಜನ ಒಪ್ಪಿದ್ದಾರೆ. ಇದಕ್ಕೆ ಲೋಕಸಭಾ ಚುನಾವಣೆಯೇ ಸಾಕ್ಷಿ. ಈ ಬಗ್ಗೆ ಕರ್ನಾಟಕದ ಜನ ಬಹಳವಾಗಿ ಒಪ್ಪಿಕೊಂಡಿದ್ದಾರೆ ಅನ್ನುವುದನ್ನು ಹೇಳುತ್ತೇನೆ. ಅದಕ್ಕೋಸ್ಕರ ವಾಗಿಯೇ ಕರ್ನಾಟಕದಲ್ಲಿರುವ 28 ಲೋಕಸಭಾ ಕ್ಷೇತ್ರದ ಚುನಾವಣೆಗೆ 26 ಜನರನ್ನು ಜನರೇ ಆರಿಸಿ ಕಳುಹಿಸಿ ಕೊಟ್ಟಿದ್ದಾರೆ. ಈ ಬಗ್ಗೆ ನಮ್ಮ ಸರ್ಕಾರದವರು ಮಾಡಿರತಕ್ಕಂಥಾ ಕೆಲಸ ಕಾರ್ಯಗಳು ಎಷ್ಟರಮಟ್ಟಿಗೆ ಸಾಧಿಸಲ್ಪಟ್ಟಿವೇ ಅನ್ನುವುದನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಮುಂದೆ ಇನ್ನೇನು ಸಾಧನೆ ಮಾಡಬೇಕು ಅನ್ನುವುದನ್ನೂ ಸಹ ಹೇಳಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಇದನ್ನು ಒಪ್ಪಿಕೊಂಡಿದ್ದೀರಾ?

ಶ್ರೀ ಬಿ. ಬಸವಲಿಂಗಪ್ಪ.—ನಾವೂ ಕೂಡ ಸರ್ಕಾರದವರು ಮಾಡಿರುವ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಬಹಳವಾಗಿ ಒಪ್ಪಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಈ ರೀತಿ ಪ್ರಗತಿಪರ ಕಾರ್ಯಕ್ರಮಗಳನ್ನು ನೀವು ಮಾಡುತ್ತಾ ಇದ್ದ ಮೇಲೆ ನಿಮ್ಮನ್ನು ಏತಕ್ಕೆ ತೆಗೆದು ಹಾಕಿದ್ದು?

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಸದಸ್ಯರಿಗೆ ಹೇಳುವುದಾದರೆ ನನ್ನನ್ನು ಯಾರೂ ಕೂಡ ರಾಜೀನಾಮೆ ಕೊಡಿ ಎಂದು ಕೇಳಲಿಲ್ಲಾ. ನಾನೇ ಸ್ವತಃ ರಾಜೀನಾಮೆ ಕೊಟ್ಟಿದ್ದೇನೆ. ಇದು ಸ್ಪಷ್ಟವಾದ ವಿಚಾರ. ಆ ಕಾಲಕ್ಕೆ ಆಗಿರತಕ್ಕಂಥ ಸಂಧಿಗ್ಧ ಸ್ಥಿತಿ ತಮಗೆಲ್ಲಾ ಗೊತ್ತು. ಈ ವಿಚಾರವನ್ನು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ನನ್ನನ್ನು ಯಾವ ಮಂತ್ರಿಗಳೇ ಆಗಲಿ ಬಸವಲಿಂಗಪ್ಪನವರೇ ರಾಜೀನಾಮೆ ಕೊಡಿ ಎಂದು ಹೇಳಲಿಲ್ಲಾ. ನಾನೇ ನಾನಾಗಿ ರಾಜೀನಾಮೆ ಕೊಟ್ಟೆ. ನಾನು ಆ ಕಾಲಕ್ಕೆ ಅಂದರೆ 3 ವರ್ಷದ ಹಿಂದೆ ಜನಗಳ ಮನಸ್ಸನ್ನು ಬದಲಾವಣೆ ಏನು ಮಾಡಬೇಕು ಎಂದು ಪ್ರಾರಂಭ ಮಾಡಿದೆನೋ ಆ ಸಂದರ್ಭದಲ್ಲಿ ಕೆಲವರಿಗೆ ಅದು ಸರಿಯಿಲ್ಲ ಎಂದು ಅನಿಸಿತು. ಈಗ ಅದು ರಿಪೇರಿ ಆಗಿದೆ. ಆ ಕಾಲಕ್ಕೆ ಕನ್ನಡ ಸಾಹಿತ್ಯವನ್ನು ಬೂಸಾ ಎಂದು ಕರೆದಾಗ ಕನ್ನಡ ಭಾಷೆಯನ್ನು ಬೂಸಾ ಅಂತ ಕರೆದರು ಅಂತ ಪತ್ರಿಕೆಗಳಲ್ಲಿ ಟೀಕಟಿಪ್ಪಣಿಗಳು ಬಂತು. 3 ವರ್ಷದ ನಂತರ ಇದೇ ಕನ್ನಡ ಸಾಹಿತಿಗಳು ಶ್ರೀ ಬಸವಲಿಂಗಪ್ಪನವರು ಹೇಳಿದ್ದು ಸರಿ. ಅಂಥ ಸಾಹಿತ್ಯವನ್ನು ಮುಂದುವರಿಸಿಕೊಂಡು ಹೋಗಬಾರದು ಅನ್ನುವ ಹಾದಿಯಲ್ಲಿ ಅವರೇ ತರ್ಕ ಮಾಡಿದ್ದಾರೆ. 6 ತಿಂಗಳಾದ ನಂತರ ಬೂಸಾ ಅನ್ನುವುದು ಕನ್ನಡ ಸಾಹಿತ್ಯದಲ್ಲಿ ಇದೆ ಅನ್ನುವುದನ್ನು ಕನ್ನಡ ಸಾಹಿತಿಗಳೇ ಒಪ್ಪಿದ್ದಾರೆ. ಇವರಿಗೆ ನಾನು ಹೇಳಿದ್ದು ಸರಿಯೆಂದು ತಿಳಿಯಬೇಕಾದರೆ ಮೂರು ವರ್ಷ ಬೇಕಾಯಿತು. ಈ ದೇಶದಲ್ಲಿ ನಿಜ ಹೇಳಿದರೆ, ಅದು ಅರ್ಥವಾಗಬೇಕಾದರೆ, ಅದರ ಬಗ್ಗೆ ನಿಜವಾಗಿ ತಿಳಿದು ಕೊಳ್ಳಬೇಕಾದರೆ 3 ವರ್ಷವಾಗುತ್ತದೆ ಅಂತ ಇದರಿಂದ ನನಗೆ ಅನಿಸುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನೀವು ಇದರಿಂದ ರಿಪೇರಿ ಆದರಲ್ಲಾ.

ಶ್ರೀ ಬಿ. ಬಸವಲಿಂಗಪ್ಪ.—ನೀವು ರಿಪೇರಿ ಆಗಿದ್ದೀರಿ, ನಾನೇನು ರಿಪೇರಿ ಆಗಲಿಲ್ಲಾ ನಾನು ಇದ್ದ ಹಾಗೆಯೇ ಇದ್ದೇನೆ. ಏನಾದರೂ ವಿಷಯ ಹೇಳಿದರೆ ಯಾರು ಸಹ ಸರಿಯಾಗಿ ವಿಚಾರ ಮಾಡುವುದಿಲ್ಲ

ಇನ್ನು ನಾನು ಈಗ ಎದ್ದು ನಿಂತಿರುವುದು ಮಾನ್ಯ ರಾಜಪಾಲರ ಭಾಷಣವನ್ನು ಅನುಮೋದಿಸುವುದಕ್ಕೆ ಎದ್ದು ನಿಂತಿದ್ದೇನೆ. ನಾನು ಮಂತ್ರಿಯಾಗಿ ಇರಲಿ ಇಲ್ಲದೇ ಇರಲಿ ಇದ್ದವರು ಜನಗಳ ಮನಸ್ಸಿನಲ್ಲಿ ಏನು ಆಶೆ ಆಕಾಂಕ್ಷೆಗಳು ಇವೆ ಅನ್ನುವುದನ್ನು ಮುಖ್ಯವಾಗಿ ತಿಳಿದುಕೊಂಡು ಅವರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ಮಾಡಬೇಕು. ಒಂದು ವಿಷಯವಂತೂ ಸ್ಪಷ್ಟ. ಈ ಸರ್ಕಾರ ದೇಶದಲ್ಲಿ ಪ್ರಗತಿಪರವಾದ ಕಾರ್ಯಕ್ರಮಗಳಲ್ಲಿ ಚೆನ್ನಾಗಿ ಕೆಲಸ ಮಾಡಿದ್ದಾರೆ, ತೃಪ್ತಿಕರವಾಗಿ ಕೆಲಸ ಮಾಡಿದ್ದಾರೆ, ಮತ್ತು ಕೆಲಸ ಮಾಡುತ್ತಲೂ ಇದ್ದಾರೆ, ಆದುದರಿಂದ ಜನಗಳು ಬೇರೆ ಯಾವ ಪಕ್ಷಕ್ಕೂ ಮಾನ್ಯತೆ ಕೊಡದೆ ನಮ್ಮ ಪಕ್ಷಕ್ಕೆ ಮಾನ್ಯತೆ ಕೊಟ್ಟು ಜಯಭೇರಿ ಹೊಡೆಸಿದ್ದಾರೆ. ಇದರಿಂದಲೇ ನಮಗೆ ಗೊತ್ತಾಗುತ್ತದೆ ಕಾಂಗ್ರೆಸ್ ಪಕ್ಷ ಒಳ್ಳೆಯ ಕೆಲಸ ಮಾಡುತ್ತಿದ್ದೇವೆ ಅಂತ, ಸರ್ಕಾರವೂ ಕೂಡ ಕೆಲಸ ಚೆನ್ನಾಗಿ ಮಾಡುತ್ತಾ ಇದೆ ಅನ್ನುವುದು ಇದರಿಂದ ಸ್ಪಷ್ಟಪಡುತ್ತದೆ. ನಮ್ಮ ಉದ್ದೇಶವಾದರೂ ಇಷ್ಟೆ, ಮುಂದೆ ಈ ದೇಶದ ಪ್ರಗತಿಯಾಗಬೇಕಾದರೆ ಜನಗಳ ಏಳಿಗೆಯಾಗಬೇಕು. ಏಳಿಗೆಯನ್ನು ಸಾಧಿಸಬೇಕಾದರೆ ಸರ್ಕಾರದವರು ಪ್ರಯತ್ನ ಮಾಡಬೇಕು ಈ ದಿಶೆಯಲ್ಲಿ ನೋಡುವುದಾದರೆ ಮೊನ್ನೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಅಪೂರ್ವ ಯಶಸ್ಸು. ಈ ಜನಗಳು ನಮ್ಮನ್ನು ಒಪ್ಪಲಿಕ್ಕೆ ಕಾರಣ ನಾವು ಮಾಡಿರುವಂಥಾ ಕೆಲಸದಿಂದ. ತಮಗೆ ಇನ್ನೊಂದು ವಿಷಯವನ್ನು ಹೇಳಬೇಕಾದರೆ, ಈ ಮಂತ್ರಿಮಂಡಲದಲ್ಲಿ ಹಿಂದುಳಿದ ವರ್ಗದವರಿಗೆ ಮತ್ತು ದುರ್ಬಲವರ್ಗದವರಿಗೆ ಜಾಸ್ತಿ ಪ್ರಾತಿನಿಧ್ಯ ಕೊಟ್ಟಿದ್ದಾರೆ ಎಂದು ಹೇಳುತ್ತೇನೆ. ಯಾರು ಹಿಂದುಳಿದ ವರ್ಗದವರು ಇದ್ದಾರೆ, ಯಾರು ಯಾರು ದುರ್ಬಲವರ್ಗದವರು ಇದ್ದಾರೆ ಅವರೇ ಆ ಸ್ಥಾನದಲ್ಲಿ ಕೆಲಸ ಮಾಡುವುದಕ್ಕೆ ಅನುಕೂಲ ಮಾಡಿಕೊಡಲಾಗಿದೆ, ಇದನ್ನು ವಿರೋಧ ಪಕ್ಷದವರು ಒಪ್ಪಿಕೊಳ್ಳುತ್ತಾರೆ ಎಂದು ನಾನು ಭಾವಿಸುತ್ತೇನೆ. ಇನ್ನೂ ಕೆಲವು ರಾಜ್ಯಗಳಲ್ಲಿ ಕೆಲವು ಜನಗಳ ಅಭಿಪ್ರಾಯಗಳು ಬೇರೆ ಉಂಟು. ಯಾರು ದುರ್ಬಲವರ್ಗದವರು ಇರುತ್ತಾರೋ, ಯಾರು ಹಿಂದುಳಿದ ವರ್ಗದವರು ಇರುತ್ತಾರೋ, ಅವರು ಕ್ರಿಶ್ಚಿಯನ್ನರೇ ಆಗಿರಲಿ, ಮುಸಲ್ಮಾನರೇ ಆಗಿರಲಿ ಪರಂಪರೆಯಾಗಿ ಅಧಿಕಾರವನ್ನು ಅನುಭವಿಸಿಕೊಂಡು ಬಂದ ಬೇರೆ ಜನರು ಆ ಜನಗಳ ಪರವಾಗಿ ಕೆಲಸ ಮಾಡಬೇಕು ಅನ್ನುವ ಅಭಿಪ್ರಾಯವೂ ಉಂಟು. ಅವರಿಗೆ ನೇರ ಪ್ರಾತಿನಿಧ್ಯ ಕೊಟ್ಟರೆ ಈ ಒಂದು ಅಧಿಕಾರ ಅವರಿಗೆ ಕೊಟ್ಟರೆ ಆ ಜನಗಳ ಕಲ್ಯಾಣ ಮತ್ತು ಅವರ ಪ್ರಗತಿ ಅವರೇ ಮಾಡಿಕೊಳ್ಳುವ ಅವಕಾಶ ಸಿಗಬೇಕಾಗುತ್ತೆ. ಕೇಂದ್ರ ಸರ್ಕಾರದವರೇ ಆಗಲಿ, ರಾಜ್ಯ ಸರ್ಕಾರದವರೇ ಆಗಲಿ ಹಿಂದುಳಿದ ವರ್ಗದವರ ಮತ್ತು ದುರ್ಬಲವರ್ಗದವರ ಕಲ್ಯಾಣ ಆಗಬೇಕಾದರೆ, ಅವರಿಗೆ ಅನುಕೂಲವಾಗಬೇಕಾದರೆ ಸ್ಪಷ್ಟವಾಗಿ ಒಂದು ವಿಷಯವನ್ನು ಅವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಯಾರು ದುರ್ಬಲವರ್ಗದವರು ಇರುತ್ತಾರೆ ಅಂಥಾವರಿಗೇನೇ ಅಧಿಕಾರ ಕೊಟ್ಟರೆ ಆ ಜನರ ಕಲ್ಯಾಣವಾಗಬಹುದೇ ವಿನಾ ಬೇರೆಯವರ ಯಜಮಾನಿಕೆಯಿಂದ ಖಂಡಿತ ಆಗುವುದಿಲ್ಲ. ಒಬ್ಬರ ಪರವಾಗಿ ಯಜಮಾನಿಕೆಯನ್ನು ಇನ್ನೊಬ್ಬರು ಮಾಡಬಾರದು ಅನ್ನುವ ಕಾಲ ಬರುತ್ತದೆ. ನಿಮ್ಮ ಯಜಮಾನಿಕೆ ನಮ್ಮ ಮೇಲೆ ಬೇಡ ಅನ್ನುವ ಕಾಲ ಬರುತ್ತದೆ. ನಿಮ್ಮ ಪರವಾಗಿ ನಾವು ಇರುತ್ತೇವೆ ಎಂದು ಹೇಳುವಂಥಾ ಕಾಲ ಅದು ಬಹಳ ಹಿಂದಿನ ಕಾಲವಾಯಿತು. ಈವೊತ್ತು ಜನ ಬಹಳ ಎಚ್ಚೆತ್ತಿದ್ದಾರೆ. ಈವೊತ್ತಿನ ದಿವಸ ಜನ ಕಣ್ಣುಮುಚ್ಚಿಕೊಂಡು ಕೂತಿಲ್ಲಾ, ಕಿವಿ ಮುಚ್ಚಿಕೊಂಡು ಕೂತಿಲ್ಲಾ. ನಮ್ಮ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಜನತೆಯು ಒಂದು ಮಾನ್ಯತೆ ಸಿಕ್ಕಿರುವುದರಿಂದ ನಮ್ಮ ಕಾಂಗ್ರೆಸ್ ಸರ್ಕಾರವನ್ನು ನೀವು ಬದಲಾವಣೆ ಮಾಡುವುದಕ್ಕಾಗುವುದಿಲ್ಲವೆಂದು ನಾನು ತಮಗೆ ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಮೊನ್ನೆ ನಡೆದ ಲೋಕಸಭೆಯ ಚುನಾವಣೆಯಲ್ಲಿ ಜನತೆಯು ಒಂದು ವಿಶ್ವಾಸ, ಪ್ರೀತಿ ಮತ್ತು ಬೆಂಬಲ ಕಾಂಗ್ರೆಸ್ ಸರ್ಕಾರದ ಮೇಲಿದೆ ಎಂಬುದು ತೀರ್ಮಾನವಾಗಿದೆ. ಉತ್ತರ ಪ್ರದೇಶದಲ್ಲಿ ಎಲ್ಲ ಲೋಕಸಭಾ ಸದಸ್ಯರು ತಮ್ಮವರೇ ಆಯ್ಕೆಯಾಗಿರುವುದರಿಂದ ಸರ್ಕಾರ ನಡೆಸಲು ನಮಗೆ ಹಕ್ಕಿಲ್ಲವೆಂದು ತಾವು ಏನು ಹೇಳುತ್ತಿದ್ದೀರಿ ಅದು ಅಸೆಂಬ್ಲಿ ಸದಸ್ಯರಿಗೆ ಅನ್ವಯವಾಗುವುದಿಲ್ಲ. ಏಕೆಂದರೆ ಅವರು ಅಸೆಂಬ್ಲಿ ಮೆಂಬರುಗಳನ್ನು ವಾಪಸ್ ಕರೆಸಿಕೊಂಡಿಲ್ಲ. ನಾವು ಜನರ ಮನ್ನಣೆ ಪಡೆದು ಇಲ್ಲಿಗೆ ಬಂದಿದ್ದೇವೆ. ಇವೊತ್ತಲ್ಲ ನಾಳೆ, ನಾಳೆಯಲ್ಲ ನಾಡಿದ್ದು ಈ ಅಸೆಂಬ್ಲಿಯ ಚುನಾವಣೆಯು ಸಹ ನಡೆಯುತ್ತದೆ. ಆಗ ಜನರ ಒಂದು ಒಲವು ಯಾರ ಕಡೆಗಿದೆ ಎಂಬುದರ ಅರಿವು ತಮಗಾಗುತ್ತದೆ. ಈಗ ಕೇಂದ್ರದಲ್ಲಿ ಮಂತ್ರಿಗಳಾಗಿ ಯಾರು ಯಾರನ್ನು ನೇಮಕ ಮಾಡಿದ್ದೀರಿ.

ಎಂಬುದು ನಮಗೆಲ್ಲರಿಗೂ ತಿಳಿದಿದೆ. ಅವರುಗಳ ಪೈಕಿ ಒಬ್ಬರನ್ನು ಮಾತ್ರ ಬಡವರ ಪರವಾಗಿ ನೇಮಕ ಮಾಡಿದ್ದೀರಿ. ಅವರೊಬ್ಬರಿಂದ ಎಲ್ಲ ದುರ್ಬಲ ವರ್ಗದವರ ರಕ್ಷಣೆಯಾಗುತ್ತದೆಂದು ನೀವುಗಳು ತಿಳಿದುಕೊಂಡಿದ್ದರೆ ಅದು ಕನಸಿನ ಮಾತಾಗುತ್ತದೆ. ಏಕೆಂದರೆ ಇದು ಕೇವಲ ಸ್ಯಾಂಪಲ್ ರೆಪ್ರೆಸೆಂಟೇಷನ್ ಆಗಿದೆ. ಅವರಿಂದ ಬಡವರ ಕಲ್ಯಾಣವಾಗುತ್ತದೆಂದು ತಾವು ತಿಳಿದಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರಿಂದ ಆಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ನನ್ನಿಂದ ಆಗುತ್ತದೆಂದು ನಾನು ಹೇಳಲಿಲ್ಲ. ಆದರೆ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಮಾಡಿರತಕ್ಕಂಥ ಕೆಲಸ ಕಾರ್ಯಗಳು ಏನೇನು ಇವೆ, ಅವುಗಳಿಗೆಲ್ಲಾ ಮೊನ್ನೆಯ ಚುನಾವಣೆಯಲ್ಲಿ ಮಾನ್ಯತೆ ಸಿಕ್ಕಿದೆ. ಈ ಮಾತನ್ನು ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ. ಇವೊತ್ತು, ನಾಳೆ, ನಾಡಿದ್ದು, ಈ ಕಾಂಗ್ರೆಸ್ ಸರ್ಕಾರ ಶಕ್ತಿಯುತವಾಗಿ ನಡೆಯುವಂತಹ ಒಂದು ಶಕ್ತಿಯನ್ನು ನಾವು ಸಂಪಾದನೆ ಮಾಡಿದ್ದೇವೆ. ಈ ಮೊದಲು ಪ್ರಧಾನಮಂತ್ರಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದರು. ಅದನ್ನು ಜಾರಿಗೆ ತಂದಾಗ ಕೆಲವರು ಇದು ಕೇವಲ ನಟನೆ ಎಂದು ಟೀಕೆ ಮಾಡಿದರು. ಆದರೆ ನನ್ನ ದೃಷ್ಟಿಯಲ್ಲಿ ಹೇಳಬೇಕೆಂದರೆ, ಮಧ್ಯಮ ವರ್ಗದವರ, ಮತ್ತು ಬಡವರ ಏಳಿಗೆಗಾಗಿ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಶ್ರೀಮತಿ ಇಂದಿರಾಗಾಂಧಿಯವರು ಯೋಚನೆ ಮಾಡಿ ಜಾರಿಗೆ ತೆಗೆದುಕೊಂಡು ಬಂದರೆಂಬುದು ನನ್ನ ಸ್ಪಷ್ಟವಾದ ಅಭಿಪ್ರಾಯವಾಗಿದೆ. ಈ ದೇಶದಲ್ಲಿ ಯಾರು ಯಾರು ಸಮಾಜವಾದದ ಮೇಲೆ ಭಾಷಣ ಮಾಡುತ್ತಿದ್ದರು, ಸಮಾಜವಾದ ಹಾಗಿರಬೇಕು, ಹೀಗಿರಬೇಕೆಂದು ಭಾಷಣ ಮಾಡಿದ್ದಾರೆ. ಇಂಥ ಸಮಾಜವಾದ ಭಾಷಣಗಳು ಆದೇ ರಾಶಿಯನ್ನು ಅಳೆಯುವ ಮತ್ತು ಸುರಿಯುವ ಕೆಲಸ ಮಾಡುತ್ತಿರುವಹಾಗೆ ಇವೆ. ಸಮಾಜವಾದ ಏನೆಂಬುದು ಸ್ಪಷ್ಟವಾಗಿರಬೇಕೆಂದುಕೊಂಡು ಶ್ರೀಮತಿ ಇಂದಿರಾಗಾಂಧಿಯವರು ಮೊದಲು ಯೋಚನೆ ಮಾಡಿ ಸಮಾಜವಾದ ಹೀಗೀಗೆಯೇ ಇರಬೇಕೆಂದು ಸ್ಪಷ್ಟೀಕರಣವಾಗಿ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದವರು. ಈ ದೇಶದಲ್ಲಿ ಬಡವರ ಹಾಗೂ ಮಧ್ಯಮವರ್ಗದವರ ಬಗ್ಗೆ ದಯೆ ಅನುಕಂಪ ಮತ್ತು ಕನಿಕರವನ್ನು ಇಟ್ಟಿರತಕ್ಕಂಥವರು ಯಾರಿದ್ದಾರೆಂಬುದನ್ನು ನಾನು ಕಣ್ಣಲ್ಲಿ ಕಣ್ಣಿಟ್ಟು ನೋಡಿದಾಗ ನನ್ನ ಕಣ್ಣಿಗೆ ಬಿದ್ದವರು ಶ್ರೀಮತಿ ಇಂದಿರಾಗಾಂಧಿಯವರು. ನನಗೆ ನನ್ನ ಮಂತ್ರಿ ಪದವಿ ಹೋದಾಗ ನನಗೇನೂ ವ್ಯಸನವಾಗಲಿಲ್ಲ. ಅನಂತರವೂ ಸಹ ನಾನು ಹೆಮ್ಮೆಯಿಂದಲೇ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಬೇರೆ ರಾಜ್ಯಗಳಲ್ಲಿಯೂ ಸಹ ತಿರುಗಾಡಿ ನನ್ನ ಶಕ್ತಿ ಮೀರಿ ಬಡವರ ಸೇವೆ ಮಾಡುವುದಕ್ಕಾಗಿ ಪ್ರಯತ್ನ ಮಾಡಿದ್ದೇನೆ. ನಾನು ಎಲ್ಲ ಕಡೆಯೂ ಸಂಚಾರ ಮಾಡಿ ನೋಡಿದಾಗ ನನಗೆ ಅರಿವಾಗಿದ್ದೇನೆಂದರೆ; ಬಡವರ ಬಗ್ಗೆ ದಯೆ, ಕನಿಕರ ಮತ್ತು ಅನುಕಂಪವನ್ನು ಇಟ್ಟುಕೊಂಡಿರುವವರು ಶ್ರೀಮತಿ ಇಂದಿರಾಗಾಂಧಿಯವರು ಮಾತ್ರ ಎಂಬುದು. ಅವರಂತೆಯೇ ಬೇರೆಯವರು ಇದ್ದರೂ ಇರಬಹುದು ಇಲ್ಲವೆಂದು ನಾನು ಹೇಳುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಮಾರುತಿ ಬಗ್ಗೆಯೂ ಸಹ ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ಯಾವುದೇ ಒಂದು ವ್ಯವಹಾರ ಮಾಡುವಾಗಲೂ ಸಹ ತಪ್ಪುಗಳಾಗುತ್ತವೆ. ಆದರೆ ತಪ್ಪುಗಳು ಜಾಸ್ತಿ ಇತ್ತೋ ಅಥವಾ ಕಡಿಮೆ ಇತ್ತೋ ಎಂಬುದನ್ನು ನಾನು ನೋಡಬೇಕು. ಯಾರೇ ವ್ಯವಹಾರ ಮಾಡಲಿ, ಅದರಲ್ಲಿ ತಪ್ಪು ಮತ್ತು ಒಪ್ಪುಗಳೆರಡೂ ಇರುತ್ತವೆ, ಆದರೆ ಒಪ್ಪು ಜಾಸ್ತಿಯಿರುವಾಗ ತಪ್ಪುಗಳನ್ನು ಮರೆಯಲು ನಾವು ಯತ್ನಿಸಬೇಕು. ನಾನು ಹೆಮ್ಮೆಯಿಂದ ಹೇಳುತ್ತಿದ್ದೇನೆ, ಏನೆಂದರೆ, ನಾನೂ ಸಹ ತಪ್ಪು ಮಾಡಿದ್ದೇನೆ, ಆದರೆ ಆದಷ್ಟೂ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೇನೆ. ಮತ್ತು ಒಳ್ಳೆಯದನ್ನು ಜಾಸ್ತಿ ಮಾಡುವುದಕ್ಕೆ ನಾನು ಪ್ರಯತ್ನ ಮಾಡಿದ್ದೇನೆ. ಮಾನ್ಯ ಸದಸ್ಯರು ಮಾರುತಿ ಬಗ್ಗೆ ಹೇಳುತ್ತಿದ್ದಾರೆ. ಈಗ ಕೇಂದ್ರದಲ್ಲಿ ನಿಮ್ಮ ಸರ್ಕಾರವೇ ಇದೆ. ಆದ್ದರಿಂದ ನೀವು ಏನು ಮಾಡುತ್ತೀರೋ ಮಾಡಿ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಏನು ಮಾಡಬೇಕು ಎಂಬ ಬಗ್ಗೆ ತಾವು ಸಲಹೆ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಜನರು ತಮಗೆ ಅಧಿಕಾರ ಕೊಟ್ಟಿದ್ದಾರೆ. ಆದ್ದರಿಂದ ತಾವು ಏನು ಮಾಡುತ್ತೀರೋ ಮಾಡಿ ; ಒಟ್ಟಿನಲ್ಲಿ ಬಡವರ ಬಗ್ಗೆ ಶ್ರೀಮತಿ ಇಂದಿರಾಗಾಂಧಿಯವರು ಮಾಡಿರುವ ಸೇವೆ ಮತ್ತು ಅವರ ಬಗ್ಗೆ ಇಟ್ಟಿದ್ದ ಅನುಕಂಪ ಅಪಾರವಾದುದು. ಕೆಲವರು ಸಮಾಜವಾದದ ಬಗ್ಗೆ ಭಾಷಣಮಾಡುವುದು, ಪುಸ್ತಕಗಳನ್ನು ಬರೆಯುವುದು ಅಷ್ಟೇ ಮಾಡುತ್ತಿದ್ದರು. ಈ ಅಳೆಯುವ ಮತ್ತು ಸುರಿಯುವ ಕೆಲಸ ಇನ್ನಾದರೂ ನಿಲ್ಲಬೇಕು. ನಮ್ಮಲ್ಲಿ ಅಳೆಯುವುದು ಮತ್ತು ಸುರಿಯುವುದು ಎಂದರೆ, ಹತ್ತು ಕ್ವಿಂಟಾಲ್‌ನಷ್ಟು ರಾಗಿಯನ್ನು ಒಂದು ಕಡೆ ರಾಶಿ ಮಾಡುತ್ತಾರೆ, ನಂತರ ಅದನ್ನು ಚೀಲಗಳಿಗೆ ಅಳತೆ ಮಾಡಿ ತುಂಬುತ್ತಾರೆ, ಪುನಃ ಅದನ್ನು ಸುರಿಯುತ್ತಾರೆ, ಪುನಃ ಅದನ್ನು ಅಳೆಯುತ್ತಾರೆ ಈ ರೀತಿ ಅಳೆಯುವ ಮತ್ತು ಸುರಿಯುವ ಕೆಲಸ ಮಾಡುವ ಆಗಿರತಕ್ಕಂಥ ಕೆಲಸಗಳನ್ನು ಒಪ್ಪಿಕೊಳ್ಳಲು ಯಾರೂ ಹಿಂದೆಗೆಯಬಾರದು,

ಶ್ರೀ ಕೋಣಂದೂರು ಲಿಂಗಪ್ಪ.—5 ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳಿ ?

ಶ್ರೀ ಬಿ. ಬಸವಲಿಂಗಪ್ಪ.—5 ಅಂಶಗಳ ಕಾರ್ಯಕ್ರಮವನ್ನು ಮೊದಲಿನಿಂದಲೂ ಮಾಡುತ್ತಿದ್ದಾರೆ. ಡಾ. ಮುನ್ಸಿ ಅವರ ಕಾಲದಲ್ಲಿಯೇ ಮರಗಳನ್ನು ಬೆಳಸತಕ್ಕಂಥ ಕಾರ್ಯಕ್ರಮವನ್ನು ಮತ್ತು ಕುಟುಂಬಯೋಜನೆಯ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು ಈ ಕಾರ್ಯಕ್ರಮಗಳನ್ನು 20 ಅಂಶಗಳ ಕಾರ್ಯಕ್ರಮದ ಜೊತೆಗೆ ಸೇರಿಸಿದ್ದಾರೆ. ಅದನ್ನೇ ತಾವು ದೊಡ್ಡದನ್ನಾಗಿ ಮಾಡಬೇಕಾಗಿಲ್ಲ. ಈ ದೇಶದಲ್ಲಿ ಸಮಾಜವಾದ ಎಂಬುದು ಯಾವ ರೀತಿ ಇರಬೇಕು, ಅದನ್ನು ಯಾವ ರೀತಿ ಅನುಷ್ಠಾನದಲ್ಲಿ ತರಬೇಕು ಎಂಬುದನ್ನು ಶ್ರೀಮತಿ ಇಂದಿರಾಗಾಂಧಿಯವರು ಯೋಚನೆ ಮಾಡಿ ನಂತರ ಈ ಇಪ್ಪತ್ತು ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದರು. ಡಾ. ಲೋಹಿಯಾ ಅವರು ಈ ಒಂದು ಕೆಲಸವನ್ನು ನಮ್ಮ ದೇಶದಲ್ಲಿ ಮೊದಲು ಪ್ರಾರಂಭ ಮಾಡಿದರು. ಸತತವಾಗಿ ಅವರ ಜೀವನ ಪರ್ಯಂತ ಅದಕ್ಕಾಗಿ ಹೋರಾಟ ನಡೆಸಿದರು. ಅವರು ಬಡ ಕುಟುಂಬ ವರ್ಗದಲ್ಲಿ ಹುಟ್ಟಿದವರಾದ ಕಾರಣ, ಯಾರು ಹಿಂದುಳಿದ ವರ್ಗದವರಿದ್ದಾರೆ, ಯಾರು ಹರಿಜನರಿದ್ದಾರೆ. ಯಾರು ಬುಡಕಟ್ಟು ಜನಾಂಗದವರಿದ್ದಾರೆ, ಅವರಿಗೆಲ್ಲಾ ಅಧಿಕಾರವರ್ಗದಲ್ಲಿ ಜಾಸ್ತಿ ಜಾಸ್ತಿ ಪ್ರಾತಿನಿಧ್ಯವಿರಬೇಕು, ಇರತಕ್ಕಂಥ ಸಂಪತ್ತು ಎಲ್ಲರಿಗೂ ಸಮಾನವಾಗಿ ಭಾಗವಾಗಬೇಕು, ಯಜಮಾನಿಕೆ ಮಾಡುವಂತಹ ಜನರು ಕಡಿಮೆಯಾಗಬೇಕೆಂದುಕೊಂಡು ಡಾ. ಲೋಹಿಯಾ ಅವರು ದಿಟ್ಟತನದಿಂದ ಹೋರಾಟ ಮಾಡಿದರು. ಇವರಿಗೂ ಮೊದಲು ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರೂ ಹರಿಜನ ಮತ್ತು ಗಿರಿಜನರಿಗೆ ಅಧಿಕಾರದಲ್ಲಿ ಭಾಗವಹಿಸುವುದಕ್ಕೆ ಅವಕಾಶವಿರಬೇಕು, ಈ ಜನರ ಕಲ್ಯಾಣ ಈ ಜನರಿಂದಲೇ ಆಗುವುದಕ್ಕೆ ಅವಕಾಶವಿರಬೇಕು ಎಂದು ಹೇಳಿದರು. ಇವರಿಗೂ ಮೊದಲು ಬಸವಣ್ಣನವರು ಸಹ ಈ ಸಮಾಜವಾದ ಎಂಬುದು ಸಮಾಜ ಕ್ಷೇಮಕರ ಯಾವ ರೀತಿ ಇರಬೇಕೆಂಬುದನ್ನು ತಿಳಿದುಕೊಂಡು ಅದನ್ನು ಜಾರಿಗೆ ತರಲು ಹೊರಟಾಗ ಕೆಲವರ ವಿರೋಧವನ್ನು ಎದುರಿಸಬೇಕಾಯಿತು ಅದೇ ರೀತಿ ಶ್ರೀಮತಿ ಇಂದಿರಾಗಾಂಧಿಯವರು ಬಡವರ ಕಲ್ಯಾಣಕ್ಕಾಗಿ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತಂದರು. ಇದರಿಂದ ಬಡವರ ಕಲ್ಯಾಣ ಒಳ್ಳೆಯ ರೀತಿಯಿಂದ ಆಗಿದೆ. ಈ ಒಂದು ಕಾಣಿಕೆ ನಾನು ಅವರಿಗೆ ಬಹಳ ಹೆಮ್ಮೆಯಿಂದ ಕೊಡುತ್ತಿದ್ದೇನೆ. ಕೆಲವು ಕಡೆಗಳಲ್ಲಿ ಒಳ್ಳೆಯ ರೀತಿಯಿಂದ ಇದು ಜಾರಿಯಾಗದಿದ್ದರೆ. ಅದು ಅವರ ತಪ್ಪಲ್ಲ, ಯಾರು ಇದನ್ನು ಪ್ರಯೋಗ ಮಾಡುತ್ತಿದ್ದರು; ಅವರು ಇದನ್ನು ಸರಿಯಾಗಿ ಪ್ರಯೋಗ ಮಾಡದ ಕಾರಣ ಅದು ಯಶಸ್ವಿಯಾಗದಿರಬಹುದು ಮೊನ್ನೆ ನಡೆದ ಚುನಾವಣೆಯಲ್ಲಿ ಲಕ್ಷಾಂತರ ಜನರು ಏನೋ ಒಂದು ತೀರ್ಪು ಕೊಟ್ಟರು. ಅದಕ್ಕಾಗಿ ಅವರು ಪಶ್ಚಾತ್ತಾಪ ಪಡುವ ಕಾಲ ಬಹಳ ದೂರವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಇಪ್ಪತ್ತು ಅಂಶಗಳ ಕಾರ್ಯಕ್ರಮಗಳ ಪೈಕಿ ಒಂದೆರಡು ಅಂಶಗಳ ಬಗ್ಗೆ ಸಿಟ್ಟಿನಿಂದ ಜನರು ಅವರಿಗೆ ಓಟನ್ನು ಕೊಡದಿರಬಹುದು. ಆದರೆ ಇವೊತ್ತು ಅಂತಹ ಒಂದು ಕೆಲಸವನ್ನು ಮಾಡಬಾರದಾಗಿತ್ತೆಂದು ಜನರು ಇಂದು ಮಾತನಾಡಿಕೊಳ್ಳುತ್ತಿದ್ದಾರೆ ಮತ್ತು ಸಂಕಟಪಡುತ್ತಿದ್ದಾರೆ. ಈ ವಿಚಾರ ನನಗೆ ಎಲ್ಲ ಕಡೆಗಳಲ್ಲಿ ತಿರುಗಾಡಿ ಜನರ ಸಂಗ ಮಾತನಾಡಿದಾಗ ತಿಳಿದುಬಂತು. ನೀವು ಯಾವರೀತಿ ಕೆಲಸ ಮಾಡುತ್ತಿದ್ದೀರಿ ಎನ್ನುವುದನ್ನು ಜನ ನೋಡುತ್ತಿದ್ದಾರೆ. ಜನ ಶಾಂತಿಯಿಂದ ನೋಡುತ್ತಿದ್ದಾರೆ. ನಿಮಗೂ ಜನ ಬೆಂಬಲ ಕೊಡಬೇಕು ; ಅವರ ಹೆಸರಿನಲ್ಲಿ ನಾವು ರಾಜ್ಯಭಾರ ಮಾಡುತ್ತಿದ್ದೇವೆ, ಇವತ್ತಿನ ದಿವಸ ಜನಗಳು ಕಾಂಗ್ರೆಸ್ ಬಿಟ್ಟು ಹೋಗಿಲ್ಲ ಎಂದು ಸ್ಪಷ್ಟವಾಗಿ

ಅರ್ಥವಾಗುತ್ತದೆ. ಈ 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ನಾನು ತಮಗೆ ಹೇಳುತ್ತೇನೆ. ಇವು ರಾಜ್ಯಾಂಗದಲ್ಲಿ ಡೆರಕ್ಟೀವ್ ಪ್ರಿನ್ಸಿಪಲ್ ಅಫ್ ದಿ ಕಾನ್ಸ್ಟಿಟ್ಯೂಷನಲ್ಲಿ ಅಡಕವಾಗಿರ ತಕ್ಕದ್ದನ್ನು ತಮಗೆ ಓದಿ ಹೇಳುತ್ತೇನೆ. ಅದು ಈ ರೀತಿ ಇದೆ.—

11-00 A.M.

Directive principles of the Constitution.

"38.—The State shall strive to promote the welfare of the people by securing and protecting as effectively as it may a social order in which justice, social, economic and political, shall inform all the institutions of the national life.

39.—The State shall, in particular, direct its policy towards securing—

(*a*) that the citizens, men and women equally, have the right to an adequate means of livelihood ;

(*b*) that the ownership and control of the material resources of the community are so distributed as best to subserve the common good.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಬಹಳ ವರ್ಷಗಳಾಯಿತು. ಆದರೆ ಈ ಒಂದು ಸಂಪತ್ತು, ಸಾಧನ ಮತ್ತು ಹಂಚಿಕೆ ಏನು ಇದೆ ಅದು ಸರಿಯಾಗಿ ನಮ್ಮ ದೇಶದಲ್ಲಿ ಆಗಬೇಕಾ ಗಿತ್ತು. ಅದನ್ನು ಸರಿಯಾಗಿ ಸಾರ್ವಜನಿಕರಿಗೆ ಹಂಚಿಕೆ ಮಾಡುವ ಹಾಗೂ ಪಬ್ಲಿಕ್ ಸೆಕ್ಟಾರ್ ಕ್ಷೇತ್ರದಲ್ಲಿ ಇದನ್ನು ಇಟ್ಟು ಕೆಲಸ ಮಾಡತಕ್ಕಂಥ ವ್ಯವಸ್ಥೆ ಆಷ್ಟಾಗಿ ಆಗಿರಲಿಲ್ಲ. ಇಂಥಾ ಸಂಪತ್ತು ಎಲ್ಲಾ ಬಡವರಿಗೂ ಹಂಚಿಕೆಯಾಗತಕ್ಕ ವ್ಯವಸ್ಥೆ, ಸಾಧನ ಮಾರ್ಗಗಳಬಗ್ಗೆ ಶ್ರೀಮತಿ ಇಂದಿರಾ ಗಾಂಧಿಯವರು ಯೋಚನೆಮಾಡಿ ಈ ಕೆಲಸಗಳನ್ನು ಸಾಧನೆ ಮಾಡಿದರು. ಇವೆಲ್ಲಾ ಜನಗಳ ಮನಸ್ಸಿನಲ್ಲಿದೆ. ಅವರು ಯಾವತ್ತೂ ವಿಚಾರಮಾಡಿ ಪುನಃ ಬೆಂಬಲ ಕೊಡುತ್ತಾರೆ. ಬಡವರು ಏನಿದ್ದಾರೆ ಅವರ ಬಗ್ಗೆ ಸರ್ಕಾರ ಮಾಡಿರತಕ್ಕ ಕೆಲಸ ಏನು ಎನ್ನುವುದನ್ನು ಹೇಳುತ್ತಿದ್ದೇನೆ. ಇವತ್ತು ಹಿಂದುಳಿದ ವರ್ಗವನ್ನು ಗುರುತಿಸಿದ್ದೇವೆ, ಹಾವನೂರ್ ಕಮಿಷನ್‌ನ್ನು ನೇಮಕ ಮಾಡಿರುವುದು ತಮಗೆಲ್ಲಾ ಗೊತ್ತಿರಬಹುದು. ಅವರ ವರದಿ ಏನು ಬಂತು ಆ ವರದಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಅದನ್ನು ಒಪ್ಪಿಕೊಂಡು ಯಾರ್‍ಯಾರು ಹಿಂದುಳಿದ ವರ್ಗದವರು ಎನ್ನುವುದನ್ನು ಗುರುತಿಸಿದ್ದೇವೆ. ಗುರುತಿಸಿ ಅವರು ನೌಕರಿಯಲ್ಲಿ, ಮತ್ತು ಸರ್ಕಾರದವರು ಮಾಡತಕ್ಕ ಸಂಪತ್ತಿನ ಹಂಚಿಕೆಯಲ್ಲಿ ಭಾಗಿಯಾಗಲಿಕ್ಕೆ ಅವಕಾಶ ಮಾಡಬೇಕು ಎಂದು ನಿರ್ಧಾರ ಕೈಗೊಂಡಿದ್ದೇವೆ. 1954ನೇ ಇಸವಿಯಲ್ಲೇ ಈ ಒಂದು ವ್ಯವಸ್ಥೆ ದೇಶದಲ್ಲೆಲ್ಲಾ ವ್ಯಾಪಕವಾಗಿ ಆಗಬೇಕಾಗಿತ್ತು. ಕೇಂದ್ರ ಸರ್ಕಾರದವರು ಈ ಕೆಲಸವನ್ನು ಮಾಡಬೇಕಾಗಿತ್ತು. ಅವರು ಕಮಿಷನ್ ಏರ್ಪಡಿಸಿದ್ದರೂ ತೀರ್ಮಾನ ತೆಗೆದುಕೊಳ್ಳಲಿಲ್ಲ. ಈಗಿನ ಸರ್ಕಾರ ಅಧಿಕಾರಕ್ಕೆ ಬರುವುದಕ್ಕೆ ಮುನ್ನ ಸರ್ಕಾರಗಳು ಕರ್ನಾಟಕದಲ್ಲಿದ್ದವು ಅವು ಯಾವುವೂ ತೀರ್ಮಾನ ತೆಗೆದುಕೊಳ್ಳಲಿಲ್ಲ, ಆದರೆ ಕರ್ನಾಟಕದಲ್ಲಿ ಈಗಿನ ಸರ್ಕಾರದವರು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿದ್ದಾರೆ, ಹಿಂದುಳಿದ ವರ್ಗದವರನ್ನು ಗುರುತಿಸಿದ್ದಾರೆ. ಯಾರ್‍ಯಾರು ಹಿಂದುಳಿದ ವರ್ಗದವರು ಎಂದು ಗುರುತಿಸಿದ್ದಾರೆ, ಅದು ಯಾವತ್ತು ಪ್ರಕಟಣೆಯಾಯಿತೋ ಆವತ್ತಿನಿಂದ ಅವರು ಸೌಲಭ್ಯ ಗಳನ್ನು ಪಡೆದುಕೊಳ್ಳಲಿಕ್ಕೆ ಅವರಿಗೆ ಅವಕಾಶವಾಗಿದೆ. ಈ ಕೆಲಸವನ್ನು ಹಿಂದಿನವರು ಏಕೆ ಮಾಡಲಿಲ್ಲ ಎಂದು ಬಹಳ ಸಾರಿ ಕೇಳಿದ್ದೇನೆ. ಈಗಲೂ ಕೇಳುತ್ತಿದ್ದೇನೆ ಶ್ರೀಮಾನ್ ದೇವೇಗೌಡರು ಇದಕ್ಕೆ ಉತ್ತರ ಕೊಡಬೇಕು. ಯಾರಿಗೆ ಸಂಕಟ ಇರುತ್ತದೋ ಅವರು ಅದರ ಬಗ್ಗೆ ಯೋಚನೆ ಮಾಡಲಿಕ್ಕೆ ಆಗುತ್ತದೆ. ಯಾರಿಗೆ ಸಂಕಟ ಇಲ್ಲ ಅವರು ಬೇರೆಯವರ ಸಂಕಟವನ್ನು

ಅರಿತುಕೊಳ್ಳಲಿಕ್ಕೆ ಆಗುವುದಿಲ್ಲ. ಇಲ್ಲಿ ಸಂಕಟ ಪಡುವ ಪ್ರಶ್ನೆ ಬರುವುದಿಲ್ಲ. ಆದುದರಿಂದ ನಾವು ಧೈರ್ಯವಾಗಿ, ಹೆಮ್ಮೆಯಿಂದ ಹೇಳಬೇಕು. ಏನೆಂದರೆ, ಕರ್ನಾಟಕ ಸರ್ಕಾರದವರು ಹಿಂದುಳಿದ ವರ್ಗದವರು ಯಾರು ಎನ್ನುವುದನ್ನು ಗುರುತಿಸಿ ಇವತ್ತು ಮಾಡಿರತಕ್ಕ ಕೆಲಸ ಏನಿದೆ ಅದು ಶ್ಲಾಘನೀಯವಾದುದು. ಮತ್ತು ಇತಿಹಾಸದಲ್ಲಿ ಒಂದು ಹೆಜ್ಜೆಯನ್ನಿಟ್ಟಿದಾರೆ ಎಂದು ನಾನು ಹೇಳುತ್ತಿದ್ದೇನೆ. ಬೇರೆ ರಾಜ್ಯಗಳಲ್ಲಿ ಹಿಂದುಳಿದ ವರ್ಗದವರು ಯಾರು ಎನ್ನುವುದನ್ನು ಗುರುತಿಸುವುದಕ್ಕೆ ಹೋಗಿಲ್ಲ; ಒಂದೆರಡು ರಾಜ್ಯಗಳು ಹೋಗಿರಬಹುದು. ಆದರೆ ಕರ್ನಾಟಕ ರಾಜ್ಯ ಸರ್ಕಾರದವರು ಈ ದಿಶೆಯಲ್ಲಿ ದೊಡ್ಡ ಹೆಜ್ಜೆಯನಿಟ್ಟು ನಡೆಯಲು ಪ್ರಾರಂಭವಾಡಿದ್ದಾರೆ. ಇದರ ಬಗ್ಗೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೆಮ್ಮೆಪಟ್ಟುಕೊಂಡಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ.

ನಿಮ್ಮ ವರ್ಗದವರು ಮತ್ತು ಗುಡ್ಡಗಾಡು ಜನರಿಗೆ ವಿಶೇಷ ಸೌಲಭ್ಯಗಳು ಮುಂದುವರಿಸಲ್ಪಟ್ಟಿವೆ, ಹಿಂದಿನ ಸರ್ಕಾರದವರಾಗಲೀ, ಈಗಿನ ಸರ್ಕಾರದವರಾಗಲೀ, ಏನೇ ಮಾಡಿದ್ದರೂ, ಏನೇ ಬಿಟ್ಟಿದ್ದರೂ, ಬದಿಗೆ ಒತ್ತಿದ್ದರೂ ಕೇಂದ್ರ ಸರ್ಕಾರದವರು ಸ್ಕಾಲರ್‌ಶಿಪ್ಪನ್ನು ಪ್ರತಿಯೊಬ್ಬರಿಗೂ ಕೊಡತಕ್ಕ ಯೋಜನೆ ಏನಿದೆ ಅದು ಸ್ತುತ್ಯವಾದ ಕೆಲಸ, ಅದನ್ನು ಮಾಡಿದ್ದಾರೆ. ಇದರಿಂದ ಬಡವರ ಮಕ್ಕಳು ಏನಿದ್ದಾರೆ ಅವರೆಲ್ಲರೂ ವಿದ್ಯಾಭ್ಯಾಸ ಮುಂದುವರಿಸಲಿಕ್ಕೆ ಅವಕಾಶವಾಗುತ್ತದೆ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ವಿದ್ಯಾಭ್ಯಾಸಕ್ಕೆ ಉತ್ತೇಜನ ಕೊಟ್ಟಿದ್ದೇವೆ ಎಂದು ತಿಳಿಸಿದೆ. ನನಗೆ ತೃಪ್ತಿಕರ ಏನೆಂದರೆ ಈ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಟ್ಟು ಹಾಸ್ಟೆಲ್‌ಗಳನ್ನು ತೆರೆದು, ಸ್ಕಾಲರ್‌ಶಿಪ್ ಕೊಟ್ಟು ಚಿಕ್ಕಮಕ್ಕಳಿಗೆ ಉತ್ತೇಜನ ಕೊಟ್ಟಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ತಮ್ಮ ಅವಧಿಯಲ್ಲಿ ಎಷ್ಟು ಹೊಸ ಹರಿಜನ-ಗಿರಿಜನ ಹಾಸ್ಟೆಲ್‌ಗಳನ್ನು ತೆರೆದಿದ್ದೀರಿ? ಹರಿಜನ-ಗಿರಿಜನರ ವಿದ್ಯಾಭ್ಯಾಸ ಮಟ್ಟವನ್ನು ಈ 5 ವರ್ಷಗಳಲ್ಲಿ ಎಷ್ಟು ಜಾಸ್ತಿ ಮಾಡಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—700 ಹಾಸ್ಟೆಲ್‌ಗಳಿವೆ.

ಶ್ರೀ ಕಾಗೋಡು ತಿಮ್ಮಪ್ಪ.—ನಿಮ್ಮ ಅವಧಿಯಲ್ಲಿ ಎಷ್ಟು ಹಾಸ್ಟೆಲ್‌ಗಳನ್ನು ತೆರೆದಿದ್ದೀರಿ ಎನ್ನುವುದನ್ನು ಹೇಳಿರಿ.

ಶ್ರೀ ಬಿ. ಬಸವಲಿಂಗಪ್ಪ.—ಒಟ್ಟಿಗೆ 700 ವಿದ್ಯಾರ್ಥಿನಿಲಯಗಳಿವೆ. ಹೋದಸಾರಿ ಅಂದರೆ ಈ ಸರ್ಕಾರ ಬರುವುದಕ್ಕೆ ಮೊದಲು 300 ಹಾಸ್ಟೆಲ್‌ಗಳು ಇದ್ದವು. ನಂತರ ಈ ಸರ್ಕಾರ ಬಂದ ಮೇಲೆ 400 ಹಾಸ್ಟೆಲುಗಳನ್ನು ಹೆಚ್ಚು ಮಾಡಿದ್ದಾರೆ. ಇದು ಹೆಚ್ಚಳ ಅಲ್ಲವೋ ? ತಾವು ಒಪ್ಪತಕ್ಕ ಮಾತಲ್ಲವೋ ?

ಶ್ರೀ ಕಾಗೋಡು ತಿಮ್ಮಪ್ಪ.—400 ಹಾಸ್ಟೆಲ್‌ಗಳನ್ನು ಏನು ಹೆಚ್ಚು ಮಾಡಿದ್ದೀರಿ, ಅದರ ಪಟ್ಟಿಮಾಡಿ ಕೊಡಿ.

ಶ್ರೀ ಬಿ. ಬಸವಲಿಂಗಪ್ಪ.—ಆ ಪಟ್ಟಿಯನ್ನು ನಾಳೆ, ನಾಡಿದ್ದು ಕೊಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—400 ಹಾಸ್ಟೆಲ್‌ಗಳನ್ನು ಮಾಡಿಲ್ಲ, ದಯವಿಟ್ಟು ಸರಿಯಾ ತಿದ್ದಿಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಮೊದಲು 300 ಹಾಸ್ಟೆಲ್‌ಗಳಿದ್ದುವು ಎಂದು ನನಗೆ ಜ್ಞಾಪಕ ಇದೆ. ಈ 5 ವರ್ಷಗಳ ಅವಧಿಯಲ್ಲಿ 400 ಹಾಸ್ಟೆಲುಗಳನ್ನು ಜಾಸ್ತಿ ಮಾಡಿದ್ದಾರೆಂದು ಹೇಳಿದ್ದೇನೆ. ಸ್ವಲ್ಪ ಕಡಿಮೆ ಇರಬಹುದು, ಜಾಸ್ತಿ ಇರಬಹುದು, ಒಟ್ಟಿನಲ್ಲಿ ಇರುವುದು 700 ಹಾಸ್ಟೆಲ್‌ಗಳು.

ಶ್ರೀ ಕೆ. ಎಚ್. ರಂಗನಾಥ್.—ಅಧ್ಯಕ್ಷರೇ, 1962ರಿಂದ 1972ರವರೆಗೆ ಹರಿಜನ ಹಾಸ್ಟೆಲ್‌ಗಳ ಕಟ್ಟಡ ಮಾಡತಕ್ಕದ್ದನ್ನು ನಿಲ್ಲಿಸಿದ್ದು ನಮಗೆ ಗೊತ್ತಿದೆ, ಮತ್ತು ಮಾನ್ಯ ಸಭೆಯ ಸದಸ್ಯರಿಗೂ ಗೊತ್ತಿದೆ. 1972ರಿಂದೀಚೆಗೆ ಹಾಸ್ಟೆಲ್‌ಗಳ ಕಟ್ಟಡ ಮಾಡತಕ್ಕ ಕೆಲಸ ನಡೆದಿದೆ. 1962ರಲ್ಲಿ 1 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ ದೊರೆತಿದ್ದರೆ ಇಂದು 3 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ

ದೊರೆತಿದೆ. ಮಾನ್ಯ ಸದಸ್ಯರು ಅಂಕಿಅಂಶಗಳನ್ನು ತೆಗೆದು ನೋಡಬಹುದು. ಇದರಲ್ಲಿ ಕಣ್ಣು ಮುಚ್ಚಾಲೆ ಆಟ ಏನು ಇಲ್ಲ, ಸರ್ಕಾರದ ವತಿಯಿಂದ ಅಂಕಿಅಂಶಗಳು ಸರ್ಕಾರದ ಮುಂದೆ ಇದೆ, ಅದನ್ನು ಬೇಕಾದರೆ ವೆರಿಫೈ ಮಾಡಬಹುದು. ಒಂದು ವಿಷಯ ಏನು ಎಂದರೆ 1962ರಿಂದ 1972ರವರೆಗೆ ಹರಿಜನ ಹಾಸ್ಟೆಲ್ ಕಟ್ಟಡ ಕಟ್ಟಕೊಡದು ಎಂದು ಸರ್ಕಾರದ ಆಜ್ಞೆ ಇತ್ತು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, ತಾವು ಅಧಿಕಾರಕ್ಕೆ ಬಂದಮೇಲೆ ಹರಿಜನ ಗಿರಿಜನರಿಗೋಸ್ಕರ ಎಷ್ಟು ಹೊಸ ಹಾಸ್ಟಲ್ ಸ್ಥಾಪನೆ ಮಾಡಿದ್ದೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ನನ್ನ ತಾಲ್ಲೋಕಿನಲ್ಲಿ 1 ಲಕ್ಷ ರೂಪಾಯಿ ಖರ್ಚು ಮಾಡಿ 1971ರಲ್ಲೇ ಹರಿಜನ ಹಾಸ್ಟಲ್ ಕಟ್ಟಿಸಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್—ಮಾನ್ಯಸದಸ್ಯರು ಕೆಲವು ಸಂದರ್ಭದಲ್ಲಿ ಒಂದು ಬಿಲ್ಡಿಂಗ್ ಕಟ್ಟಲಿಕ್ಕೆ ಮಂಜೂರು ಮಾಡಿಸಿಕೊಂಡಿರಬಹುದು. ಆದರೆ 1962ನೇ ಇಸವಿಯಿಂದ ಪರಮನೆಂಟಾಗಿ ಹರಿಜನ ಹಾಸ್ಟಲುಗಳನ್ನು ಕಟ್ಟಬಾರದು ಎಂದು ಇತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ, 1971-72ರಿಂದ ಎಷ್ಟು ಹಾಸ್ಟಲುಗಳನ್ನು ಕಟ್ಟಿದ್ದೀರಾ ?

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ಜಿಜ್ಞಾಸೆಯಾಗಿದೆ. ಇವೊತ್ತು 700 ಹಾಸ್ಟಲುಗಳು ಇವೆ ಎಂದು ಹೇಳಿದೆ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್‌ನವರಿಗೋಸ್ಕರ 5 ವರ್ಷಗಳ ಹಿಂದೆ 300 ಹಾಸ್ಟಲುಗಳು ಇರುವುದು ಜ್ಞಾಪಕ ಇದೆ ಎಂದು ಹೇಳಿದೆ. ಸ್ವಲ್ಪದಿವಸಗಳ ಹಿಂದೆ ಕ್ರೆಡಿಟ್ ತೆಗೆದುಕೊಂಡಿರುವ ಬಗ್ಗೆ ಏತಕ್ಕೆ ತಮಗೆ ಜಿಜ್ಞಾಸೆ.

ಶ್ರೀ ಕಾಗೋಡು ತಿಮ್ಮಪ್ಪ.—ಬಟ್ಟೆ, ಚಪ್ಪಲಿಗಳನ್ನು ಕೊಟ್ಟಿರುವ ಬಗ್ಗೆ ಏನು ಹೇಳುತ್ತೀರಾ?

ಶ್ರೀ ಬಿ. ಬಸವಲಿಂಗಪ್ಪ.—ಈಗ ಅವರು ನಮ್ಮಲ್ಲಿ ಇಲ್ಲ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಸ್ವಾಮಿ, ಮಕ್ಕಳಿಗೆ ಕೊಡತಕ್ಕ ಬಟ್ಟೆ ವಗೈರೆ ಬಗ್ಗೆ ಹಣ ಅವ್ಯವಹಾರ ಆಗಿದ್ದರ ಬಗ್ಗೆ ಪ್ರಸ್ತಾಪ ಮಾಡಿ. ತಾವು ಹರಿಜನ ಮುಖಂಡರು, ಅವರ ಬಗ್ಗೆ ಒಳ್ಳೆಯ ಅನುಕಂಪ ಇಟ್ಟಿರುವವರು ಆದ್ದರಿಂದ ಇದನ್ನು ಹೇಳುತ್ತಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಸರ್ಕಾರದಲ್ಲಿ ಜಾಸ್ತಿ ಒಳ್ಳೆಯ ಕೆಲಸ ಏನು ಮಾಡಿದ್ದೇವೆ ನೋಡಿ ಎಂದು ಹೇಳಿದರೆ, ತಾವು ಎಲ್ಲಿಯೋ ಒಂದೆರಡು ಕಡೆ ಆ ರೀತಿ ಆಗಿರುವುದನ್ನು ತೋರಿಸುತ್ತೀರಾ. ನಾವು ದೊಡ್ಡ ದೊಡ್ಡ ಕೆಲಸ ಮಾಡುತ್ತಿರುವಾಗ ಏನೋ ಒಂದೆರಡು ಸಣ್ಣಪುಟ್ಟ ಕೆಲಸಗಳಾಗುತ್ತವೆ. ದೊಡ್ಡ ಕೆಲಸಗಳ ಕಡೆಗೆ ನೋಡಿ ಮೆಚ್ಚಿಗೆಯನ್ನು ವ್ಯಕ್ತಮಾಡಿರಿ, ಒಂದೆರಡು ಸಣ್ಣಪುಟ್ಟ ತಪ್ಪುಗಳಿದ್ದರೆ, ಅದನ್ನು ದೊಡ್ಡದು ಮಾಡುವುದನ್ನು ಬಿಡಬೇಕು.

ಶ್ರೀ ಎಸ್. ವೈ. ಪಾಟೀಲ್.—ಇವೊತ್ತು ಮಾನ್ಯ ಬಸವಲಿಂಗಪ್ಪನವರು ಹರಿಜನ ಮುಖಂಡರಾಗಿದ್ದಾರೆ, ಬಿಜಾಪುರ ಜಿಲ್ಲೆಯಲ್ಲಿ ಏನು ನಡೆಯಿತು ಪ್ರತಿಯೊಬ್ಬರಿಗೂ ಸೀರೆಗಳು, ದೋತಿಗಳು ಬಟ್ಟೆಗಳು ಇವುಗಳನ್ನೆಲ್ಲಾ ಹಂಚಿ ಓಟುಗಳನ್ನು ಪಡೆದರು. ಇವೊತ್ತು ನಾನು ತಮ್ಮಲ್ಲಿ ಚಾಲೆಂಜ್ ಮಾಡಿ ಹೇಳುತ್ತೇನೆ, ತಾವು ಖುದ್ದಾಗಿ ಕಂಪಲಸರಿ ಎಲೆಕ್ಷನ್ ಮಾಡಿ, ಕಾಂಗ್ರೆಸ್ ವತಿಯಿಂದ ತಾವೆಲ್ಲರೂ ನಿಲ್ಲಿ, ನಿಮಗೆ ವಿರೋಧವಾಗಿ ನಾನು ಒಬ್ಬನೇ ನಿಂತು ನನ್ನ ಕಾನ್‌ಸಿಟ್ಯೂಯೆನ್ಸಿಯಿಂದ ಗೆದ್ದು ಬರುತ್ತೇನೆ. ಇಲ್ಲ ಅಂದರೆ ನಾನು ರಾಜೀನಾಮೆ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯಅಧ್ಯಕ್ಷರೇ, ಮಾನ್ಯಸದಸ್ಯರಾದ ಎಸ್. ವೈ. ಪಾಟೀಲರು ಬಹಳ ಸ್ವಾರಸ್ಯವಾಗಿ ಭಾಷಣ ಮಾಡಿದರು, ಈ ವಿಷಯವನ್ನು ಇವರ ಮುಖ್ಯಸ್ಥರು ಕೂಡ ಹೇಳಿದ್ದಾರೆ. ಅದರ ಬಗ್ಗೆ ಡೆಕ್ಕನ್ ಹೆರಾಲ್ಡ್ ದಿನಪತ್ರಿಕೆಯಲ್ಲಿ ನೋಡಬಹುದು. ಇವೊತ್ತು ತಾವು ಸೀರೆಗಳನ್ನು ಹಂಚಿ ಕುಪ್ಪಸಗಳನ್ನು ಹಂಚಿ ಓಟುಗಳನ್ನು ಪಡೆದುಕೊಂಡಿದ್ದೀರಾ ಎಂದು

ಹೇಳಿದರೆ ಇವರ ಅರ್ಥ ಏನಾಗುತ್ತದೆ ಎಂದು ನೋಡಬೇಕು. ಇವೊತ್ತು ದೇಶದಲ್ಲಿರತಕ್ಕ ಬಡವರು, ಬಲ್ಲಿದರು, ಬುದ್ಧಿಜೀವಿಗಳು ಎಲ್ಲರೂ ಓಟು ಮಾಡುತ್ತಾರೆ, ತಾವು ಈ ರೀತಿ ಹೇಳಿ ಓಟುದಾರರೆಲ್ಲರಿಗೂ ಅಪಮಾನ ಮಾಡಬೇಡಿ, ನಾವು ಬೇರೆ ಪಕ್ಷದವರು ಗೆದ್ದರೆ ಮಾನ್ಯತೆ ಕೊಡುತ್ತೇವೆ ಆದರೆ ತಾವು ಬಹಳ ಸಾಧ್ಯವಸ್ತರು ಎಂದು ಹೇಳಬೇಡಿ. ಇವೊತ್ತು ನಾವು ಜನರ ಮನಸ್ಸನ್ನು ಒಲಿಸಿ ಗೆದ್ದಿದ್ದೇವೆ. ನಾವು ಚುನಾವಣೆಗೆ ನಿಲ್ಲಿಸುತ್ತೇವೆ. ತಾವು ನಿಲ್ಲಿಸಿ ಗೆದ್ದು ಬಂದಮೇಲೆ ಯಾರು ರಾಜೀನಾಮೆ ಕೊಡಬೇಕಾಗುತ್ತದೆ ಗೊತ್ತಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ರಾಜೀನಾಮೆ ಕೊಡಬೇಕಾಗಿ ಬಂದಾಗ ಕೊಡೋಣ, ಅದನ್ನು ಮಾನ್ಯ ಪಾಟೀಲರು ಹೇಳಿದ್ದೇ ಅಲ್ಲ, ಈ ಮಾತನ್ನು ಮಾನ್ಯಮುಖ್ಯಮಂತ್ರಿಗಳು ಈ ಸಭೆಯಲ್ಲಿ ಹೇಳಿದ್ದಾರೆ. ಮತದಾರರು ಕರಪ್ಟ್ ಆದಾಗ, ಸರ್ಕಾರ ಕರಪ್ಟ್ ಆಗುತ್ತದೆ ಅದನ್ನು ಒಪ್ಪಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ! ಈ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಈ ಸಭೆಯಲ್ಲೇ ಹೇಳಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮತದಾರರು ಕರೆಪ್ಟ್ ಆದಾಗ, ಅಧಿಕಾರದಲ್ಲಿರುವವರು ಕರೆಪ್ಟ್ ಆಗುತ್ತಾರೆ ಎಂದು ಒಂದು ಪ್ರಿನ್ಸಿಪಲ್ ಪ್ರಕಾರ ಹೇಳಿದ್ದಾರೆ.

ಶ್ರೀ ಹೆಚ್. ಡಿ. ದೇವೇಗೌಡ.—ಈಗ ಮಂಡ್ಯ ಪೋಲೀಸ್ ಸ್ಟೇಷನ್‌ನಲ್ಲಿ ಸೀರೆಗಳು ಇರತಕ್ಕ ಕಾರ್ ಸೀಜ್ ಮಾಡಿರುವ ಬಗ್ಗೆ ಪರಿಶೀಲನೆ ಮಾಡಿಸಿ. ಈಗ ಅಲ್ಲಿ ಎಸ್. ಪಿ. ವರ್ಗ ಆಗಿದ್ದಾರೆ,

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಪಾಟೀಲರು ಹೇಳಿದ್ದರ ಬಗ್ಗೆ ನಾನು ಉದ್ದವಾಗಿ ಮಾತನಾಡಲಿಕ್ಕೆ ಪ್ರಯತ್ನ ಮಾಡಿಲ್ಲ. ನಾವು ಹಣ ಕೊಟ್ಟು ಜಯಗಳಿಸಿದ್ದೇವೆ ಎಂದು ಮಾತಾನಾಡಿದರು, ಅದರ ಬಗ್ಗೆ ತಾವು ಪತ್ರಿಕೆಗಳಲ್ಲಿ ಓದಿರಬಹುದು. ಪ್ರತಿದಿವಸ ಬರತಕ್ಕ ಆರ್ಟಿಕಲ್ಸ್ ನೋಡಿರಬಹುದು. ಆದರೆ ಎಲ್ಲರೂ ಹಣ ತೆಗೆದುಕೊಂಡು ಓಟು ಕೊಟ್ಟಿದ್ದಾರೆ ಎಂದು ಹೇಳುವುದು ಮತದಾರರೆಲ್ಲರಿಗೂ ಅಪಮಾನ ಮಾಡಿದಂತಾಗುತ್ತದೆ. ಆ ರೀತಿ ಹೇಳುವುದು ಸರಿಯಲ್ಲ ಎಂದು ಹೇಳುತ್ತೇನೆ. ಇವೊತ್ತು ಎಲ್ಲರಿಗೂ ಕೂಡ ಓಟು ಕೊಡತಕ್ಕ ಹಕ್ಕು ಇದೆ. ಅವರು ಯಾರಿಗೆ ಓಟು ಕೊಡಬೇಕು ಎನ್ನುವುದನ್ನು ಯೋಜನೆ ಮಾಡಿ ಕೊಟ್ಟಿದ್ದಾರೆ. ನಾವು ಹಣ ಕೊಟ್ಟು ಓಟುಗಳಿಸುತ್ತೇವೆ ಎಂದು ಹೇಳುವುದನ್ನು ಮರೆತುಕೊಳ್ಳಬೇಕು. ಜನರ ಮನಸ್ಸನ್ನು ಒಲಿಸಿ ಮತಗಳನ್ನು ತೆಗೆದುಕೊಳ್ಳಬೇಕೇ ವಿನಹ ಬೇರೆ ಏನು ಮಾಡಲಿಕ್ಕೆ ಆಗುವುದಿಲ್ಲ. ಇವೊತ್ತು ಹರಿಜನರು, ಬಡವರು, ಮುಸ್ಲಿಮರು ಏನು ಇದ್ದಾರೆ, ಇವರ ಮೇಲೆ ಚುನಾವಣೆಯಾದಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಕೆಲವು ಹರಿಜನರನ್ನು ಊರು ಬಿಟ್ಟು ಓಡಿಸಿದ್ದಾರೆ. ಕೆಲವು ಹರಿಜನ ಹೆಣ್ಣುಮಕ್ಕಳನ್ನು ಅವಮಾನ ಮಾಡಿಸಿದ್ದಾರೆ.

ಶ್ರೀ ಎಸ್. ವೈ. ಪಾಟೀಲ್.—ಆ ಊರಿನ ಹೆಸರನ್ನು ಹೇಳಿ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಬಸವಲಿಂಗಪ್ಪನವರು ಪ್ರಚೋದನೆ ಉಂಟುಮಾಡುವ ಭಾಷಣ ಮಾಡುವುದು ಅವರಿಗೊಳಿತಲ್ಲ. ಪ್ರಚೋದನೆ ಮಾಡುವುದು ನಿಮಗೇ ಸೀಮಿತವಲ್ಲ, ಬೇರೆಯವರಿಗೂ ಮಾಡುವುದಕ್ಕೆ ಬರುತ್ತದೆ. ಆದುದರಿಂದ, ಮಾನ್ಯ ಸದಸ್ಯರು ದೂರ ಬೆಳೆಸಬಾರದು. ತಾವು ಹಿರಿಯ ಸದಸ್ಯರು, ಜವಾಬ್ದಾರಿಯಿಂದ ಮಾತನಾಡುತ್ತಿದ್ದೀರಿ. ಆದರೆ, ಹೀಗೆ ಪ್ರಚೋದನೆ ಮಾಡುವುದು ಯಾರಿಗೂ ಒಳ್ಳೆಯದಲ್ಲ. ಇಂಥಾ ಘಟನೆಗಳಿಗೆ ಸಂಬಂಧಪಟ್ಟವರ್ಯಾರೇ ಇರಲಿ, ಅವರ ಮೇಲೆ ಸರ್ಕಾರ ಶಿಕ್ಷೆ ವಿಧಿಸಲಿ. ಕರ್ನಾಟಕದಲ್ಲಿ ಹರಿಜನ ಮೇಲೆ ಮತ್ತು ಮಹಮದೀಯರ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆಂದು ಹೇಳಿ, ತಾವು ಪ್ರಚೋದನೆಯನ್ನುಂಟು ಮಾಡುವುದು ಒಳ್ಳೆಯದಲ್ಲ. ಸ್ಪಷ್ಟ ನಿದರ್ಶನಗಳಿದ್ದರೆ ತಿಳಿಸಿ. ಮತ್ತು ಅದರ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವನ್ನೂ ತಿಳಿಸಿ, ನಾವೂ ಒಪ್ಪಿಕೊಳ್ಳುತ್ತೇವೆ. ಆದುದರಿಂದ, ಹೀಗ ಸರ್ವೆಸಾಮಾನ್ಯವಾಗಿ ಮಾತನಾಡಿ, ಪ್ರಚೋದನೆಯನ್ನುಂಟು ಮಾಡುವುದನ್ನು ದಯಮಾಡಿ ತಡೆಹಿಡಿಯಿರಿ.

ಶ್ರೀ ಬಿ. ಬಸವಲಿಂಗಪ್ಪ.—ನನ್ನ ಗಮನಕ್ಕೆ ಬಂದಿರುವುದನ್ನು ನಾನು ತಿಳಿಸಿದ್ದೇನೆ. ಎಲ್ಲರ ಮೇಲೂ ಆಗಿದೆ ಎಂದು ನಾನು ಹೇಳಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಹಾಗಾದರೆ ಇಲ್ಲ ಏತಕ್ಕೆ ಹೇಳಿದಿರಿ?

ಶ್ರೀ ಬಿ. ಬಸವಲಿಂಗಪ್ಪ.—ನಾನು ಹಾಗೆ ಹೇಳಲಿಲ್ಲ.

ಶ್ರೀ ಹೆಚ್. ಡಿ, ದೇವೇಗೌಡ.—ಒಂದು ಜನಾಂಗವನ್ನು ಇನ್ನೊಂದು ಜನಾಂಗದ ಮೇಲೆ ಎತ್ತಿಕಟ್ಟುವುದು ಮರ್ಯಾದೆ ತರುವ ವಿಷಯ ವಲ್ಲ.

ಶ್ರೀ ಬಿ. ಬಸವಲಿಂಗಪ್ಪ —ಇಂಥಾ ಅನೇಕ ನಿದರ್ಶನಗಳು ಕೇಳಿಬಂದಿವೆ.

ಶ್ರೀ ಎಚ್. ಎಂ. ಚನ್ನಬಸಪ್ಪ —ಮಾನ್ಯ ಅಧ್ಯಕ್ಷರೇ ಆ ಕಡೆಯ ಸದಸ್ಯರಾಗಲೀ, ಈ ಕಡೆಯ ಸದಸ್ಯರಾಗಲೀ ಜನರಲೈಸ್ ಮಾಡಿ ಮಾತನಾಡುವುದು ಸರಿಯಲ್ಲ. ಚುನಾವಣೆ ಸಮಯದಲ್ಲಿ ಅವರು ಹಾಗೆ ಮಾಡಿದರು ಇವರು ಹೀಗೆ ಮಾಡಿದರು ಎಂದು ಜನರಲೈಸ್ ಆಗಿ ಹೇಳುವುದು ಸರಿಯಲ್ಲ ಯಾರಾದರೂ ಸ್ಪಷ್ಟ ನಿದರ್ಶನಗಳನ್ನು ಸರ್ಕಾರದ ಗಮನಕ್ಕೆ ತಂದರೆ, ಸರ್ಕಾರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತದೆ ಮತ್ತು ಯಾರು ಚುನಾವಣೆ ಸಂದರ್ಭದಲ್ಲಿ ಪಂಚೆ ಸೀರೆ ಕೊಟ್ಟು ಮತ ಪಡೆದ ಪ್ರಕರಣಗಳಿದ್ದರೆ, ಅವರ ಆಯ್ಕೆಯನ್ನು ರದ್ದು ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆ ಆದುದರಿಂದ, ಜನರಲೈಸ್ ಮಾಡಿ ಮಾತನಾಡುವ ಪದ್ಧತಿಯನ್ನು ಮಾನ್ಯ ಸದಸ್ಯರು ಆದಷ್ಟು ತಪ್ಪಿಸಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಮಾನ್ಯ ಚನ್ನಬಸಪ್ಪನವರು ಯಾವಾಗಲೂ ಬೇರೆಯವರಿಗೆ ಬುದ್ಧಿ ಹೇಳುತ್ತಾ ಇರುತ್ತಾರೆ. ಅದನ್ನು ನಾವು ಕೇಳಿದ್ದೇವೆ. ಈ ಸಭೆಯಲ್ಲಿ ಹೇಗೆ ಮಾತನಾಡಬೇಕೆಂದು ನನಗೆ ಗೊತ್ತಿದೆ ಮತ್ತು ಮಾನ್ಯ ದೇವೇಗೌಡರಿಗೂ ಗೊತ್ತಿದೆ. ನಾನು ಸ್ಪಷ್ಟವಾಗಿಯೇ ಮಾತನಾಡಿದ್ದೇನೆ. ಬಡವರಿಗೆ ಆಗುತ್ತಿರುವ ಅನ್ಯಾಯಗಳನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ವಿರೋಧಪಕ್ಷದವರಾಗಲೀ ಆಡಳಿತ ಪಕ್ಷದವರಾಗಲೀ, ಆದಷ್ಟು ಬಡವರಿಗೆ ಆಗುವ ಅನ್ಯಾಯವನ್ನು ತಡೆಗಟ್ಟಲಿಕೆ ಪ್ರಯತ್ನ ಮಾಡಬೇಕೆನ್ನುವ ಉದ್ದೇಶದಿಂದ ನಾನು ಈ ಮಾತನ್ನು ಹೇಳಿದನೇ ವಿನಹ ಅನ್ಯಥಾ ಇಲ್ಲ. ನಾನು ಪ್ರಚೋದನೆ ಮಾಡಲಿಕ್ಕೆ ಪ್ರಯತ್ನ ಮಾಡಲಿಲ್ಲ, ಮಾಡುವುದೂ ಇಲ್ಲ, ನಾನು ಮಾಡುತ್ತೇನೆ ಎನ್ನುವ ನಂಬಿಕೆಯೂ ನಿಮಗಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ—ಇಲ್ಲ ಜಾತಿ ಹೆಸರು ತರುವುದು ಬೇಡ. ಹಾಗೆ ಮಾಡುವುದಾದರೆ ನನ್ನ ಬಳಿ ಬೇಕಾದಷ್ಟು ಆಧಾರಗಳಿವೆ. ಅವುಗಳೆಲ್ಲವನ್ನೂ ನೀವೇ ಮಾಡಿಸಿದರೆಂದು ನಾನು ಹೇಳಲೆ?

SRI B BASAVALINGAPPA.—With reference to such incidents let the Government take immediate action If the culprits are there, let them be punished I am trying to bring to your notice such incidents that have occured all over the State ಮಾನ್ಯ ವಿರೋಧ ಪಕ್ಷದ ಸದಸ್ಯರು ಈ ಮಾತನ್ನು ಹೇಳಿದಾಗ ನಾನು ಹಾಗೆ ನುಡಿದನೇ ಹೊರತು ಅನ್ಯಥಾ ಇಲ್ಲ. ನಮ್ಮ ಸರ್ಕಾರ ಒಂದು ಮಹತ್ತರವಾದ ಸಾಧನೆಯನ್ನು ಮಾಡಿದೆ ಅದೇನೆಂದರೆ, ಭೂಸುಧಾರಣೆ.

ಶ್ರೀ ಬಿ. ಪುಟ್ಟಸ್ವಾಮಯ್ಯ —ಯಾವ ಸರ್ಕಾರ ಸ್ವಾಮಿ?

ಶ್ರೀ ಬಿ. ಬಸವಲಿಂಗಪ್ಪ.—ನಾನು ನಮ್ಮ ಸರ್ಕಾರವೆಂದು ಹೇಳಲಿಲ್ಲವೆ? ಹಿಂದೆ ಇದ್ದ ಸರ್ಕಾರ ನಿಮ್ಮದು, ಈಗಿರುವುದು ನಮ್ಮದು.

ಶ್ರೀ ಬಿ ಪುಟ್ಟಸ್ವಾಮಯ್ಯ.—ಈ ಮಾತನ್ನು ನಿಮ್ಮ ಬಾಯಿಂದ ಕೇಳಬೇಕೆಂದು ಬಹಳ ನಿರೀಕ್ಷಣೆ ಮಾಡಿಕೊಂಡಿದ್ದೆವು?

ಶ್ರೀ ಬಿ ಬಸವಲಿಂಗಪ್ಪ.—ಬಹಳ ಸಂತೋಷ. ಕರ್ನಾಟಕದಲ್ಲಿನ ಭೂಸುಧಾರಣೆ ಕಾನೂನು ಬಹಳ ವೈಶಿಷ್ಟ್ಯದಿಂದ ಕೂಡಿದೆ ಈ ದೇಶದ ಎಲ್ಲ ರಾಜ್ಯಗಳಲ್ಲೂ ಭೂಸುಧಾರಣೆ ವಿಷಯದಲ್ಲಿ ಮಾಡಿರುವ ಕೆಲಸವನ್ನು ನೋಡಿದ್ದೇನೆ; ಪರಿಶೀಲಿಸಿದ್ದೇನೆ. ಆದರೆ, ಕರ್ನಾಟಕದಲ್ಲಿರುವ ಭೂಸುಧಾರಣೆಯ ಕಾನೂನು ಬಹಳ ವೈಶಿಷ್ಟ್ಯದಿಂದ ಕೂಡಿದ್ದು ಸ್ತುತ್ಯಾರ್ಹವಾದುದು

ಸ್ಪಷ್ಟವಾಗಿಹೇಳುತ್ತೇನೆ. ಗೇಣಿದಾರರನ್ನು ಮಾಲಿಕನನ್ನಾಗಿ ಮಾಡುವ ವಿಚಾರ, ಕರ್ನಾಟಕದ ವಿನಹ ಬೇರೆ ಯಾವ ರಾಜ್ಯದಲ್ಲೂ ಇಲ್ಲ, ನಮ್ಮ ಸರ್ಕಾರ ಈ ಸಾಧನೆ ಮಾಡಿದೆ ಮತ್ತು ಸುಮಾರು ನಲವತ್ತು ಲಕ್ಷಕ್ಕೂ....

ಶ್ರೀ ಹೆಚ್. ಡಿ. ದೇವೇಗೌಡ.—ಇಲ್ಲಿ ಮಹತ್ತರವಾದ ಕೆಲಸವಾದುದರಿಂದಲೇ ಜನ ಮತ ಕೊಟ್ಟರು, ಇಂಥಾ ಮಹತ್ತರವಾದ ಕೆಲಸವನ್ನೂ ಬೇರೆ ರಾಜ್ಯಗಳಲ್ಲಿ ಮಾಡಿಲ್ಲ ಎಂದು ಹೇಳುತ್ತಿದ್ದೀರಿ. ಆಂಧ್ರದಲ್ಲಿ ನಿಮ್ಮದೇ ಸರ್ಕಾರವಿದೆ; ಅವರು ಈ ಕೆಲಸವನ್ನು ಮಾಡಿಲ್ಲ. ಆದರೂ ಅಲ್ಲಿ ಮತ ಏತಕ್ಕೆ ಕೊಟ್ಟರು? ತಮಿಳುನಾಡಿನಲ್ಲಿ ಏತಕ್ಕೆ ಮತ ಕೊಟ್ಟರು? ಕೆಲಸ ಮಾಡಿರುವುದು ನಮ್ಮ ರಾಜ್ಯದಲ್ಲೇ ಎಂದು ಹೇಳಿದ ಮೇಲೆ, ದಕ್ಷಿಣದ ಇನ್ನು ಮೂರು ರಾಜ್ಯಗಳಲ್ಲಿ ಆಳುವ ಕಾಂಗ್ರೆಸ್ಸಿಗೆ ಹೇಗೆ ಮತ ಬಂದಿತು?

ಶ್ರೀ ಬಿ. ಬಸವಲಿಂಗಪ್ಪ.—ಮದರಾಸು ಮತ್ತು ಆಂಧ್ರದಲ್ಲಿ ಏನೂ ಮಾಡಲಿಲ್ಲ ಎಂದು ನಾನು ಹೇಳಲಿಲ್ಲ, ನಮ್ಮ ಕರ್ನಾಟಕದಲ್ಲಿ ವಿಶೇಷವಾಗಿ ಮಾಡಿದ್ದಾರೆಂದು ಹೇಳಿದೆ. ಬೇರೆ ಕಡೆ ಗೇಣಿದಾರರನ್ನು ಭೂ ಮಾಲೀಕರನ್ನಾಗಿ ಮಾಡಲಿಕ್ಕೆ ಪ್ರಯತ್ನ ಮಾಡಿಲ್ಲ. ಇನ್ನು ಮುಂದೆ ಮಾಡಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಂಥಾ ಸಾಧನ ಮಾಡಿದ ಸರ್ಕಾರದ ಮುಖಂಡರು 99 ಅಪಾದನೆಗಳಿಗೆ ಗುರಿಯಾಗಿದ್ದಾರೆ ನೀವು ನಿಮ್ಮ ಸಾಧನೆಗೆ ಬೆನ್ನು ತಟ್ಟುಕೊಳ್ಳುತ್ತೀರಿ. ನಾವು ನಿಮಗೆ ಬೆನ್ನುತಟ್ಟುತ್ತೇವೆ. ಮಾನ್ಯ ಬಸವಲಿಂಗಪ್ಪನವರು ನಮ್ಮ ಜಿಲ್ಲೆಯವರು ಅವರು ಬಿಚ್ಚುಮನಸ್ಸಿನಿಂದ ಎಲ್ಲವನ್ನೂ ಹೇಳಿಬಿಡುತ್ತಾರೆ. ಆದುದರಿಂದ, ಇದರ ಬಗ್ಗೆ ತಮ್ಮ ಪ್ರತಿಕ್ರಿಯೆ ಏನು?

ಶ್ರೀ ಬಿ. ಬಸವಲಿಂಗಪ್ಪ —ಈ ಅಪಾದನೆಗಳಿಗೆ ಉತ್ತರ ಕೊಡುವ ಹಕ್ಕು ಯಾರಿಗಿದೆ ಅವರು ಕೊಡುತ್ತಾರೆ. ನನಗೇತಕ್ಕೆ ಇದರ ವ್ಯವಹಾರ.

ಶ್ರೀ ಬಿ ಪುಟ್ಟಸ್ವಾಮಯ್ಯ.—ತಾವು ಹರಿಜನ ಮುಖಂಡರು. ರಾಷ್ಟ್ರ ಮಟ್ಟದ ವ್ಯಕ್ತಿಗಳು ತಾವು. ತಾವು ರಾಜ್ಯಮಟ್ಟದ ವ್ಯಕ್ತಿಗಳಲ್ಲ. ತಾವು ಅನೇಕ ರಾಜ್ಯಗಳಿಗೆ ಪ್ರವಾಸ ಹೋಗಿ ಬಂದಿದ್ದೀರಿ, ನಿಮ್ಮ ಮುಖ್ಯ ಮಂತ್ರಿಗಳ ಮೇಲೆ 99 ಅಪಾದನೆ ಮಾಡಿದವರು ನಾವೋ ನೀವೋ, ಇದರಲ್ಲಿ ಹುಳುಕಿದ್ದರ ನೀವೇ ಹೇಳಿ?

ಶ್ರೀ ಬಿ. ಬಸವಲಿಂಗಪ್ಪ.—ಅಪಾದನೆಗಳು, ಅಪಾದನೆಗಳೇ:

SRI D B. KALMANKAR.—It has been enquired into and it has been decided that these charges are not correct.

ಶ್ರೀ ಕೆ. ಎಚ್. ರಂಗನಾಥ್. —ನಾವು ಈಗ ರಾಜ್ಯಪಾಲರ ಭಾಷಣಕ್ಕೆ ಅನುಮೋದನೆ ಸಲ್ಲಿಸುತ್ತಿರುವ ವಿಚಾರದಲ್ಲಿ ಮಾತನಾಡುತ್ತಿರುವುದು. ಮಾನ್ಯ ವಿರೋಧ ಪಕ್ಷದ ಸದಸ್ಯರಿಗೂ ಮಾತನಾಡುವ ಅವಕಾಶ ಸಿಗುತ್ತದೆ ಆಗ ಅವರು ಹೇಳುವುದನ್ನೆಲ್ಲಾ ಹೇಳಲಿ. ಅದಕ್ಕೆ ಉತ್ತರ ಕೊಡುವ ಕಾಲವೂ ಬರುತ್ತದೆ. ಪ್ರಶ್ನೆ ಉಪಪ್ರಶ್ನೆಗಳನ್ನು ಕೇಳುತ್ತಾ ಹೋದರೆ, ಇದು ಎಲ್ಲಿಗೆ ಮುಗಿಯುತ್ತದೆ? ಮೊನ್ನೆ ತಾನೇ ಕಾಶ್ಮೀರ ಸರ್ಕಾರವನ್ನು ವಿಸರ್ಜನೆ ಮಾಡಿದಾಗ, ನಿಲುವಳಿ ಸೂಚನೆಯನ್ನು ಮಂಡಿಸುತ್ತಾ, ಇದನ್ನು ಅನ್‌ಪ್ಲೆಸೆಂಟ್ ಡ್ಯೂಟಿ ಎಂದು ಮಾನ್ಯ ಕರಣ್‌ಸಿಂಗ್ ಅವರು ಹೇಳಿರುವುದು ಮೊನ್ನೆ ತಾನೇ ಪತ್ರಿಕೆಯಲ್ಲಿ ಬಂದಿದೆ. ಇದನ್ನು ಓದಿ ನನಗೆ ಬಹಳ ಸಂತೋಷವಾಯಿತು.

11-30 A. M.

ನಿನ್ನೆ ಮೊನ್ನೆ ಇದ್ದಂಥ ಪರಿಸ್ಥಿತಿಗೂ ಇವತ್ತಿನ ಪರಿಸ್ಥಿತಿಗೂ ವ್ಯತ್ಯಾಸವಿದೆ. ವಿರೋಧ ಪಕ್ಷದವರಿಗೆ ಮಾತನಾಡಲಿಕ್ಕೆ ಬೇಕಾದಷ್ಟು ಅವಕಾಶ ಸಿಕ್ಕುತ್ತದೆ. ಮಾನ್ಯ ಸದಸ್ಯರು ತಮ್ಮ ನಿರ್ಣಯವನ್ನು ಮಂಡಿಸುತ್ತಿದ್ದಾರೆ. ಅದನ್ನು ಅನುಮೋದನೆ ಮಾಡುತ್ತೇವೆ. ಸರ್ಕಾರ ಮಾಡಿರತಕ್ಕ ಕೆಲಸವನ್ನು ರಾಜ್ಯಪಾಲರು ಏನು ಹೇಳಿದ್ದಾರೆ ಆ ಬಗ್ಗೆ ನಿರ್ಣಯವನ್ನು ಮಂಡನೆ ಮಾಡಿದ್ದಾರೆ. ಅದನ್ನು ಪುಷ್ಟೀಕರಿಸಿ ಮಾತನಾಡತಕ್ಕದ್ದು ಸಾಂಪ್ರದಾಯಿಕವಾದುದು ಅದನ್ನು ವಿಚಾರ ಮಾಡುತ್ತಾ ಇರುವಾಗ ಮಾನ್ಯ ವಿರೋಧ ಪಕ್ಷದ ಸದಸ್ಯರು ಸುಮ್ಮನೆ ಹಾಗೆ, ಹೀಗೆ ಎಂದು

ಮಾತನಾಡಿದರೆ ಕಷ್ಟವಾಗುತ್ತದೆ. ಅವರಿಗೂ ಹೇಳುವುದಕ್ಕೆ ಅವಕಾಶವಿದೆ. ದೇವೇಗೌಡರ ಹತ್ತಿರ ಕಡತ ಇದೆ ದಾಖಲೆಗಳಿವೆ. ಆ ಪ್ರಕಾರ ಅವರು ಮಾತನಾಡಬಹುದು. ಶ್ರೀಮಾನ್ ಪುಟ್ಟಸ್ವಾಮಯ್ಯನವರ ಹತ್ತಿರ ಕಡತ ಏನೂ ಇಲ್ಲ; ಅವರು ವಿಷಯಗಳನ್ನು ಮನಸ್ಸಿನಲ್ಲಿಟ್ಟು ಕೊಂಡು ಹಾಗೆಯೇ ಮಾತನಾಡುತ್ತಾರೆ. ಅದೂ ಆಗಬಹುದು. ನಮ್ಮ ಸರ್ಕಾರ ಸಾಧನೆ ಮಾಡಿರ ತಕ್ಕದ್ದನ್ನು ಈ ಸಭೆಯ ಮುಖಾಂತರ ರಾಜ್ಯದ ಜನತೆಗೆ ಹೇಳತಕ್ಕ ಕೆಲಸ ಮಾಡುತ್ತಿದ್ದೇವೆ. ಈಗ ಮಧ್ಯೆ ಮಧ್ಯೆ ಮಾತನಾಡಿದರೆ ತೊಂದರೆಯಾಗತಕ್ಕ ಪರಿಸ್ಥಿತಿ ಬರುತ್ತದೆ. ಈ ದೃಷ್ಟಿಯಿಂದ ಮಾನ್ಯ ವಿರೋಧಪಕ್ಷದ ಸದಸ್ಯರು ಸಹಕಾರ ನೀಡಬೇಕು. ಇಲ್ಲದೇ ಇದ್ದರೆ ಲೋಕಸಭೆಯಲ್ಲಿ ಏನು ಹೊಸದಾಗಿ ಸಂಪ್ರದಾಯ ಪ್ರಾರಂಭವಾಗಿದೆ ಎಂದು ಹೇಳಿದ್ದಾರೆ ಅದಕ್ಕೆ ನಾವು ತೊಂದರೆ ತಂದುಕೊಡುವುದಿಲ್ಲ ವಿರೋಧಪಕ್ಷದವರು ಆ ಅಪಾದನೆಗೆ ಗುರಿಯಾಗುತ್ತಾರೆ ಎಂದು ಹೇಳ ಬೇಕಾಗುತ್ತದೆ. ಆದ್ದರಿಂದ ಆ ರೀತಿ ಮಾಡಬಾರದು ಎಂದು ಕಳಕಳಿಯಿಂದ ಪ್ರಾರ್ಥನೆ ಮಾಡಿ ಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ವಿರೋಧ ಪಕ್ಷದವರು ಅವಕಾಶ ತಂದುಕೊಡುತ್ತಾರೆ ಎಂದು ಮಾನ್ಯಸಚಿವರು ಹೇಳಿದರು........

Sri K. H. Ranganath.—You will have your full say in the matter. That is what I meant. Immediately after the motion is moved, the first opportunity will be given to the Hon'ble Leader of the Opposition to have his full say in the matter.

ಶ್ರೀ ಎಚ್. ಡಿ. ದೇವೇಗೌಡ.—ಈ ಸಭೆಯಲ್ಲಿ ನಾವು ನೀವು 15 ವರ್ಷದಿಂದ ಜೊತೆಯಲ್ಲಿ ಕುಳಿತು ಕಲಸ ಮಾಡಿದ್ದೇವೆ. ಬಹುಶಃ ವಿರೋಧಪಕ್ಷದ ಸದಸ್ಯರಿಗೆ ಸಭೆಯ ಅಂತಸ್ತನ್ನು ಕಡಿಮೆ ಮಾಡುವ ಉದ್ದೇಶ ಇದೆ ಎಂಬ ಅಭಿಪ್ರಾಯ ನಿಮ್ಮ ಮನಸ್ಸಿನಲ್ಲಿದ್ದರೆ ಅದನ್ನು ದಯಮಾಡಿ ತಳ್ಳಿಹಾಕಿ. ಮಾನ್ಯ ಬಸವಲಿಂಗಪ್ಪನವರು ಅಲ್ಲಿ ದೇವೇಗೌಡರ ಹತ್ತಿರ ಕಡತ ಇದೆ ಎಂದು ಪದೇಪದೇ ಚುಚ್ಚಿ ಚುಚ್ಚಿ ಹೇಳುತ್ತಿದ್ದಾರೆ. ಅದಕ್ಕೋಸ್ಕರ ನಾವು ಮಾತನಾಡಬೇಕಾಗಿ ಬಂತು. ಪ್ರೋಪಗಂಡೆ ಯವರು ಫೈನಾನ್ಸ್ ಮಿನಿಸ್ಟ್ರಾಗಿ ಹೌಸಿಂಗ್ ಪ್ರೋಗ್ರಾಂ ಸ್ಕಟಲ್ ಮಾಡಿದ್ದಾರೆ. ಪುಸ್ತಕ ಪ್ರಿಂಟ್ ಮಾಡಿ ಹಂಚಿದ್ದಾರೆ. ನೀವು ಸರ್ಕಾರದ ಸಾಧನೆಗಳ ಬಗ್ಗೆ ಏನು ಸಮರ್ಥನೆ ಮಾಡುತ್ತೀರಿ ಅದರ ಬಗ್ಗೆ ವಿವರಣೆ ಕೊಡಿ ಎಂದು ಕೇಳಿದರೆ ಅದು ತಪ್ಪು ಎಂದು ಹೇಳಿದರೆ ಹೇಗೆ ?

Sri K. H. Ranganath.—If the Hon'ble Member were to yield, then I can understand the interruption.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಿಗೆ ಮತ್ತು ಪುಟ್ಟಸ್ವಾಮಯ್ಯ ನವರಿಗೆ ಎಷ್ಟೋ ಸಾರಿ ಎಚ್ಚರಿಕೆ ಕೊಟ್ಟಿದ್ದೇನೆ. ತಾವು ಯಾತಕ್ಕೆ ಹಗಲೆಲ್ಲಾ ನಿಂತುಕೊಳ್ಳಬೇಕು ? ತಮಗೆ ಮಾತನಾಡುವುದಕ್ಕೆ ಅವಕಾಶ ಸಿಕ್ಕುತ್ತದೆ ಮಾನ್ಯ ಬಸವಲಿಂಗಪ್ಪನವರೂ, ಕೂಡ ಈಲ್ಡ್ ಆಗ ಬಾರದು. ಪ್ರಚೋದನೆ ಮಾಡತಕ್ಕ ಭಾಷಣ ಮಾಡುವುದಕ್ಕೆ ಹೋಗಬಾರದು.

ಶ್ರೀ ಬಿ ಬಸವಲಿಂಗಪ್ಪ.—ಈಗ ಮಾನ್ಯ ವಿರೋಧಪಕ್ಷದ ಸದಸ್ಯರು ಕೇಳತಕ್ಕ ಪ್ರಶ್ನೆಯಲ್ಲಿ ಅಸಂಭವವಾದುದೇನಿಲ್ಲ. ಕೇಳಲಿ, ಉತ್ತರ ಕೊಡುವುದು ನಮ್ಮ ಧರ್ಮ. ನಾನು ಉತ್ತರ ಕೊಡು ವುದಕ್ಕೆ ಧೈರ್ಯವಾಗಿ ನಿಂತುಕೊಂಡಿದ್ದೇನೆ. ಏನೇನು ಸಂಶಯ ನಿಮ್ಮ ಮನಸ್ಸಿನಲ್ಲಿವೆಯೋ ಅದನ್ನು ನಿವಾರಣೆ ಮಾಡೋಣ. Healthy interruption is always welcome. I can answer them. At the same time do not interrupt too often

ಅಧ್ಯಕ್ಷರು —ಈ ಚರ್ಚೆಗೆ ಬೇರೆ ಏರ್ಪಾಡು ಮಾಡೋಣ. ಮಾನ್ಯಸದಸ್ಯರು ಈಗ ರಾಜ್ಯ ಪಾಲರ ಭಾಷಣದ ಮೇಲೆ ಮಾತನಾಡಬೇಕು.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ಮಾನ್ಯ ಸ್ನೇಹಿತರು ನೀವು ಇಂಟರಪ್ಟ್ ಮಾಡಬಹುದು, ಸಂತೋಷ ಆದರೆ ಜಾಸ್ತಿ ಮಾಡುವುದಕ್ಕೆ ಹೋಗಬಾರದು. ಭೂಸುಧಾರಣೆಯನ್ನು ನಮ್ಮ ರಾಜ್ಯದಲ್ಲಿ ಜಾರಿಗೆ ತಂದಿದ್ದೇವೆ. ಭೂಸುಧಾರಣೆ ಕ್ರಾಂತಿ ಭೂವ್ಯವಸ್ಥೆಯ ಕ್ರಾಂತಿಯಾಗಿದೆ.

ಇದನ್ನು ಪೂರ್ಣ ಮಾಡಲಿಕ್ಕೆ ಪ್ರಯತ್ನ ಮಾಡಿದ್ದರೆ ಎಷ್ಟು ದಿವಸ ಬೇಕಾಗಿತ್ತೋ, ಎಷ್ಟು ಕೋರ್ಟ್‌ಗಳು ಬೇಕಾಗಿತ್ತೋ ಹೇಳುವುದಕ್ಕಾಗುವುದಿಲ್ಲ. ಈ ಭೂಸುಧಾರಣೆಯಿಂದ ಸರ್ಕಾರ ಸಾಧನೆ ಮಾಡಿರತಕ್ಕ ಕೆಲಸ ಮಹತ್ತರವಾಗಿರತಕ್ಕದ್ದು. ಇದಕ್ಕೆ ಮೆಚ್ಚುಗೆ ವ್ಯಕ್ತಪಡಿಸಲೇಬೇಕು. ಲ್ಯಾಂಡ್ ಟ್ರಿಬ್ಯುನಲ್‌ಗಳು ಕೆಲವು ಸರಿಯಾಗಿ ಕೆಲಸ ಮಾಡಿವೆ, ಇನ್ನು ಕೆಲವು ಸರಿಯಾಗಿ ಮಾಡಿಲ್ಲ ಎಂಬ ದೂರುಗಳು ಬಂದಿವೆ. ಆದರೆ ಬಹುತೇಕ ಟ್ರಿಬ್ಯುನಲ್‌ಗಳು ಮೆಚ್ಚುಗೆ ವ್ಯಕ್ತಪಡಿಸುವ ರೀತಿಯಲ್ಲಿ ಕೆಲಸ ಮಾಡಿವೆ ಎಂದು ಸ್ಪಷ್ಟವಾದ ನನ್ನ ಅಭಿಪ್ರಾಯ ಕೋರ್ಟುಗಳು ಏನು ಕೆಲಸ ಮಾಡಬೇಕಾಗಿತ್ತೋ ಆ ಕೆಲಸವನ್ನು ಬಹಳ ನಿಸ್ಪೃಹತೆಯಿಂದ ಟ್ರಿಬ್ಯುನಲ್‌ಗಳು ಕೆಲಸ ಮಾಡಿವೆ. ಮನೆ ನಿವೇಶನ ಹಂಚಿಕೆ ಕಾರ್ಯವೂ ಹೆಚ್ಚಿನ ರೂಪದಲ್ಲಿ ನಡೆದಿದೆ. ಗೃಹನಿವೇಶನಗಳಿಗೆ ಸುಮಾರು 9 ಲಕ್ಷ ಬೇಡಿಕೆ ಇದ್ದು ಈಗಾಗಲೇ ಮುಕ್ಕಾಲು ಭಾಗದಷ್ಟು ಬೇಡಿಕೆಗಳನ್ನು ಪೂರೈಸಿದ್ದೇವೆ ಯೆಂಬುದು ಅಂಕಿಅಂಶಗಳಿಂದ ಗೊತ್ತಾಗಿದೆ. ಆದರೆ ಎಷ್ಟು ಆಗಿದೆ, ಎಷ್ಟು ಪೂರೈಸಿದೆ ಎಂಬ ವಿವರವನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅಂಕಿಅಂಶಗಳ ಪ್ರಕಾರ ಮುಕ್ಕಾಲು ಭಾಗದಷ್ಟು ಬೇಡಿಕೆ ಪೂರೈಸಿದೆ ಎಂದು ಹೇಳುತ್ತಿದ್ದೇನೆ. ಮನೆ ಕಟ್ಟುವ ವಿಚಾರದಲ್ಲಿ ಸರಿಯಾಗಿ ಕೆಲಸ ಆಗಿಲ್ಲ ಎಂದು ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನೂ ಕೂಡ ಈ ಬಗ್ಗೆ ಎರಡು ವರ್ಷದ ಹಿಂದೆ ಪ್ರಶ್ನೆ ಕೇಳಿದ್ದೆ. ಕೇಳಿದಾಗ ಹಾದು ಸಮಂಜಸವಾಗಿ ಕೆಲಸ ಆಗಿಲ್ಲ ಎಂಬ ಉತ್ತರ ಬಂತು. ಆಮೇಲೆ ಏನೇನು ಕೆಲಸ ಮಾಡಿದ್ದಾರೆ, ಏನೇನು ಸಾಧನೆಯಾಗಿದೆ ಎಂಬುದು ನನ್ನ ಗಮನಕ್ಕೆ ಬಂದಿಲ್ಲ. ಆದರೆ ಈ ರಿಪೋರ್ಟ್ ಪ್ರಕಾರ ಸರಿಯಾಗಿ ಸಮಂಜಸವಾಗಿ ಈ ಸರ್ಕಾರ ಕೆಲಸ ಮಾಡಿದೆ ಎಂದು ಅರ್ಥವಾಗುತ್ತದೆ. ಇದರಿಂದ ಜನಗಳಿಗೆ ಮೆಚ್ಚುಗೆಯಾಗಿದೆ. ಆದ್ದರಿಂದ ನಮ್ಮ ಕಾಂಗ್ರೆಸ್ ಪಕ್ಷಕ್ಕೆ ಲೋಕಸಭೆ ಚುನಾವಣೆಯಲ್ಲಿ ಓಟು ಕೊಟ್ಟಿದ್ದಾರೆ, ಅದರಲ್ಲಿ ನಾವು ಜಯಗಳಿಸಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಕೊಳಚೆ ಪ್ರದೇಶದ ಕಾರ್ಯಕ್ರಮದ ಬಗ್ಗೆ ಹೇಳೇ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಕೊಳಚೆ ಪ್ರದೇಶದ ಕೆಲಸ ಕಾರ್ಯಗಳ ಬಗ್ಗೆ ಈ ರಾಜ್ಯಪಾಲರ ಭಾಷಣದಲ್ಲಿ ಸಾಕಷ್ಟು ಸಾಹಿತ್ಯವನ್ನು ಕೊಟ್ಟಿದ್ದಾರೆ. ಕಾರ್ಪೊರೇಷನ್ನಿನವರು ಮತ್ತು ಟ್ರಸ್ಟ್ ಬೋರ್ಡಿನವರು ಅವರ ಜವಾಬ್ದಾರಿಯಿಂದ ಕೊಳಚೆ ಪ್ರದೇಶದ ಕೆಲಸವನ್ನು ಮಾಡಲಿಕ್ಕೆ ಪ್ರಯತ್ನ ಮಾಡಿದ್ದರೆ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ.—ಯಾತಕ್ಕೆ ಕೆಲಸ ಮಾಡಲಿಲ್ಲ ?

ಶ್ರೀ ಬಿ. ಬಸವಲಿಂಗಪ್ಪ.—ಕೆಲವು ಅಡಚಣೆಗಳು, ತೊಡಕುಗಳು ಬಂದವು. ಕೋರ್ಟುಗಳು ತಡೆ ಆಜ್ಞೆ ಕೊಟ್ಟು, ಹುಕುಂ ಕೊಟ್ಟಿದ್ದರಿಂದ ಸ್ವಲ್ಪ ನಿಧಾನವಾಯಿತು. ಕೋರ್ಟುಗಳೂ ಕೂಡ ಕೆಲಸಕಾರ್ಯಗಳನ್ನು ಚೆನ್ನಾಗಿ ಸಮರ್ಪಕವಾಗಿ ಮಾಡುತ್ತಿದ್ದು ಅಲ್ಲಿಯೂ ಈ ಕೆಲಸ ಪ್ರಾರಂಭ ವಾಗಿದೆ. ಬೋರ್ಡಿನವರು ಸರ್ವೆ ಮಾಡತಕ್ಕ ಕೆಲಸ, ಲ್ಯಾಂಡ್ ಅಕ್ವೈರ್ ಮಾಡತಕ್ಕ ಕೆಲಸ ಮತ್ತು ಡಿಕ್ಲೇರ್ ಮಾಡತಕ್ಕ ಕೆಲಸಗಳನ್ನು ಮಾಡಿದ್ದಾರೆ. ಒಂದು ವರ್ಷದಲ್ಲಿ ಈ ಕೆಲಸ ಪೂರೈಸು ತ್ತದೆ ಎಂದು ನನಗನ್ನಿಸುತ್ತದೆ. ಅದನ್ನೂ ಕಾದು ನೋಡೋಣ.

ಇನ್ನು ಅರ್ಬನ್ ವಾಟರ್‌ಸಪ್ಲೈ ಬಗ್ಗೆ ಕಾವೇರಿ ಪ್ರಾಜೆಕ್ಟಿನಿಂದ ಬೆಂಗಳೂರಿಗೆ ನೀರನ್ನು ಒದಗಿಸತಕ್ಕದ್ದಾಗಿದೆ. ಈ ಕೆಲಸವನ್ನು ನಾವು ರೆಕಾರ್ಡ್ ಟೈಂನಲ್ಲಿ ಮಾಡಿ ನೀರನ್ನು ಬೆಂಗಳೂರಿನ ಜನತೆಗೆ ಒದಗಿಸಿದ್ದೇವೆ. ಇದರ ಸೆಕಂಡ್ ಸ್ಟೇಜ್ ಪ್ರಾಜೆಕ್ಟ್ ತರಬೇಕು ಎಂದು ಪ್ರಾರಂಭ ಮಾಡಿದ್ದಾರೆ. ಬೆಂಗಳೂರಿನ ಅಕ್ಕಪಕ್ಕದ ಇಂಡಸ್ಟ್ರಿಯಲ್ ಸಬ್‌ರ್ಬ್ಸ್ ಏನು ಇವೆ ಅವಕ್ಕೂ ಕೂಡ ನೀರನ್ನು ಒದಗಿಸಬೇಕು ಎನ್ನುವ ಯೋಜನೆಯನ್ನು ಇಟ್ಟುಕೊಂಡಿದ್ದಾರೆ. ಇದು ಸ್ತುತ್ಯಾರ್ಹ ವಾದ ಕೆಲಸ ಎಂದು ನಾನು ಹೇಳುತ್ತೇನೆ. ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ಅಭಾವವನ್ನು ನಿವಾರಿಸತಕ್ಕ ಯೋಜನೆ, ಸಣ್ಣ ಸಣ್ಣ ಪಟ್ಟಣಗಳಿಗೆ, ಊರುಗಳಿಗೆ ನೀರನ್ನು ಸರಬರಾಜು ಮಾಡ ತಕ್ಕ ಯೋಜನೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ಇದೂ ಕೂಡ ಸ್ತುತ್ಯಾರ್ಹವಾದ ಕೆಲಸ ಎಂದು ನನಗನ್ನಿಸುತ್ತದೆ. ಸರ್ಕಾರದವರು ಈ ಯೋಜನೆಗಳೆಲ್ಲವನ್ನೂ ಆದಷ್ಟು ಜಾಗ್ರತೆಯಾಗಿ ಹೆಚ್ಚಿನ ರೀತಿಯಲ್ಲಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆಂದು ನನ್ನ ಅಭಿಪ್ರಾಯ ಇದೆ.

ಲೇಬರ್ ಇಂಡಸ್ಟ್ರಿಯಲ್ ರಿಲೇಷನ್‌ಷಿಪ್ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ಇದುವರೆಗೆ ಎಮರ್ಜನ್ಸಿಯ ಕಾಲದಲ್ಲ ಸ್ಟ್ರೈಕ್‌ಗಳು ಆಗುತ್ತಾ ಇರಲಿಲ್ಲ. ಸಂಪತ್ತನ್ನು ಅಭಿವೃದ್ಧಿ ಮಾಡಲಿಕ್ಕೆ ಪ್ರಯತ್ನನಡೆಯುತ್ತಿತ್ತು. ಈಗ ಎಮರ್ಜನ್ಸಿಯನ್ನು ತೆಗೆದಿದ್ದಾರೆ, ಮತ್ತು ಸ್ಟ್ರೈಕ್‌ಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನಗಳು ನಡೆಯುತ್ತಿವೆ. ಅದರೆ ಇಂಥ ಸ್ಟ್ರೈಕ್‌ಗಳು ಆಗಲಿಕ್ಕೆ ಸರ್ಕಾರದವರು ಅವಕಾಶ ಕೊಡಬಾರದು ಮತ್ತು ಸಂಪತ್ತನ್ನು ಅಭಿವೃದ್ಧಿ ಮಾಡಲಿಕ್ಕೆ ಯಾವ ಅತಂಕವೂ ಕೂಡ ಆಗದಂತೆ ಜವಾಬ್ದಾರಿ ಸ್ಥಾನದಲ್ಲಿರತಕ್ಕವರು ಕೆಲಸಮಾಡಬೇಕು. ಮುಖ್ಯವಾಗಿ ಕೇಂದ್ರ ಸರ್ಕಾರದವರು ಈ ಬಗ್ಗೆ ತೀವ್ರವಾಗಿ ಗಮನಕೊಡಬೇಕು ಮತ್ತು ಸಂಪತ್ತನ್ನು ಅಭಿವೃದ್ಧಿ ಮಾಡಲಿಕ್ಕೆ ಗಮನಕೊಡಬೇಕು ಎಂದು ನಾನು ಹೇಳುತ್ತೇನೆ. ಸ್ಟ್ರೈಕ್‌ಮಾಡತಕ್ಕ ಅವಕಾಶವನ್ನು ನಾವು ಕೊಡಬೇಕು, ಆದರೆ ಸ್ಟ್ರೈಕ್ ಮಾಡತಕ್ಕವರು ಸಂಪತ್ತನ್ನು ಅಭಿವೃದ್ಧಿ ಮಾಡುವುದರ ಬಗ್ಗೆ ಗಮನ ಕೊಡುವ ರೀತಿಯಲ್ಲಿ ಅವರು ಜವಾಬ್ದಾರಿ ವಹಿಸಿ ಕೆಲಸಮಾಡಬೇಕು. ಅವರಿಗೆ ಏನೇನು ಅನುಕೂಲಗಳು ಬೇಕೋ ಅವನ್ನೆಲ್ಲಾ ಮಾಡಿಕೊಡೋಣ ಇದು ಸೂಕ್ತವಾದ ಕೆಲಸ ಎಂದು ನಾನಾದರೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮರಾಜ್ಯದಲ್ಲಿ ಲೇಬರ್ ರಿಲೇಷನ್ಸ್ ನೆಮ್ಮದಿಯಾಗಿದೆ. ಮುಂದೆಯೂ ಕೂಡ ಇದು ಚೆನ್ನಾಗಿ ನಡೆಯುತ್ತದೆ ಎಂದು ನಾನು ನಿರೀಕ್ಷಣೆ ಮಾಡಿದ್ದೇನೆ.

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಲೇಬರ್ ಇಂಡಸ್ಟ್ರಿಯಲ್ ಪೊಟೆನ್‌ಷಿಯಲ್ ಬಗ್ಗೆ ಮಾನ್ಯ ಸದಸ್ಯರು ಹೇಳಿದರು. ಎಮರ್ಜನ್ಸಿಯಲ್ಲಿ ಲೇಬರರ್ಸ್ ಅನ್ನು ಡಿಸ್‌ಮಿಸ್ ಮಾಡಲಿಕ್ಕೆ ಅವಕಾಶ ಇದೆಯೇ ? ಲೋಯರ್ ವರ್ಕರ್ಸ್ಅನ್ನು ಪೇಪರ್ ಮಿಲ್ಸ್ ಮತ್ತು ಎಂ. ಐ. ಎಸ್. ಎಲ್ ನಲ್ಲಿ ಡಿಸ್‌ಮಿಸ್ ಮಾಡಿದ್ದಾರೆ.

ಶ್ರೀ ಬಿ ಬಸವಲಿಂಗಪ್ಪ.—ಈ ಪ್ರಶ್ನೆಯನ್ನು ತಾವು ಇಂಡಸ್ಟ್ರೀಸ್ ಮಿನಿಸ್ಟರ್ ಅವರ ಗಮನಕ್ಕೆ ತರಬೇಕು. ನಾನು ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡುತ್ತಿದ್ದೇನೆ. ಕಾರ್ಮಿಕರು ರೂಲ್ಸ್ ಪ್ರಕಾರ, ತಪ್ಪು ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ನೋಡಬೇಕಾಗುತ್ತದೆ. ಆದರೂ ಮಾನ್ಯ ಸದಸ್ಯರು ಈ ವಿಷಯವನ್ನು ಮಾನ್ಯ ಕೈಗಾರಿಕಾ ಸಚಿವರ ಗಮನಕ್ಕೆ ತರುವುದು ಸೂಕ್ತ,

ಶ್ರೀ ಅಬ್ದುಲ್ ಖುದ್ದೂಸ್ ಅನ್ವರ್.—ಬೋನಸ್ ಆಕ್ಟ ಬಗ್ಗೆತಾವು ಏನಾದರೂ ಹೇಳುತ್ತೀರಾ ?

ಶ್ರೀ ಬಿ. ಬಸವಲಿಂಗಪ್ಪ.—ವೈಯುಕ್ತಿಕವಾಗಿ ಹೇಳುವುದಾದರೆ, ಇದಕ್ಕೆ ನಾವು ಬೇರೆ ಪ್ರಯತ್ನ ಮಾಡೋಣ

ಸರ್ಕಾರಿ ನೌಕರರಿಗೆ ಸುಮಾರು 50 ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ಐದು ವರ್ಷದಲ್ಲಿ ನಾವು ಕೊಟ್ಟಿದ್ದೇವೆ ಅವರೂ ಸಹ ನೆಮ್ಮದಿಯಾಗಿರಬೇಕು. ಏಕೆಂದರೆ ಬೇರೆ ಜನಗಳಿಗೆ ನಾವು ಅಷ್ಟಾಗಿ ಉತ್ತೇಜನ ಕೊಟ್ಟಿಲ್ಲ, ಕೊಟ್ಟಿದ್ದರೆ ಅವರೂ ಸಂತೋಷದಿಂದ ಇರುತ್ತಿದ್ದರು ಎಂದು ನನ್ನ ಅಭಿಪ್ರಾಯ ಸರ್ಕಾರಿ ನೌಕರರನ್ನು ನಾವು ಬಹಳ ಸಂತುಷ್ಟರಾಗುವಂತೆ ನೋಡಿಕೊಂಡಿದ್ದೇವೆ.

ರಾಜ್ಯಪಾಲರ ಭಾಷಣದಲ್ಲಿ ಹೆಚ್ಚಿಗೆ ಹೇಳುವುದರಲ್ಲಿ ಪ್ರಯೋಜನವಿಲ್ಲ. ಮಾನ್ಯ ಸದಸ್ಯರುಗಳು ಹೆಚ್ಚಿನ ವಿಷಯಗಳನ್ನು ಸರ್ಕಾರದ ಗಮನಕ್ಕೆ ತಂದರೆ ಅದಕ್ಕೆ ವಿವರಣೆಯನ್ನು ಕೊಡಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ ಎಂದು ಇಷ್ಟು ಮಾತ್ರ ಹೇಳಿ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನರ್ಪಿಸಿ ನನ್ನಮಾತನ್ನು ಮುಗಿಸುತ್ತೇನೆ.

SRI SUMATHI S. MADIMAN (Dharwar Rural).—Madam Speaker, while supporting the Address of the Governor, I feel proud to say that the economic gains of the last year are obvious and the implementation of the 20 point economic programme has taken great strides in development work and social legislation.

During the current year, the prices of food grains and essential commodities have shown a downward trend the rise in price of edible oils has been set right by imports.

Despite the adverse scarcity conditions, food grain buffer stocks are satisfactory. Special attention is given to medical and health services. 224 new institutions have been started which will take care of a considerable number of people. More effort is put in to control communicable diseases like tuberculosis, leprosy and filaria which is rampant in many parts of the State. I understand that except for Coorg District, in all other districts, in the State, leprosy is rampant Therefore, more attention to this problem will give relief to all.

As an integral part of the State Family Planning Programme, about 2 5 lakh mothers and 84,000 children have been supplied with Iron and folic acid tablets. This composite programme will continue and we hope to improve the health of the children and mothers which needs attention to build a healthy population.

Education has received a large slice of financial aid and rightly so. As it is, the most important step to progress and one which can solve the problems facing us to day, which crop up are due to ignorance. Free text books and scholarships are provided to the vulnerable sections. We are encouraging the children to attend schools in large numbers. We have increased the Government grant per class room from Rs. 2,500 to Rs. 4,500. Free legal aid is given to Scheduled Castes and Tribes and a special plan with an outlay of Rs. 25.5 crores has been prepared for the development of this vulnerable class I would like to bring to the notice of this August House that 47 hostels started in 1974-75 have been completed and 13 more buildings are under completion and also 12 fresh hostel building have been sanctioned during the current year, The Slum Clearance Board has prepared layouts and estimates for the Slum Clearance and in Bangalore, a sum of Rs. 43.91 lakhs has been spent. This is surely a step towards improving living conditions and creating healthy environment in towns and cities. Sites have been distributed to the landless workers in rural areas and the Housing Scheme has been a success. Owning a House makes a great difference in the attitude of an individual, a sense of belonging is created with which the person learns his responsibilities and duties.

About Land Reforms, I would like to say that it is a boon to the tenant. Land to the Tiller has made the age old tenant, owner of the land. Now he can hope to realise the bright future.

Irrigation and agriculture have been one of the major programmes which have stabilised agriculture and increased the production which is a great step to make us self-sufficient. All the major, medium and minor irrigation works are in progress. Some of the projects will be complete by 1977-78 and then the green revolution will be in full swing and there will be no dearth of foodgrains.

The rural banks and the State Development Banks have been of considerable help to the farmers who are now on the way to progress. Establishing a milk powder plant to solve the problem of surplus. milk in the flush season is the sign of sucess in the dairy programme, which is worth appreciating. The livestock production programme will help. The people earn a lively-hood. The steady growth of large and small scale industry is a sure sign of progress and employment. A large number of young enterpreneurs have started small scale industries and are successful. Handicrafts Corporation is doing well which means help to the artisans. Handloom Industry is given special attention by which the weavers'conditions will improve, and they will be independent.

In fact, every aspect of development has been given due attention and efficiently guided towards progress. By which women and children, the labourer, the farmer, the old and the vulnerable section have benefited by the programmes of the Government. This is no doubt an achievement to be proud of.

I thank you Madam for giving me the opportunity to speak.

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ನಾನು ರಾಜ್ಯಪಾಲರ ಭಾಷಣ ಪ್ರಾರಂಭ ಮಾಡುವುದಕ್ಕೆ ಮುಂಚೆ ಈ ಪೂರ್ವದಲ್ಲಿ ಮಾನ್ಯ ಬಸವಲಿಂಗಪ್ಪನವರು ಕೆಲವೊಂದು ವಿಷಯಗಳ ಬಗ್ಗೆ ಏನು ಸೂಚನೆ ಮಾಡಿದ್ದಾರೆ ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳ ಬಯಸುತ್ತೇನೆ. ಈಗಿನ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದವರಿಗೆ ಬಹಳ ಪ್ರಾತಿನಿಧ್ಯ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಆರೀತಿ ಪ್ರಾತಿನಿಧ್ಯ ದೊರಕಿರುವುದು ಬಹಳ ಸೂಕ್ತವಾದ ಕಾರ್ಯ ಎಂದು ಹೇಳುತ್ತೇನೆ, ಈ ದೃಷ್ಟಿಯಿಂದ ಹೇಳುವುದಾದರೆ ಡಾ॥ ಅಂಬೇಡ್ಕರ್‌ರವರು ಯಾವ ಹರಿಜನರ ಮೇಲೆ ಕನಿಕರ ಇಟ್ಟಿದ್ದರೋ ಅದೇ ಹರಿಜನರಲ್ಲದ ಮಹಾತ್ಮಾ ಗಾಂಧಿಯವರು ಅದಕ್ಕಿಂತ ಕಡಿಮೆ ಅನುಕಂಪ ಇಟ್ಟಿರಲಿಲ್ಲ ಎಂದು ಹೇಳುತ್ತೇನೆ ನಮ್ಮ ಈಗಿನ ಮಂತ್ರಿಗಳಾದ ಶ್ರೀಮಾನ್ ಕೆ. ಟಿ. ರಾಥೋಡ್‌ರವರು ಹರಿಜನರ ಬಂಧುಗಳು ಲಂಬಾಣಿಗಳ ಮುಖಂಡರಾಗಿದ್ದಾರೆ. ಅವರನ್ನು ನಾನು ಕೇಳುತ್ತೇನೆ. ಅವರ ಹಿತಸಾಧನೆ ಮಾಡುವವರು ಈಪೊತ್ತು ಹಳ್ಳಿಗಳಲ್ಲಿ ಗುಡಿಸಿಲುಗಳಲ್ಲಿ ವಾಸಮಾಡುವಂಥಾ ಜನರೊಂದಿಗೆ ಎಷ್ಟು ಮಂದಿ ವಾಸವಾಗಿದ್ದಾರೆ ಎಂದು ಕೇಳುತ್ತೇನೆ. ಅವರ ಕಷ್ಟ ಸುಖಗಳ ಬಗ್ಗೆ ವಿಚಾರಿಸಿ ಅವನ್ನು ಬಗೆಹರಿಸತಕ್ಕಂಥವರು ಎಷ್ಟು ಜನಗಳು ಇದ್ದಾರೆ ಎಂದು ಕೇಳುತ್ತೇನೆ. ಇದರಲ್ಲಿ ಎರಡು ಪ್ರಶ್ನೆ ಬರುತ್ತದೆ. ಹರಿಜನ ಮುಖಂಡರಾಗಲಿ ಯಾರೇ ಆಗಲಿ ಈ ಪ್ರಶ್ನೆಯನ್ನು ಬಿಡಿಸಲಿಕ್ಕೆ ಒಂದು ತಾತ್ವಿಕ ಸಿದ್ಧಾಂತದ ಮೇಲೆ ಬಗೆಹರಿಸಬೇಕಾಗುತ್ತದೆ. ಇದರಲ್ಲಿ ಉಳ್ಳವರು, ಇಲ್ಲದವರು ಎಂಬ ಎರಡೇ ಪ್ರಶ್ನೆ ಉಳಿಯುತ್ತದೆ. ಅವರು ಕರ್ನಾಟಕದಲ್ಲೇ ಇರಲಿ, ಭಾರತದಲ್ಲಿ ಎಲ್ಲಿ ಯಾದರೂ ಇರಲಿ ಈ ಪ್ರಶ್ನೆಯನ್ನು ಬಿಡಸಬೇಕಾದರೆ ಅವರು ಪೋಲೀಸ್ ಸ್ಟೇಷನ್‌ಗೆ ಹೋಗುತ್ತಾರೆ ವಿನಾ ಯಾವರೀತಿ ಇವನ್ನು ಬಗೆಹರಿಸಬೇಕು ಅನ್ನುವ

ದನ್ನು ಹರಿಜನ ಬಂಧುಗಳು ಆಲೋಚನೆ ಮಾಡಿದ್ದಾರೆಯೇ ? ಹಿಂದೆ ದಿವಾನರಾಗಿದ್ದ ಸರ್. ಎಂ. ವಿಶ್ವೇಶ್ವರಯ್ಯನವರು ಭದ್ರಾವತಿ ಕಾರ್ಖಾನೆಗೆ ಬಹಳವಾಗಿ ಶ್ರಮಿಸಿದರು. ಅದೇ ರೀತಿ ಮೈಸೂರಿನ ದಿವಾನರಾಗಿದ್ದ ಸರ್. ಮಿರ್ಜಾ ಇಸ್ಮಾಯಿಲ್ ರವರೂ ಕೂಡ ನಮ್ಮ ದೇಶದಲ್ಲಿ ಎಷ್ಟರಮಟ್ಟಿಗೆ ಕೆಲಸ ಮಾಡಿದ್ದಾರೆ ಅನ್ನುವುದನ್ನು ನಾವೆಲ್ಲಾ ನೋಡಿದ್ದೇವೆ. ಈ ಪ್ರಶ್ನೆಯನ್ನು ಒಂದು ತಾತ್ವಿಕ ಸಿದ್ಧಾಂತದ ಮೇಲೆ ಬಿಡಿಸಬೇಕಾಗಿದೆ ಉಳ್ಳವರು ಇಲ್ಲದವರು ಎಲ್ಲರೂ ಕೂಡಿ ಕೊಂಡು ಈ ದೇಶದಲ್ಲಿ ಕೆಲಸ ಮಾಡಿಕೊಂಡು ಬಂದಿರುವುದನ್ನು ನಾವು ನೋಡಿದ್ದೇವೆ ಸಮಾಜದ ಪ್ರಶ್ನೆಯನ್ನು ಜಾತೀಯ ಪ್ರಶ್ನೆ ಮೇಲೆ ಬಗೆಹರಿಸಲು ಸಾಧ್ಯವಿಲ್ಲ ಈಗ ಸರ್ಕಾರದವರು ಹಾವನೂರು ಕಮೀಷನ್ ವರದಿ ಪ್ರಕಾರ ಹಿಂದುಳಿದ ವರ್ಗದವರಿಗೆ ದುರ್ಬಲವರ್ಗದವರಿಗೆ ಕೆಲವು ಮೀಸಲಾತಿಗಳನ್ನು ಜಾರಿಗೆ ಕೊಟ್ಟಿದ್ದಾರೆ ಎಂದು ಹೇಳುತ್ತೀರಿ, ಏನೇ ಆಗಲಿ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇರುವಾಗ ಹಾವನೂರು ಕಮೀಷನ್ ವರದಿ ಪ್ರಕಾರ ಈ ನಿರುದ್ಯೋಗ ಸಮಸ್ಯೆಯನು ಬಿಡಿಸುವುದಕ್ಕೆ ಬರುವುದಿಲ್ಲ. ದೇಶದಲ್ಲಿ ದೊಡ್ಡ ದೊಡ್ಡ ಕೈಗಾರಿಕೆಗಳ ಕಡೆಗೆ ಗಮನ ಕೊಟ್ಟರೆ ಎಲ್ಲರಿಗೂ ಉದ್ಯೋಗ ಕೊಡುವುದಕ್ಕೆ ಸಾಧ್ಯವಾಗುತ್ತದೆ ಈ ರೀತಿಯಾಗಿ ನಿರುದ್ಯೋಗ ಸಮಸ್ಯೆಯನ್ನ ಬಿಡಿಸುವುದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಹ್ಯಾಂಡ್‌ಲೂಮ್ ಅಭಿವೃದ್ಧಿ ಬಗ್ಗೆ ಹೇಳುವುದಾದರೆ ಇದು ಒಂದು ತಾತ್ವಿಕವಾದ ಪ್ರಶ್ನೆ ಇದರಲ್ಲಿ ಜಾತಿಪ್ರಶ್ನೆ ಬರುವುದಿಲ್ಲ. ಇದರಲ್ಲಿ ಹರಿಜನ, ಮುಸ್ಲಿಂ ಕ್ರಿಶ್ಚಿಯನ್ ಅನ್ನುವ ಪ್ರಶ್ನೆ ಬರುವುದಿಲ್ಲ. ಮಾನ್ಯ ನಿಜಲಿಂಗಪ್ಪನವರೇ ಇರಲಿ ಮತ್ತೊಬ್ಬರೇ ಇರಲಿ ಈ ಪ್ರಶ್ನೆಯನ್ನು ತಾತ್ವಿಕ ಸಿದ್ಧಾಂತದ ಮೇಲೆ ಬಿಡಿಸಬೇಕೇ ವಿನಾ ಇನಾವುದರಿಂದಲೂ ಈ ಪ್ರಶ್ನೆಯನ್ನು ಬಿಡಿಸುವದಕ್ಕೆ ಬರುವುದಿಲ್ಲ ಮಾನ್ಯ ಕೆ. ಟಿ. ರಾಥೋಡ್‌ರವರು ಲಂಬಾಣಿಗರಾಗಿದ್ದಾರೆ. ಇವರು 4 ವರ್ಷದಿಂದಲೂ ಈ ಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ. ಇವರು 4 ವರ್ಷದಿಂದಲೂ ಕೂಡ ನಮ್ಮ ಸಿಂಧಗಿ ತಾಲ್ಲೂಕಿನಲ್ಲಿರುವ ಹಿಂದುಳಿದ ವರ್ಗದವರಿಗೆ ಏನು ಕೆಲಸ ಮಾಡಿಕೊಟ್ಟಿದ್ದಾರೆ ಹೇಳಿ, ಮಾನ್ಯ ಜತ್ತಿಯವರು ಸರ್ಕಾರದಲ್ಲಿ ಇದ್ದ ಕಾಲದಲ್ಲಿ ಮಾನ್ಯ ಎನ್. ರಾಚಯ್ಯನವರು ಮಂತ್ರಿಗಳಾಗಿದ್ದರು, ಮಾನ್ಯ ಬಸವಲಿಂಗಪ್ಪನವರು ಉಪಮಂತ್ರಿಗಳಾಗಿದ್ದರು. ಆವಾಗ ಎಡಗೈ ಬಲಗೈ ಎಂದು ಹೇಳಿದ್ದು ನನಗೆ ಜ್ಞಾಪಕ ಇದೆ.

ಶ್ರೀ ಬಿ ಬಸವಲಿಂಗಪ್ಪ.—ನಾನು ಹೇಳದೇ ಇದ್ದುದನ್ನು ನನ್ನ ಬಾಯಿಯಲ್ಲಿ ಇಡುತ್ತಿದ್ದೀರಲ್ಲಾ ಅದು ನನಗೆ ಸಲ್ಲದ ಮಾತು. ಹಾಗೆ ಮಾಡಬೇಡಿ. ಜಾತಿ ಪ್ರಶ್ನೆ ಹೋಗಬೇಕೆಂಬುದೇ ನನ್ನ ಉದ್ದೇಶ. ಈ ಸದನದಲ್ಲಿ ಎಡಗೈ. ಬಲಗೈ ಅನ್ನುವುದನ್ನು ಹೇಳಿ ನನ್ನ ಮನಸ್ಸನ್ನು ಕದಡಿಸಬೇಡಿ. ಈ ದೇಶದಲ್ಲಿ ಸಾವಿರಾರು ಜಾತಿಗಳು ಇವೆ. ಜಾತಿಯನ್ನು ತೆಗೆಯಬೇಕೆಂಬ ಅನ್ನುವ ಉದ್ದೇಶದಿಂದಲೇ ನಾನು ಆ ಕೆಲಸವನ್ನು ಪ್ರಾರಂಭ ಮಾಡಿದೆ, ಆದು ಸಾಧ್ಯವಾಗಲಿಲ್ಲ. ಜಾತಿಯನ್ನು ತೆಗೆಯಲಿಕ್ಕೆ ಪ್ರಯತ್ನ ಮಾಡೋಣ. ಇದಕ್ಕೆ ಎಷ್ಟು ದಿವಸ ಹಿಡಿಯುತ್ತದೋ ನೋಡೋಣ. ಆದರೆ ನಾವು ಏನು ಮಾಡಬೇಕೆಂದು ಹೇಳುತ್ತೇವೋ ಅದನ್ನೇ ನೀವೂ ಹೇಳುತ್ತೀರಿ ಆದರೆ ನೀವು ಈ ಕೆಲಸವನ್ನು ಮಾಡುತ್ತೀರೋ ಇಲ್ಲವೋ. ಆದುದರಿಂದ ಆ ಕೆಲಸವನ್ನು ನಮಗೆ ಬಿಡಿರಿ ಎಂದು ಹೇಳುತ್ತೇನೆ.

ಶ್ರೀ ಎಸ್. ವೈ. ಪಾಟೀಲ್.—ಈ ಪ್ರಶ್ನೆ ರಾಷ್ಟ್ರೀಯ ವಿಷಯದಲ್ಲ ಬರುವುದಿಲ್ಲ. ಜಾತಿ ಪ್ರಶ್ನೆಯಲ್ಲಿ ಬರುವುದಿಲ್ಲ ಈಗ ಇದತಕ್ಕಂಥಾ ಪ್ರಶ್ನೆ ಉಳ್ಳವರು, ಇಲ್ಲದವರು, ಅನ್ನುವ ಪ್ರಶ್ನೆಯಲ್ಲಿ ಬರುತ್ತದೆ. ಅದನ್ನು ಬಗೆಹರಿಸಬೇಕು.

ಇನ್ನು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲಿಕ್ಕೆ ಇಚ್ಛಿಸುತ್ತೇನೆ. ನಾವು ಈ ಚುನಾವಣೆಯಲ್ಲಿ ಜನರನ್ನು ಸಂದರ್ಶನ ಮಾಡಿಕೊಂಡು ಬಂದಿದ್ದೇವೆ. ನಾನು ಈ ಸದನಕ್ಕೆ ಈವೊತ್ತೇ ಬಂದಿಲ್ಲ. ನಾನು ಪ್ರತಿ ಚುನಾವಣೆಯಲ್ಲೂ ಗೆದ್ದು ಬಂದಿದ್ದೇನೆ. ಈವೊತ್ತು 20 ಅಂಶದ ಕಾರ್ಯಕ್ರಮ ಏನು ಇದೆ ಅದು ರಾಷ್ಟ್ರೀಯ ಪ್ರಶ್ನೆಯಾಗಿದೆ. ಯಾವ 20 ಅಂಶವೇ ಇರಲಿ ಅದು ರಾಷ್ಟ್ರೀಯ ಕಾರ್ಯಕ್ಕೆ ಪೂರಕವಾಗಿರಬೇಕು. ಆ ಕೆಲಸ ಅಲ್ಲೊಂದಷ್ಟು, ಇಲ್ಲೊಂದಷ್ಟು ಕೆಲಸವಾಗಬಾರದು. ಆ ಕೆಲಸವನ್ನು ಸಂಪೂರ್ಣವಾಗಿ ಪೂರೈಸಬೇಕು. ನಾನು 1972 ನೇ ಇಸವಿ ಚುನಾವಣೆಯಲ್ಲೂ ಸಹ ಗೆದ್ದು ಈ ಸದನಕ್ಕೆ ಆರಿಸಿ ಬಂದಿದ್ದೇನೆ. ಅವಾಗಿನಿಂದಲೂ ಸಹ ನಾನು ಕುಡಿಯುವ ನೀರಿನ ಪ್ರಶ್ನೆ ಬಗ್ಗೆ ಈ ಸದನದಲ್ಲಿ ಕೇಳುತ್ತಿದ್ದೇನೆ. ಹೈದರಾಬಾದ್

ನವಾಬರು ಇದ್ದಾಗ ಯಾರ ಹತ್ತಿರವೂ ಅಪ್ಲಿಕೇಷನ್ ತೆಗೆದುಕೊಳ್ಳದೆ, ಮುನಿಸಿಪಾಲಿಟಿಯವರನ್ನು ಕೇಳದೆ ಎಲ್ಲಾ ಹಳ್ಳಿಗಳಲ್ಲೂ ಖಡ್ಡಾಯ ಮಾಡಿ ಎರಡೆರಡು ಕುಡಿಯುವ ನೀರಿನ ಬಾವಿಗಳು ಇರಬೇಕೆಂದು ಮಾಡಿ, ಹರಿಜನ-ಹರಿಜನೇತರ ಬಗ್ಗೆ ಕುಡಿಯುವ ನೀರಿನ ಪ್ರಶ್ನೆಯನ್ನು ಬಗೆಹರಿಸಿದರು.

12-00 Noon

ಒಂದು ತಾತ್ವಿಕ ಸಿದ್ಧಾಂತದ ಆಧಾರದ ಮೇಲೆ ಪ್ರತಿ ಹಳ್ಳಿಯಲ್ಲಿಯೂ ಹರಿಜನರಿಗೆ ಒಂದು, ಹರಿಜನೇತರರಿಗೆ ಒಂದು ಹೀಗೆ ಎರಡು ಬಾವಿಗಳನ್ನು ಅವರ ಕಾಲದಲ್ಲಿ ತೊಡಗಿಸಿದರು. ಆದರೆ ಇಂದು ನಮ್ಮ ಸಿಂಧಗಿ ಕ್ಷೇತ್ರಕ್ಕೆ ಸೇರಿದ ಮನು, ದೇವರಹಿಪ್ಪರಗಿ, ಬೇಗೂರು, ರಾಂಪುರದಲ್ಲಿ ಕುಡಿಯುವುದಕ್ಕೆ ನೀರು ಇಲ್ಲವಾಗಿದೆ ಮಾನ್ಯ ಕೆ. ಪ್ರಭಾಕರೆ ಅವರು ಇದರ ಕಡೆಗೆ ಹೆಚ್ಚು ಗಮನ ಕೊಡದ ಕಾರಣ ಅಲ್ಲಿಯ ಜನರು ಕಳೆದ 15 ದಿವಸಗಳಿಂದ ಸ್ನಾನ ಮಾಡಿಲ್ಲ. ಹರಿಜನರು ವಾಸ ಮಾಡತಕ್ಕಂಥ ಮತ್ತು ಲಮಾನಿ ತಂಡಗಳು ವಾಸ ಮಾಡತಕ್ಕಂಥ ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅವರಿಂದ ಅಪ್ಲಿಕೇಷನ್ ಬರುವವರೆಗೆ ಕಾಯದೆ ಇದು ಜನರಲ್ ಪ್ರಾಬ್ಲಮ್ ಎಂದು ತಿಳಿದುಕೊಂಡು ಈ ಕೆಲಸ ಮಾಡಬೇಕು. 20ಅಂಶಗಳ ಕಾರ್ಯಕ್ರಮ ಒಳ್ಳೆಯದಿದ್ದರೂ ಸಹ ಅದರ ಜೊತೆಗೆ 5 ಅಂಶಗಳ ಕಾರ್ಯಕ್ರಮವನ್ನು ಸೇರಿಸಿದ್ದು ಸರಿಯಲ್ಲ. ಶ್ರೀ ಸಂಜಯಗಾಂಧಿಯವರು ಯಾವ ಹಕ್ಕಿನ ಮೇಲೆ ಇದನ್ನು ಜಾರಿಗೆ ಕೊಡಲು ಬಯಸಿದರೆಂದು ನಾನು ಕೇಳುತ್ತೇನೆ ಈ 5 ಕಾರ್ಯಕ್ರಮಗಳು ಶ್ರೀ ಸಿ ಡಿ. ದೇಶಮುಖ್ ಅವರ ಕಾಲದಿಂದಲೂ ಜಾರಿಯಲ್ಲಿವೆ, ಅವರು ನಮ್ಮ ಭಾಗಕ್ಕೆ ಬಂದಾಗ ನಾನು ಅವರನ್ನು ಭೇಟಿ ಮಾಡಲೂ ಹೋಗಲಿಲ್ಲ. ಅದೇ ರೀತಿ ಅವರು ಒರಿಸ್ಸಾಕ್ಕೆ ಭೇಟಿ ಕೊಟ್ಟಾಗ ಅವರನ್ನು ಶ್ರೀಮತಿ ನಂದಿನಿಸತ್‌ಪತಿಯವರು ಸ್ವಾಗತಿಸಲಿಲ್ಲವೆಂಬ ಕಾರಣದಿಂದ ಅವರು ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು, ನಮ್ಮದು ಸುಖೀರಾಜ್ಯವೆಂದು ಹೇಳುತ್ತಾರೆ ಆದರೆ ಜನರಿಗೆ ಕುಡಿಯಲು ನೀರು ಇಲ್ಲ. ನಾನು ನನ್ನ ಕ್ಷೇತ್ರದಲ್ಲಿ ಸಂಚಾರ ಮಾಡಲು ಹೊರಟರೆ. ಜನರು ಎಂ. ಎಲ್. ಎ. ಗಿರಿಗೆ ರಾಜೀನಾಮೆ ಕೊಡಬೇಕೆಂದು ಕೇಳುತ್ತಿದ್ದಾರೆ, ಬಾವಿ ತೆಗೆಸಬೇಕೆಂದು ಅಪ್ಲಿಕೇಷನ್ ಕೊಟ್ಟರೆ ಎನ್, ಆರ್. ಡಬ್ಲ್ಯು. ಸ್ಕೀಮು ಪ್ರಕಾರ ಪಂಚಾಯತಿಯವರು ತಮ್ಮ ಭಾಗದ ಹಣ ಕೊಟ್ಟಿಲ್ಲವೆಂದು ಅಧಿಕಾರಿಗಳು ಅಬ್ಜಕ್ಷನ್ ಬರೆಯುತ್ತಾರೆ. ಪಂಚಾಯಿತಿ ಸದಸ್ಯರು ಮತ್ತು ಸರಪಂಚರು ಏನಿದ್ದಾರೆ, ಅವರುಗಳಿಗೆ ಬಡವರ ಬಗ್ಗೆ ಕನಿಕರವಿರುತ್ತದೆ. ಆದರೆ ಪಂಚಾಯಿತಿಯಲ್ಲಿ ಹಣವೇ ಇಲ್ಲದಿದ್ದರೆ ಅವರು ಯಾವ ರೀತಿ ಹಣ ಕೊಡುತ್ತಾರೆ, ಆದಕಾರಣ ಈ ಬಗ್ಗೆ ಸಲಹೆಏನೆಂದರೆ, ಸ್ಪೆಷಲ್ ಸೆಸ್ ಎಂದು ಹಾಕಿ, ಆ ಹಣದಿಂದ ಈ ಕುಡಿಯುವ ನೀರಿನ ಸಮಸ್ಯೆಯನ್ನು ಬಿಡಿಸಬೇಕು. ಈಗ ಕೆಲವು ಕಡೆ ರಿಗ್ ಯಂತ್ರಗಳ ಸಹಾಯದಿಂದ ಕೊಳವೆ ಬಾವಿಗಳನ್ನು ತೆಗೆಸಿದ್ದರೂ ಸಹ ಅವು ಕೆಟ್ಟಿವೆ ಎಂದು ಜನರು ಹೇಳುತ್ತಾರೆ. ಇವುಗಳನ್ನು ಕೂಡಲೇ ರಿಪೇರಿ ಮಾಡಿಸಬೇಕು.

ಇನ್ನು ಸರ್ಕಾರದವರು ಮೆಡಿಕಲ್ ಬಗ್ಗೆ ಹೆಚ್ಚು ಹಣ ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಶೇಕಡಾ 80 ರಷ್ಟು ಹಳ್ಳಿಗಳಲ್ಲಿ ವಾಸ ಮಾಡುತ್ತಿರುವ ಜನರಿಗೆ ಈ ಮೆಡಿಕಲ್ ಸೌಲಭ್ಯಸಿಗುತ್ತಿಲ್ಲ. ಈ ಶೇಕಡಾ 80ರಷ್ಟು ಜನರ ಪೈಕಿ ಶೇಕಡಾ 40ರಷ್ಟು ಜನರು ಅತ್ಯಂತ ಸಣ್ಣ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಈ ಹಳ್ಳಿಗಳಲ್ಲಿರುವ ಜನರಿಗೆ ಸರಿಯಾದ ಮೆಡಿಕಲ್ ಸೌಲಭ್ಯವಿಲ್ಲ. ಯಾರಿಗಾದರೂ ಪ್ರಸವವೇದನೆಯಾದರೆ ಹತ್ತಿರದ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಸರಿಯಾದ ರಸ್ತೆಗಳ ಸೌಲಭ್ಯವಿಲ್ಲ. ಜೊತೆಗೆ ಬಸ್ಸಿನ ವ್ಯವಸ್ಥೆಯೂ ಇಲ್ಲ ನೀರಿನ ವ್ಯವಸ್ಥೆ ಸಹ ಇಲ್ಲ. ಕೆಲವು ಕಡೆ ನೀರಿಗೆ ತೊಂದರೆಯಾಗಿ ಮೈಲಿಗಟ್ಟಲೆ ದೂರದಿಂದ ನೀರನ್ನು ತರಬೇಕಾಗಿದೆ ಆದೇ ಕಾವೇರಿ ನೀರನ್ನು ಬೆಂಗಳೂರಿಗೆ ತರಲು ಕೋಟಿಗಟ್ಟಲೆ ಹಣ ಖರ್ಚು ಮಾಡುತ್ತಾರೆ. ಆದರೆ ನಮ್ಮ ಭಾಗದಲ್ಲಿ ಲಮಾಣಿ ತಂಡವಿರುವ ಕಡೆ ನೀರಿನ ಸೌಲಭ್ಯ ಒದಗಿಸಲು 2 ಲಕ್ಷ ರೂ.ಗಳ ಯೋಜನೆಯನ್ನು ಕೈಕೊಂಡು 5 ವರ್ಷಗಳಾಯಿತು, ಅದು ಇನ್ನೂ ಪೂರ್ತಿಯಾಗಿಲ್ಲ. ಈಗಾಗಲೇ ಲಕ್ಷಗಟ್ಟಲೆ ಹಣ ಖರ್ಚಾಗಿದೆ. ಇದಕ್ಕೆ ಯಾರು ಜವಾಬ್ದಾರರು ? ರಸ್ತೆಗಳ ರಿಪೇರಿ ಮಾಡಿಸಲು ತಾಲ್ಲೂಕ್ ಬೋರ್ಡಿನ ಫಂಡ್‌ನಲ್ಲಿ ಹಣ ಇಲ್ಲ. ಆದಕಾರಣ ರಸ್ತೆಗಳ ರಿಪೇರಿಯೂ ಆಗಿಲ್ಲ. ಇನ್ನು ಅಲ್ಲಿಯ ಜನರು ಯಾವ ರೀತಿ ಬದುಕಬೇಕು ಶಿಕ್ಷಣಕ್ಕಾಗಿ 112 ಕೋಟಿ ರೂ.ಗಳನ್ನು ಖರ್ಚು ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಹಳ್ಳಿಗಳಲ್ಲಿ ಇಂದು ಸರಿಯಾದ ಶಿಕ್ಷಣದ ವ್ಯವಸ್ಥೆ ಇಲ್ಲ. ಪ್ರೈಮರಿ ವಿದ್ಯಾಭ್ಯಾಸವನ್ನು ಮುಗಿಸಿದವರಿಗೆ

ಬರೆಯಲು ಮತ್ತು ಓದಲು ಬರುವುದಿಲ್ಲ ಇದಕ್ಕೆ ಕಾರಣ ಅಲ್ಲಿಯ ಉಪಾಧ್ಯಾಯರುಗಳ ಪೈಕಿ ಎಷ್ಟೋ ಮಂದಿ ಶಾಲೆಗಳಲ್ಲಿರುವುದೇ ಇಲ್ಲ. ಯಾವಾಗಲೂ ರಾಜಕೀಯ ಮುಖಂಡರ ಮನೆಗಳಲ್ಲಿಯೇ ಇರುತ್ತಾರೆ. ಇವರುಗಳು ರಾಜಕೀಯ ಮಾಡುವುದನ್ನು ತಪ್ಪಿಸಬೇಕು. ಅದಕ್ಕಾಗಿ ಸರ್‌ಪ್ರೈಜ್ ವಿಜಿಟ್ ಕೊಟ್ಟು ಯಾರು ಶಾಲೆಗಳಲ್ಲಿರುವುದಿಲ್ಲ ಅಂತಹವರ ಮೇಲೆ ಕ್ರಮ ಕೈಕೊಳ್ಳಬೇಕು. ಪ್ರೈಮರಿ ವಿದ್ಯಾಭ್ಯಾಸದ ನಂತರ ಸೆಕೆಂಡರಿ ವಿದ್ಯಾಭ್ಯಾಸ ಪ್ರಾರಂಭವಾಗುತ್ತದೆ. ಅದು ಮುಗಿದ ಮೇಲೆ ಯೂನಿವರ್ಸಿಟಿ ಎಜುಕೇಷನ್‌ಗೆ ಬರಬೇಕು. ಇಲ್ಲಿ 4 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರೆ ಬಿ. ಎ. ಡಿಗ್ರಿಯನ್ನು ಪಡೆದುಕೊಳ್ಳಬಹುದು, 6 ವರ್ಷಗಳ ಕಾಲ ವಿದ್ಯಾಭ್ಯಾಸ ಮಾಡಿದರೆ ಎಂ. ಎ. ಡಿಗ್ರಿಯನ್ನು ಪಡೆದುಕೊಳ್ಳಬಹುದು. ಈ ರೀತಿ ಡಿಗ್ರಿ ಪಡೆದುಕೊಂಡವರಿಗೆ ಇಂದು ನೌಕರಿ ಸಿಗುತ್ತಿಲ್ಲವಾದ ಕಾರಣ ಈಗಿನ ವಿದ್ಯಾಭ್ಯಾಸದ ಸಿಲಬಸ್‌ನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ ಪಟ್ಟಣಗಳಲ್ಲಿರುವವರು ತಮ್ಮ ಮಕ್ಕಳನ್ನು ಕಾನ್‌ವೆಂಟ್‌ಗೆ ಕಳುಹಿಸುತ್ತಾರೆ. ಆದರೆ ಹಳ್ಳಿಗಳಲ್ಲಿರುವವರು ತಮ್ಮ ಮಕ್ಕಳನ್ನು ಸರ್ಕಾರದ ಶಾಲೆಗಳಿಗೇ ಕಳುಹಿಸಬೇಕಾಗುತ್ತದೆ. ಈ ಮಕ್ಕಳಿಗೂ ಸಹ ಒಳ್ಳೆಯ ವಿದ್ಯಾಭ್ಯಾಸ ಸಿಗಬೇಕೆಂಬುದು ಸರ್ಕಾರದ ಇಚ್ಛೆಯಾಗಿದ್ದರೆ ಬಿ.ಎ., ಬಿ.ಟಿ., ಆದವರನ್ನೇ ಉಪಾಧ್ಯಾಯರನ್ನಾಗಿ ನೇಮಕ ಮಾಡಬೇಕು. ಇದರಿಂದ ಮಕ್ಕಳು ಚೆನ್ನಾಗಿ ಕಲಿಯಲು ಅವಕಾಶವಾಗುತ್ತದೆ. ಇದಕ್ಕೆ ಸೂಕ್ತ ವ್ಯವಸ್ಥೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ. ಹಿಂದೆ ಶಿವಾಜಿ ಮಹಾರಾಜನು ಸಹ ಒಳ್ಳೆಯ ಬುದ್ಧಿವಂತರಾದ ಬ್ರಾಹ್ಮಣರನ್ನೇ ಉಪಾಧ್ಯಾಯರ ಕೆಲಸಕ್ಕೆ ನೇಮಕ ಮಾಡುತ್ತಿದ್ದ. ಇಲ್ಲಿ ಜಾತಿವಾದ ಬರುವುದಿಲ್ಲ. ಮಕ್ಕಳ ವಿದ್ಯಾಭ್ಯಾಸ ಮುಖ್ಯ. ಮಗುವಿಗೆ ತಾಯಿಯ ಹಾಲು ಎಷ್ಟು ಮುಖ್ಯವೋ ಅಷ್ಟೇ ಈ ಪ್ರೈಮರಿ ವಿದ್ಯಾಭ್ಯಾಸ ಎನ್ನುವುದು ಮಕ್ಕಳಿಗೆ ಮುಖ್ಯವಾದುದು. ಅದೆ ರೀತಿ ಪ್ರತಿಯೊಂದು ಊರಿಗೂ ಒಳ್ಳೆಯ ರಸ್ತೆಗಳಿರಬೇಕು. ಒಳ್ಳೆಯ ರಸ್ತೆಗಳಿಲ್ಲದಿದ್ದರೆ ಹಳ್ಳಿಗಳು ಮುಂದೆ ಬರುವುದಿಲ್ಲ. ಶ್ರೀ ದೇಬರ್ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಹರಿಜನ ಕೇರಿಗಳಲ್ಲಿದ್ದುಕೊಂಡು ಅವರ ಕಷ್ಟಸುಖಗಳನ್ನು ತಿಳಿದುಕೊಳ್ಳುತ್ತಿದ್ದರು. ಅದೇ ರೀತಿ ಹಿಂದೆ ಶ್ರೀ ರಾಮನು ಕಿಸ್ಕಿಂದಾದಲ್ಲಿ ವಾಸ ಮಾಡುತ್ತಿದ್ದ ಎಂಬುದನ್ನು ನಾವು ಚರಿತ್ರೆಯಿಂದ ತಿಳಿಯುತ್ತೇವೆ. ಅದೇ ರೀತಿ ಮಾನ್ಯ ಮಂತ್ರಿಗಳು ನಮ್ಮನ್ನು ಜೊತೆಗೆ ಕರೆದುಕೊಂಡು ಹರಿಜನಕೇರಿಯಲ್ಲಿ ಕೆಲವು ಕಾಲ ವಾಸ ಮಾಡಿ ಅವರ ಕಷ್ಟಗಳನ್ನು ತಿಳಿದು ಕೊಂಡು ನಂತರ ಅದನ್ನೆಲ್ಲಾ ಸುಧಾರಣೆ ಮಾಡಬೇಕೆಂದು ಹೇಳುತ್ತೇನೆ.

ಚಾಂದಕಾಟೆ ಪ್ರಾಜೆಕ್ಟಿನ ಕಾರ್ಯವನ್ನು ಇನ್ನೂ ತೆಗೆದುಕೊಂಡಿಲ್ಲ. ಸರ್ಕಾರದವರು ಮೈನರ್ ಇರಿಗೇಷನ್‌ಗೆ ಪ್ರಾಧಾನ್ಯತೆ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಅದರೆ ಇದರ ಬಗ್ಗೆ ಸರ್ಕಾರದವರ ಕಡೆಯಿಂದ ಉತ್ತರವಿಲ್ಲ, ಮಾನ್ಯ ಮುಖ್ಯ ಮಂತ್ರಿಗಳು 1974ನೇ ಇಸವಿ ಎಂಟನೆಯ ತಿಂಗಳು ಆರನೆಯ ತಾರೀಖು ಅಪ್ಪರ್ ಕೃಷ್ಣ ಪ್ರಾಜೆಕ್ಟಿನ ಕೆಲಸವನ್ನು ತೆಗೆದು ಕೊಳ್ಳುತ್ತೇವೆ ಇದರಿಂದ ಮೂರನೆಯ ಒಂದು ಭಾಗ ಸಿಂಧಗಿ ತಾಲ್ಲೂಕಿಗೆ ಬೆನಿಫಿಟ್ ಆಗುತ್ತದೆ ಎಂದೂ, ವೆಲ್ ಇರಿಗೇಷನ್‌ನಿಂದ ಮೂರನೆಯ ಎರಡು ಭಾಗ ಬೆನಿಫಿಟ್ ಆಗುತ್ತದೆ ಎಂದು ಹೇಳಿ ಇದಕ್ಕೆ ದುಡ್ಡನ್ನು ಕೊಡುತ್ತೇವೆಂದು ಹೇಳಿದ್ದರು. ದುಡ್ಡು ಇಲ್ಲದೆ ಇರಿಗೇಷನ್ ಪ್ರಾಜೆಕ್ಟಗಳನ್ನು ಹೇಗೆ ಮಾಡುವುದು ? ವೆಲ್ ಇರಿಗೇಷನ್ ಬಗ್ಗೆ ತಕರಾರು ಬರುವುದಿಲ್ಲ. ಇವತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಹೃದಯ ಇದ್ದರೆ, ಈ ಪ್ರಾಜೆಕ್ಟಿಗೆ ಹಣ ಕೊಡಬೇಕು. ಹಣ ಕೊಡುತ್ತೇವೆಂದು ಹೇಳಿ ಹೇಳಿ ಫೇಲ್ ಆಗಿದ್ದಾರೆ. ಕೇವಲ 5–6 ಸಾವಿರ ರೂಪಾಯಿಗಳಿಂದ ಪ್ರಾಜೆಕ್ಟು ಆಗುವುದಕ್ಕೆ ಸಾಧ್ಯವೇ ? ಇದಕ್ಕೆ ಸುಮಾರು 95 ಲಕ್ಷ ರೂಪಾಯಿಗಳ ಗಣನೀಯವಾದ ಹಣ ಬೇಕಾಗಿರುವಾಗ ಕೇವಲ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದ್ದರಿಂದ ಸರ್ಕಾರದವರು ಇದಕ್ಕೆ ಈ ವರ್ಷ ಎಷ್ಟು ಹಣ ಕೊಡುತ್ತಾರೆ, ಮುಂದಿನ ವರ್ಷ ಎಷ್ಟು ಕೊಡುತ್ತಾರೆ ಎನ್ನುವುದನ್ನು ಸ್ಪೆಸಿಫಿಕ್ ಆಗಿ ಹೇಳಬೇಕು. ನಾನು ಹಿಂದೆ ಮೊರಾರ್ಜಿಯವರ ಜೊತೆಯಲ್ಲಿ ಎಂ ಎಲ್. ಎ. ಆಗಿದ್ದೆ. ಈಗ ಅವರು ನಮ್ಮ ದೇಶದ ಪ್ರಧಾನಿಗಳಾಗಿದ್ದಾರೆ. ನನಗೆ ಭಯವಿಲ್ಲ, ಈಗ ನಾನು ನಮ್ಮಗೆ ಅನ್ಯಾಯವಾಗಿದೆ, ಎಂದು ನಿಮ್ಮನ್ನೂ ಇದರ ಸಲುವಾಗಿ ಕೇಂದ್ರಕ್ಕೆ ಕರೆದುಕೊಂಡು ಹೋಗುವುದಕ್ಕೆ ಸಿದ್ಧನಾಗಿದ್ದೇನೆ. ಏನೇ ಇರಲಿ, ಜನತೆಯ ಆಶೀರ್ವಾದ ನಮ್ಮ ಮೇಲಿದೆ,

ಪಿ. ಎಲ್. ಡಿ. ಬ್ಯಾಂಕಿಗೆ ಸರ್ಕಾರದವರು ಎಷ್ಟೋ ಹಣವನ್ನು ಕೊಟ್ಟರು ಆದರೆ ಇದನ್ನು ಪಡೆದ ಜನರು ಕುಡಿದು ಹಣವನ್ನು ಹಾಳು ಮಾಡಿದರು. ಅವರ ಸಲುವಾಗಿ ಏನಾದರೂ ಉಪಯೋಗವಾಗುವಂಥ ಕೆಲಸಗಳನ್ನು ಮಾಡಿರಿ. ಬಡ್ಜೆಟ್ಟಿನೊಳಗೆ ಇವಕ್ಕೋಸ್ಕರ ಸುಮಾರು 20 ಲಕ್ಷ ರೂಪಾಯಿಗಳನ್ನು ಇಟ್ಟಿದ್ದಾರೆ ನಾನು ಸ್ಪಷ್ಟವಾಗಿ ಹೇಳುತ್ತೇನೆ ತಾವು ಮುಖ್ಯ ಮಂತ್ರಿಗಳಾಗಿ ಮುಂದೆ ಇರುತ್ತೀರೋ ಇಲ್ಲವೋ, ನಾವು ಈಗ ನಿಮ್ಮನ್ನು ಬಿಡುವುದಿಲ್ಲ. ನೀವು ಯಾವ ಕೆಲಸವನ್ನು ಮಾಡುವುದಕ್ಕೆ ಸಾಧ್ಯ ಇದೆ ಅದನ್ನು ಮಾಡಿರಿ, ಸಾಧ್ಯವಿಲ್ಲದಿದ್ದರೆ ನಾವು ಮೊರಾರ್ಜಿ ದೇಸಾಯಿಯವರ ಹತ್ತಿರ ಹೋಗಿ ನಮ್ಮ ಸಮಸ್ಯೆಯನ್ನು ಇಡುತ್ತೇವೆ. ನಮ್ಮ ಏನೇನು ಸಮಸ್ಯೆಗಳು ಇವೆ ಅವೆಲ್ಲವನ್ನು ಮಂಜೂರು ಮಾಡಿಸಿಕೊಂಡು ಬರುತ್ತೇವೆ.

ನಮ್ಮ ಸರ್ಕಾರದವರು ನಮ್ಮಲ್ಲಿ ನಾಲ್ಕು ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ರಸ್ತೆಗಳನ್ನು ಮಾಡಿದರು. ಈ ರಸ್ತೆಗಳಲ್ಲಿ ಮಳೆ ಬಂದು ಇವರು ಮಾಡಿದಂಥ ಕೆಲಸ ಹಾಳಾಗಿ, ಆ ರಸ್ತೆಗಳಲ್ಲಿ ದನಗಳು ನಡೆಯಲ್ಲಿಕ್ಕೆ ಬರುವುದಿಲ್ಲ. ಇದರ ಬಗ್ಗೆ ಅನುಭವಸ್ಥರು ಕೊಟ್ಟ ಸಲಹೆಗಳನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಅವರು ಮೆಜಾರಿಟಿ ಪಾರ್ಟಿಯಲ್ಲಿರಲಿ, ಮೈನಾರಟಿ ಪಾರ್ಟಿಯಲ್ಲಿರಲಿ ಅದು ಪ್ರಶ್ನೆಯಲ್ಲ. ನಾವು ಕೊಟ್ಟ ಸಲಹೆ ನೀವು ಕೊಟ್ಟ ಸಲಹೆ ಎಂದು ಕೆಲಸಗಳನ್ನು ಸರ್ಕಾರದವರು ಮಾಡಬಾರದು. ಉತ್ತಮ ಕಾರ್ಯವನ್ನು ಮಾಡಲಿಕ್ಕೆ ಯಾರು ಉತ್ತಮ ಸಲಹೆ ಕೊಟ್ಟರೂ ಸರಿ, ಅದನ್ನು ಸರ್ಕಾರದವರು ಅನುಸರಿಸಬೇಕು ಎಂದು ನಾನು ಹೇಳುತ್ತೇನೆ, ಈಗ ನಮ್ಮ ತಾಲ್ಲೂಕಿನಲ್ಲಿ ರಸ್ತೆಗಳ ಅನುಕೂಲ ಇಲ್ಲ, ಕೋಟಿಗಟ್ಟಲೆ ಹಣ ವನ್ನು ಇದಕ್ಕಾಗಿ ಸರ್ಕಾರದವರು ಹಾಳು ಮಾಡಿದ್ದಾರೆ. ಸ್ಕೇರ್‌ಸಿಟಿಯಲ್ಲಿಯೂ ಇದರ ಬಗ್ಗೆ ಹಣವನ್ನು ಖರ್ಚು ಮಾಡಿದ್ದಾರೆ ಆದರೂ ಇದರ ಬಗ್ಗೆ ಒಳ್ಳೆಯ ಕೆಲಸಗಳು ಆಗಿಲ್ಲ. ನೀವು ಕೆಲಸ ಗಳನ್ನು ಮಾಡದಿದ್ದರೆ ಯಾರು ಮಾಡಬೇಕು ಎಂದು ನಾನು ಕೇಳಬೇಕಾಗುತ್ತದೆ. ಇದು ನಿಮ್ಮ ಪ್ರೈವೇಟ್‌ಹೋಂ ಅಫೇರ್ಸ್ ಅಲ್ಲ. ನೀವು ಸರ್ಕಾರದ ಹಣವನ್ನು ಖರ್ಚು ಮಾಡುತ್ತಿದ್ದೀರಿ, ಅವನ್ನೂ ಸಹ ನಿಮ್ಮ ಮಾಲೀಕರಿಗೆ ಖರ್ಚು ಮಾಡುತ್ತೀದ್ದೀರಿ. ಆದ್ದರಿಂದ ನಾನು ನಿಮ್ಮಿಂದ ಖಚಿತವಾದ ಉತ್ತರ ಕೇಳುತ್ತಿದ್ದೇನೆ. ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಈ ವರ್ಷ ಎಷ್ಟು ಹಣವನ್ನು ಕೊಡುತ್ತೀರಿ, ಎಂಡಂಚಿಕೆರೆ ಪ್ರಾಜೆಕ್ಟಿಗೆ ಎಷ್ಟು ಹಣವನ್ನು ಕೊಡುತ್ತೀರಿ, ನೀರಾವರಿ ಬಾವಿಗಳು ಎಲ್ಲೆಲ್ಲಿ ಇವೆ ಅವುಗಳನ್ನು ಮಾಡುವುದಕ್ಕೆ, ಪ್ರತಿಯೊಂದು ಊರಿಗೂ ರಸ್ತೆಗಳನ್ನು ಮಾಡುವುದಕ್ಕೆ ಎಷ್ಟು ಹಣವನ್ನು ಕೊಡುತ್ತೀರಿ ಎನ್ನುವುದನ್ನು ಹೇಳಬೇಕು. ನಮ್ಮ ತಾಲ್ಲೂಕಿನಲ್ಲಿ ಎಷ್ಟು ಕೆರೆಗಳು ಇವೆ, ಅವೆಲ್ಲವನ್ನೂ ಮಂಜೂರು ಮಾಡಬೇಕು. ಇದಕ್ಕೆ ಜನರಿಂದ ಕಾಂಟ್ರಿಬ್ಯೂಷನ್ ಅನ್ನು ಕೇಳಬಾರದು. ಮಾನ್ಯ ಚೆನ್ನಬಸಪ್ಪನವರ ಪಿರಿಯಾಪಟ್ಟಣದಲ್ಲಿ ರಸ್ತೆಗಳು ಆಗಿಲ್ಲವೇ ? ಆದರೆ ನಿಮ್ಮ ಮಾಲೀಕರಿಗೆ ಸರಿಯಾದ ರಸ್ತೆ ಇಲ್ಲ. ಇದನ್ನು ನೀವು ಮಾಡುವುದಿಲ್ಲವೇ ? ಈ ವಿಷಯದಲ್ಲಿ ಸರ್ಕಾರದವರು ರಚನಾತ್ಮಕವಾದ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ನಾನು ಮತ್ತೊಮ್ಮೆ ಪ್ರಾರ್ಥನೆ ಮಾಡುತ್ತೇನೆ.

ಎಲ್ಲದಕ್ಕಿಂತ ಮೊದಲು ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಹಣ ಬೇಕು. ಮತ್ತು ಟಿ.ಡಿ.ಬಿ ಗೆ ಹಣವನ್ನು ಕೊಡಬೇಕು: ನಮ್ಮ ತಾಲ್ಲೂಕಿನಲ್ಲಿ ಮೈನರ್ ಇರಿಗೇಷನ್ ಪ್ರಾಜೆಕ್ಟುಗಳನ್ನು ಮತ್ತು ಕುಡಿಯುವ ನೀರಿನ ಬಾವಿಗಳನ್ನು ಮಾಡಬೇಕು. ಈ ಸಮಸ್ಯೆ ಬಹಳ ದಿವಸಗಳಿಂದ ನಮ್ಮ ತಾಲ್ಲೂಕಿನಲ್ಲಿದೆ. ಇಥನ್ನು ಒಂದು ದೊಡ್ಡ ಸಮಸ್ಯೆಯಾಗಿ ತೆಗೆದುಕೊಂಡು ಈ ಸಮಸ್ಯೆಯನ್ನು ಬಗೆಹರಿಸಬೇಕು.

ಪ್ರೈಮರಿ ಎಜುಕೇಷನ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಯಾಹ್ಯಾ ಅವರು ನುರಿತ ಮಂತ್ರಿಗಳು ಇದ್ದಾರೆ. ಇವರು ನಮ್ಮ ಹಂಗನೂರು ತಾಂಡ ಮತ್ತು ಕುಕ್ಕಟ ನೂರು ತಾಂಡ ಇವುಗಳ ಬಗ್ಗೆ ಗಮನ ಕೊಡಬೇಕು. ಈ ಎರಡು ತಾಂಡಗಳು ಅಭಿವೃದ್ಧಿ ಆಗಿಲ್ಲ. ಇಂಥ ಒಳ್ಳೆಯ ಕೆಲಸಗಳನ್ನು ಸರ್ಕಾರದವರು ಮಾಡಬೇಕು. ಇದೂ ಕೂಡ ಒಂದು ತರಹ ಅನುಕೂಲ ಎಂದು ತಿಳಿದುಕೊಂಡು ಜನಗಳಿಗೆ ಅನುಕೂಲ ಮಾಡಬೇಕು ಎಂದು ಹೇಳಿ ಅಧ್ಯಕ್ಷರು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು (ಶಾಂತಿನಗರ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಮಾಡಿರತಕ್ಕ ಭಾಷಣವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ನಾಲ್ಕು ವಿಷಯಗಳನ್ನು ಅಂಕಿ ಅಂಶಗಳ ಆಧಾರದ ಮೇಲೆ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ಅಧ್ಯಕ್ಷಿಣಿಯವರೇ, ಮಾನ್ಯ ರಾಜ್ಯಪಾಲರು ಸಿನ್‌ಸಿಯಾರಿಟಿ ಮತ್ತು ಡೆಡಿಕೇಷನ್ ಮುಖ್ಯ ಎಂದು ಮೊದಲೇ ಹೇಳಿದ್ದಾರೆ, ಇದನ್ನು ಎಲ್ಲರೂ ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಬಡ ಜನರಿಗೆ ಇದರಿಂದ ಸಹಾಯ ಮಾಡಬೇಕೆಂದು ಮಾಡಿದ್ದಾರೆ. ಗಾಂಧೀಜಿ ಯವರ ಕನಸು ನನಸಾಗಬೇಕಾದರೆ ಮುಖ್ಯವಾಗಿ ಬೇಕಾದದ್ದು ಊಟ, ಬಟ್ಟೆ, ವಸತಿ, ವಿದ್ಯಾ ಭ್ಯಾಸ, ಆರೋಗ್ಯ ಇವು ಮುಖ್ಯ, ಈ ಐದು ಅಂಶಗಳನ್ನು ನಮ್ಮ ಸರ್ಕಾರದವರು 1972 ರಿಂದ 1977ರ ವರೆಗೆ ಒಂದೊಂದಾಗಿ ಮಾಡಿದ್ದಾರೆ, ಇದನ್ನು ಸಂತೋಷವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಲ್ಯಾಂಡ್ ರಿಫಾರಮ್ಸ್ ಬಗ್ಗೆ ಮಾನ್ಯ ಬಸವಲಿಂಗಪ್ಪನವರಿಗೆ ಅನೇಕ ಸಂದರ್ಭ ದಲ್ಲಿ ವಿರೋಧಪಕ್ಷದ ನಾಯಕರು ಇಂಟರ್‌ಪ್ರಿಟ್ ಮಾಡಿದ್ದು ನೋಡುತ್ತಿದ್ದೆವು. ಅಧ್ಯಕ್ಷಿಣಿ ಯವರೇ ಈ ಒಂದು ಲ್ಯಾಂಡ್ ರಿಫಾರಮ್ಸ್ ಆ್ಯಕ್ಟ್ 1951 ರಿಂದ 1972ರ ವರೆಗೂ ಇದು ಬರೀ ಆ್ಯಕ್ಟ್ ಆಗಿಯೇ ಉಳಿದಿತ್ತು, ಅದಕ್ಕೆ ಕಾರಣ ಏನು ಅದನ್ನು ಮಾನ್ಯಸದಸ್ಯರೇ ಯೋಚನೆ ಮಾಡ ಬೇಕು. ನಮ್ಮ ಕಾಲಕ್ಕೆ ಧೈರ್ಯವಾಗಿ ಮುಂದೆ ಒಂದು ಹೆಜ್ಜೆ ಇಟ್ಟು ಒಂದು ಕನ್‌ಸಲ್‌ಟ್ ಟೀವ್ ಕಮಿಟಿ ಮಾಡಿ ಲ್ಯಾಂಡ್ ರಿಫಾರಮ್ಸ್ ಬಗ್ಗೆ ಜಾರಿಗೆ ತಂದೆವು. It is one of revolutionary periods in India, ಅದೇ ಕರ್ನಾಟಕದಲ್ಲಿ ಉಳುವವನೇ ಭೂಮಿಗೆ ಒಡೆಯ ಎಂದು ಹೇಳಿದರೆ ತಪ್ಪಾಗಲಾರದು ಇವೊತ್ತಿನ ದಿವಸ ಇದರಿಂದ ಎಷ್ಟು ಲಕ್ಷ ಜನರಿಗೆ ಸಹಾಯವಾಗಿದೆ ಎನ್ನುವುದು ತಮಗೆ ಗೊತ್ತಿದೆ. ಇದರಿಂದ ಎಂತಹ ಪ್ರಗತಿಪರ ಸಾಧನೆಯಾಗಿದೆ, ಲ್ಯಾಂಡ ಟ್ರಿಬ್ಯುನಲ್ಸ್ ಎಂದು ಏನು ಮಾಡಿದ್ದೇವೆ, ಇದರ ಮೂಲ ಉದ್ದೇಶ ಏನು ಎಂದು ತಮಗೆ ಗೊತ್ತಿದೆ ಮೊದಲು ಏನಾಗುತ್ತಿತ್ತು ಎಂದರೆ ಬಡ ಬೋರೇಗೌಡ ಕೋರ್ಟ್ ಕಾಂಪೌಂಡಿನಲ್ಲಿ ಕುಳಿತು ಕೇಸ್ ಅಡ್ಜರ್ನ್ ಆಯಿತು ಅಂದ ತಕ್ಷಣ ಅವನು ಸಾಯುತ್ತ ಹೋಗ ಬೇಕಾಗಿತ್ತು. ಅದನ್ನು ತಪ್ಪಿಸಬೇಕು ಎನ್ನುವ ಮೂಲ ಉದ್ದೇಶದಿಂದ ಈ ಒಂದು ಆ್ಯಕ್ಟನ್ನು ತಂದದ್ದು. ನಾವು ಈ ಲ್ಯಾಂಡ್‌ಟ್ರಿಬ್ಯುನಲ್ ಮಾಡದೇ ಇದ್ದಿದ್ದರೆ 20-30 ಲಕ್ಷ ಕೇಸುಗಳನ್ನು ಯಾವ ರೀತಿ ಡಿಸ್ಪೋಸ್ ಮಾಡಲಿಕ್ಕೆ ಆಗುತ್ತಿತ್ತು, ಅದನ್ನು ತಾವು ನೋಡಬೇಕು. ಇವೊತ್ತು ಕೆಲವು ಕಡೆಗಳಲ್ಲಿ ಲೋಪದೋಷ ಇರಬಹುದು, ಇಂಪ್ಲಿಮೆಂಟೇಷನ್ ಸ್ಟೇಜ್‌ನಲ್ಲಿ ಲೋಪ ದೋಷವಾಗಿರಬಹುದು, ಅದು ಏನು ಅಂತಹ ದೊಡ್ಡ ತಪ್ಪೇನಲ್ಲ ಲ್ಯಾಂಡ್ ರಿಫಾರಮ್ಸ್ ಬಗ್ಗೆ ನಾವು ಎಷ್ಟು ಹೇಳಿದರು ಸಾಲದು, ಇದರಿಂದ ವರ್ತಕ ಜನರಿಗೆ, ಮುಂದುವರೆದಂತಹ ಜನರಿಗೆ, ಬಡವರನ್ನು ದೂರು ಮಾಡಿದಂತ ಜನರಿಗೆ ತೊಂದರೆಯಾಗಿರಬಹುದು, ಆದರ ಗ್ರಾಮಾಂತರ ಪ್ರದೇಶದಲ್ಲಿರತಕ್ಕಂತಹ ಜನರಿಗೆ ನೂರಕ್ಕೆ ಎಂಭತ್ತು ಪರ್‌ಸೆಂಟ್ ಅನುಕೂಲವಾಗಿದೆ. ಗ್ರಾಮಾಂತರ ಪ್ರದೇಶದಲ್ಲಿ ಹತ್ತು ಎಕರೆ ಒಳಪಟ್ಟು ಇಟ್ಟುಕೊಂಡಿರತಕ್ಕಂತಹವರಿಗಾ ಯಾವುದೇ ತೊಂದರೆಯಾಗಿಲ್ಲ. ಈ ಲ್ಯಾಂಡ್ ರಿಫಾರಮ್ಸ್‌ನಿಂದ ತೊಂದರೆಯಾಗಿರತಕ್ಕ ಜನರು ಅಂದರೆ ಅವರು ಸುಮಾರು ಇಪ್ಪತ್ತು ಪರ್‌ಸೆಂಟ್ ಬರಬಹುದು ಎಂದು ಹೇಳುತ್ತೇನೆ, ಇದರಿಂದ ಬಡ ಬೋರೇಗೌಡನಿಗೆ ನಿಜವಾಗಿಯೂ ತೊಂದರೆ ಯಾಗಿಲ್ಲ. ಇನ್ನು ಪ್ರೈಸಸ್ ಬಗ್ಗೆ ಹೇಳಬೇಕು ಎಂದರೆ ಹಿಂದೆ ನಾವು ಸರ್ಕಾರಕ್ಕೆ ಬರುವ ಮೊದಲು ಯಾವರೀತಿ ಇತ್ತು, ಈಗ ಯಾವರೀತಿ ಕಂಟ್ರೋಲ್‌ನಲ್ಲಿದೆ ಎನ್ನುವುದು ಮಾನ್ಯ ಸದಸ್ಯರಿಗೆ ಗೊತ್ತಿದೆ. ನಮ್ಮಲ್ಲಿ ಈ ಫುಡ್‌ಗ್ರೈನ್ಸ್ ಭಫರ್ ಸ್ಟಾಕ್ ಇಟ್ಟಿದ್ದುದರಿಂದ ಬಹಳ ಅನುಕೂಲವಾಯಿತು, ಇಂಟರ್ ಡಿಸ್ಟ್ರಿಕ್ಟ್ ಮೂವ್ ಮೆಂಟ್ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಪ್ರೆಜರ್ ಬಂತು, ಅದಕ್ಕೆ ಅವರು ಒಪ್ಪಲಿಲ್ಲ ಅವರೇನಾದರೂ ಒಪ್ಪಿದ್ದರೆ ಫುಡ್‌ಗ್ರೈನ್ಸ್ ಎಲ್ಲಾ ಇವೊತ್ತು ಕರ್ನಾಟಕದಿಂದ ಮಹಾರಾಷ್ಟ್ರಕ್ಕೊ ಕೇರಳಾಕ್ಕೋ ಹೋಗಿ ನಾವು ಲಾಟರಿ ಹೊಡೆಯುವ ಪರಿಸ್ಥಿತಿ ಬರುತ್ತಿತ್ತು. ನಮ್ಮಲ್ಲಿ ಈ ಫುಡ್‌ಗ್ರೈನ್ ಬಫರ್ ಸ್ಟಾಕ್ ಇಟ್ಟುಕೊಂಡಿರುವುದರಿಂದ ಸರ್ಕಾರಿ ಅಧಿಕಾರಿಗಳಿಗೆ ಕಂತುಗಳ ಮೂಲಕ ಎರಡು ಮೂರು ಕ್ವಿಂಟೋಲ ದವಸ ಒದಗಿಸಲಿಕ್ಕೆ ಅನುಕೂಲವಾಯಿತು. ಆದುದರಿಂದ ಈ ಸರ್ಕಾರ ಪ್ರೈಸ್ ಕಂಟ್ರೋಲ್ ಮಾಡಿದ್ದನ್ನು ಮರೆಯಬಾರದು ಎಂದು ಹೇಳುತ್ತೇನೆ. ಈಗ ರೇಷನಿಂಗ್ ಸಿಸ್ಟಂ ಇನ್ನು ಹನ್ನೊಂದು ಜಿಲ್ಲೆಗಳಿಗೆ ಎಕ್ಸ್‌ಟೆಂಡ್ ಮಾಡುತ್ತಾ ಇರು ವುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವೊತ್ತು ನಮ್ಮಲ್ಲಿ ಬಫರ್ ಸ್ಟಾಕು

ಇಲ್ಲದೇ ಇದ್ದಿದ್ದರೆ ಮೂರು ರೂಪಾಯಿಗೆ ಒಂದು ಕೆಜಿ ಅಕ್ಕಿ ಆಗುತ್ತಿತ್ತು, ಲ್ಯಾಂಡ್ ರಿಫಾರ್ಮ್ಸ್, ಜಾರಿಗೆ ತಂದದ್ದರಿಂದ ಪ್ರೊಡಕ್ಷನ್ ಜಾಸ್ತಿ ಮಾಡಲಿಕ್ಕೆ ಸಾಧ್ಯವಾಯಿತು ಎಂದು ಹೇಳುತ್ತೇನೆ. ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಮುಖ್ಯವಾಗಿ ಇರಿಗೇಷನ್ ಫೆಸಿಲಿಟೀಸ್ ಮತ್ತು ಪವರ್‌ಗೆ ಹೆಚ್ಚಿನ ಆಧ್ಯತೆ ಕೊಟ್ಟಿದ್ದಾರೆ, ಅದು ಒಂದು ಕಾಲದಲ್ಲಿ 8 ಪರ್ಸೆಂಟ್ ಇದ್ದದ್ದು ಇವೊತ್ತು 17 ಪರ್ಸೆಂಟ್ ಇಂಕ್ರೀಸ್ ಆಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಮ್ಮ ಅನುಭವದಲ್ಲಿ ನೋಡಿದರೆ ಹೋದ ವರ್ಷ ಮಳೆ ಬಾರದೆ ತೊಂದರೆಯಾಗಿರುವುದು ತಮಗೆಲ್ಲಾ ಗೊತ್ತಿದೆ. ಆದುದರಿಂದ ನಮ್ಮ ಮಾನ್ಯ ಮಂತ್ರಿಗಳು ಇರಿಗೇಷನ್, ಪವರ್‌ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟು 8 ಪರ್ಸೆಂಟ್ ಇದ್ದದ್ದು 17 ಪರ್ಸೆಂಟ್ ಇಂಕ್ರೀಸ್ ಮಾಡಿದ್ದಾರೆ. ಇವೊತ್ತು ಎಲೆಕ್ಟ್ರಿಸಿಟಿ ಹೈಡಲ್ ಪ್ರಾಜೆಕ್ಟ್ ಸಕ್ಸಸ್‌ಫುಲ್ ಆಗಿದೆ, ಮಾನ್ಯ ಮುಖ್ಯ ಮಂತ್ರಿಗಳವರು ರೈತರ ಕುಟುಂಬದಿಂದ ಬಂದಿರತಕ್ಕವರು, ಅವರಿಗೆ ಯಾವುದರ ಬಗ್ಗೆ ಹಣವನ್ನು ಇಂಕ್ರೀಸ್ ಮಾಡಬೇಕು ಎಂದು ಗೊತ್ತಿದೆ; ಇವೊತ್ತು ಘಟಪ್ರಭ ಮಲಪ್ರಭಾ ಹಾರಂಗಿ ಇವುಗಳಿಗೆ ಬರೀ ಫೌಂಡೇಷನ್ ಸ್ಟೋನ್ ಹಾಕಿದರೆ ಕೆಲಸ ಆಗಲಿಲ್ಲ ಅದನ್ನು ಮುಗಿಸಲಿಕ್ಕೆ 500 ಕೋಟಿ ರೂಪಾಯಿಗಳು ಬೇಕಾಗುತ್ತದೆ, ಅದನ್ನು ಬಿಟ್ಟು ಮಾನ್ಯ ಪಾಟೀಲರು ನಮ್ಮ ಕೃಷ್ಣ ಎಡದಂಡೆ, ಬಲದಂಡೆ ಎಂದು ಹೇಳಿದರೆ ದುಡ್ಡು ಎಲ್ಲಿಂದ ತರಲಿಕ್ಕೆ ಆಗುತ್ತದೆ. ಬರೀ ಫೌಂಡೇಷನ್ ಸ್ಟೇಜ್ ಮುಗಿದರೆ ಏನು ಮಾಡುವುದಕ್ಕಾಗುವುದಿಲ್ಲ, ಅದಕ್ಕೆ ಟೆಕ್ನಿಕಲ್ ಸ್ಯಾಂಕ್ಷನ್ ಆಗಬೇಕು, ಮತ್ತು 5 0 ಕೋಟಿ ರೂಪಾಯಿ ಒಂದೇ ಸಾರಿ ತರಬೇಕು ಎಂದರೆ ಎಲ್ಲಿಂದ ತರಲಿಕ್ಕೆ ಸಾಧ್ಯವಾಗುತ್ತದೆ, ಇನ್ನು ಮೆಡಿಕಲ್ ಸರ್ವೀಸ್ ಬಗ್ಗೆ ಹೇಳಬೇಕು ಎಂದರೆ ಒಂದು ಕಾಲದಲ್ಲಿ ಕೇವಲ 26 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದು ಇವೊತ್ತಿನ ದಿವಸ 43 ಕೋಟಿ ರೂಪಾಯಿ ಖರ್ಚು ಮಾಡುತ್ತಿದ್ದೇವೆ, ಇದರಿಂದಾಗಿ ಪ್ರತಿ 7,500 ವ್ಯಕ್ತಿಗಳಿಗೆ ಒಬ್ಬ ವೈದ್ಯರ ಸೇವೆ ದೊರೆಯುವಂತಾಗಿದೆ, ಇವೊತ್ತು ರೂರಲ್ ಮೆಡಿಕಲ್ ಡಿಸ್ಪೆನ್ಸರೀಸ್ ಸಾಕಷ್ಟು ತೆರೆಯಬೇಕಾದ್ದು ಇದೆ. ಅನೇಕ ಸಂದರ್ಭದಲ್ಲಿ ಯುನಾನಿ, ಆಯುರ್ವೇದಿಕ್, ಹೋಮಿಯೋಪತಿ, ಇವುಗಳನ್ನು ಇಂಡಿಪೆಂಡೆಂಟ್ ಡಿಪಾರ್ಟ್‌ಮೆಂಟ್ ಮಾಡಿ ಎಂದು ಹೇಳುತ್ತಿದ್ದರು. ನಮ್ಮ ಭಾರತದ ಪದ್ಧತಿಯನ್ನು ಮಾಡಿ, ಬೇರೆಯವರ ಪದ್ಧತಿಯನ್ನು ಬಿತಕ್ಕೆ ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ, ನಮ್ಮ ಕರ್ನಾಟಕದಲ್ಲಿ 9 ಮೆಡಿಕಲ್ ಕಾಲೇಜ್‌ಗಳಲ್ಲಿ ಒಳ್ಳೆಯ ಎಜುಕೇಷನ್ ವಿದ್ಯಾರ್ಥಿಗಳಿಗೆ ಸಿಕ್ಕುತ್ತಿದೆ ಎನ್ನುವುದನ್ನು ಮರೆಯಬಾರದು, ನಮ್ಮ ಉದ್ದೇಶ ಇಷ್ಟೇ ಬಹಳ ಜನರು ವಿದ್ಯಾವಂತರಾಗಬೇಕು. ಅವರಿಗೆ ಹೆಚ್ಚಿನ ಫೆಸಿಲಿಟೀಸ್ ಕೊಡಬೇಕು, ಮಾಡರನ್ ಎಕ್ವಿಪ್‌ಮೆಂಟ್ ತರಬೇಕು ಎನ್ನುವುದೇ ನಮ್ಮ ಮೂಲ ಉದ್ದೇಶ. ಇನ್ನು ವಿದ್ಯಾಭ್ಯಾಸದ ಬಗ್ಗೆ ಹೇಳಬೇಕು ಎಂದರೆ ಒಂದು ಕಾಲದಲ್ಲಿ ಈ ವಿದ್ಯಾಭ್ಯಾಸಕ್ಕಾಗಿ 70 ಕೋಟಿ ರೂಪಾಯಿ ಹಣವನ್ನು ಖರ್ಚುಮಾಡುತ್ತಿದ್ದು, ಇವೊತ್ತಿನ ದಿವಸ 112 ಕೋಟಿ ರೂಪಾಯಿ ಆಗಿದೆ. ಅದು ಮುಂದಿನ ವರ್ಷ 118 ಕೋಟಿ ರೂಪಾಯಿಗೆ ಹೋಗಬಹುದು. ನಮ್ಮ ರಾಜ್ಯದಲ್ಲಿ 26 ಸಾವಿರ ಚಿಲ್ಲರೆ ಸೆಕೆಂಡರಿ ಶಾಲಾ ಶಿಕ್ಷಕರು, 1 ಲಕ್ಷದ 2 ಸಾವಿರ ಪ್ರಾಥಮಿಕ ಶಾಲಾ ಶಿಕ್ಷಕರೂ ಕೆಲಸ ಮಾಡುತ್ತಿದ್ದಾರೆ. 90 ಕೋಟಿ ರೂಪಾಯಿ ಹಣವನ್ನು ಬರೀ ಪ್ರೈಮರಿ ಎಜುಕೇಷನ್‌ಗಾಗಿ ಖರ್ಚು ಮಾಡುತ್ತಿದ್ದಾರೆ. ಇವೊತ್ತು ಪ್ರೈಮರಿ ಎಜುಕೇಷನ್ ಎನ್ನತಕ್ಕದ್ದು ನಮ್ಮ ನ್ಯಾಷನಲ್ ಪಾಲಿಸಿ ಇದನ್ನು ಪ್ರತಿಯೊಬ್ಬರಿಗೂ ಕೊಡಲೇಬೇಕಾಗುತ್ತದೆ. ಇದರಿಂದ ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗುತ್ತದೆ. ಮತ್ತು ಜಾಬ್ ಓರಿಯೆಂಟೆಡ್ ಎಜುಕೇಷನ್ ಬೇಕಾಗುತ್ತದೆಎಂದು ಹೇಳುತ್ತಿದ್ದೆವು. ಇವೊತ್ತು 1 ಲಕ್ಷದ 86 ಸಾವಿರ ಜನ ನಿರುದ್ಯೋಗದಲ್ಲಿದ್ದಾರೆ. ವಿದ್ಯಾವಂತರ ಜಾಸ್ತಿಯಾದರೆ ಸರ್ಕಾರದಲ್ಲಿ ಕೆಲಸ ಸಿಕ್ಕುವುದಿಲ್ಲ. ಇವೊತ್ತು ಸರ್ಕಾರಿ ಕೆಲಸದಲ್ಲಿ ಇನ್‌ಸ್ಟಿಟ್ಯೂಷನ್‌ಗಳಲ್ಲಿ ನಾಲ್ಕೂವರೆ ಲಕ್ಷ ಜನ ಅಧಿಕಾರಿಗಳು ಇದ್ದಾರೆ, ವರ್ಷದ ಬಡ್ಜೆಟ್ಟಿನಲ್ಲಿ ಮೂರನೇ ಒಂದು ಭಾಗ ಹಣವನ್ನು ಇವರಿಗಾಗಿ ಖರ್ಚು ಮಾಡುತ್ತಿದ್ದೇವೆ, ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಪ್ರಾಮುಖ್ಯತೆ ಕೊಡಬೇಕೆಂದು ಯೂನಿವರ್ಸಿಟಿ ಬಗ್ಗೆ ಏನು ಇದೆ, ಅದು ತಮ್ಮ ಗಮನಕ್ಕೆ ಬಂದಿದೆ. ಇನ್ನು ಕರ್ನಾಟಕ ಯೂನಿವರ್ಸಿಟಿ ಬೆಂಗಳೂರು ಯೂನಿವರ್ಸಿಟಿ ಮೈಸೂರು ಯೂನಿವರ್ಸಿಟಿ ಅಡ್ಮಿನಿಸ್ಟ್ರೇಷನ್ ಒಂದೇ ತರಹ ಇರಲಿ ಎಂದು ತಂದದ್ದು ತಮಗೆ ಗೊತ್ತಿರಬಹುದು.

ಅದೇ ರೀತಿ ಸೋಷಿಯಲ್ ವೆಲ್‌ಫೇರ್ ಮೆಷರ್ಸ್‌ಗಳನ್ನು ನಮ್ಮ ಸರ್ಕಾರದವರು ಬೇಕಾದಷ್ಟು ಮಾಡಿದ್ದಾರೆ, ಎಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಕೆಲವು ಮೆಷರ್ಸ್ ಬಗ್ಗೆ ಹೇಳಿದ್ದಾರೆ, ಒಂದಾನೊಂದು ಕಾಲದಲ್ಲಿ ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಬಾರದು ಎಂದು ಇತ್ತು, ಆದರೆ ಈಗಲೂ ನಾವು ಹಾಸ್ಟೆಲ್ ಕಟ್ಟಡಗಳನ್ನು ಕಟ್ಟಿಸಿ ಆ ಕಾರ್ಯಕ್ರಮವನ್ನು ಮುಂದುವರಿಸುತ್ತ ಬಂದಿದ್ದೇವೆ, ಮಾನ್ಯ ಸದಸ್ಯರುಗಳಿಗೆ ಗೊತ್ತಿರುವ ಹಾಗೆ ನಮ್ಮ ಸರ್ಕಾರದವರು ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್ ಅನ್ನು ಅಪಾಂಟ್ ಮಾಡಿದರು. ಇದು ಮೊಟ್ಟ ಮೊದಲನೆಯದಾಗಿ ಭಾರತದೇಶದಲ್ಲಿಯೇ ಒಳ್ಳೆಯ ಕೆಲಸ ಎಂದು ನಾನು ಹೇಳುತ್ತೇನೆ, ಇದರಿಂದ ಬ್ಯಾಕ್‌ವರ್ಡ್ ಕ್ಲಾಸ್ ಜನಗಳಿಗೆ ಬಹಳ ಸಹಾಯವಾಗಿದೆ, ನಿನ್ನೆಯ ದಿವಸ ಮಾನ್ಯ ಮುಖ್ಯಮಂತ್ರಿಗಳು ಸದಸ್ಯರೊಬ್ಬರ ಪ್ರಶ್ನೆಗೆ ಉತ್ತರ ಕೊಡುತ್ತಾ ಬ್ಯಾಕ್‌ವರ್ಡ್‌ಕ್ಲಾಸಸ್‌ಗೆ ಒಂದು ಹೆಜ್ಜೆ ಮುಂದೆ ಹೋಗಿ 58 ಪರ್ಸೆಂಟ್‌ವರೆಗೆ ಪ್ರಾತಿನಿಧ್ಯ ಕೊಡುತ್ತೇವೆಂದು ಹೇಳಿದ್ದಾರೆ, ಇದರಿಂದ ಆ ಜನರಿಗೆ ಸಹಾಯ ಮಾಡಿದಂತಾಗುವುದಲ್ಲವೇ ? ಈ ಕಮಿಷನ್‌ನವರು ಸುಮಾರು 32 ಸಾವಿರ ಮೈಲಿಗಳವರೆಗೆ ಟೂರ್ ಮಾಡಿ ಒಂದು ಒಳ್ಳೆಯ ರಿಪೋರ್ಟನ್ನು ಕೊಟ್ಟಿದ್ದಾರೆ, ನನ್ನ ಅಭಿಪ್ರಾಯದಲ್ಲಿ ಲೆಟ್ ಇಟ್ ಬಿ ದಿ ಲ್ಯಾಸ್ಟ್ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್, ಮತ್ತು ಇಟೀಸ್ ಎ ಚಾಪ್ಟರ್ ಟು ದಿ ಬ್ಯಾಕ್‌ವರ್ಡ್ ಕ್ಲಾಸ್ ಕಮಿಷನ್. ಹೀಗಿರತಕ್ಕ ಕಾಲದಲ್ಲಿ ಇಂಥ ವರದಿಯನ್ನು ನಾವು ಸರ್ಕಾರಕ್ಕೆ ಕೊಟ್ಟಮೇಲೆ ಇದರಿಂದ ಬಡವರಿಗೆ ಸಹಾಯ ಮಾಡಿದಂತಾಗುವುದಲ್ಲವೇ ?

12-30 P. M.

ಇನ್ನು ಫ್ರೀ ಮೆಡಿಕಲ್ ಎಡ್ ಬಗ್ಗೆ ಹೇಳುವುದಾದರೆ, ಇದನ್ನೂ ನಮ್ಮ ಸರ್ಕಾರದವರು ಮಾಡಿದ್ದಾರೆ, ಹೌಸಿಂಗ್ ಮತ್ತು ಸ್ಲಂಗಳ ಬಗ್ಗೆಯೂ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ, ಸುಮಾರು 161 ಸ್ಲಂ ಪ್ರದೇಶಗಳ ನಿರ್ಮೂಲನಕ್ಕೆ ಕಾರ್ಪೊರೇಷನ್‌ನವರು 43 ಲಕ್ಷ ರೂಪಾಯಿಗಳನ್ನೂ, ಸುಮಾರು 5 ಕೋಟಿ ರೂಪಾಯಿಗಳನ್ನು ಸರ್ಕಾರದವರು ಸ್ಲಂ ಕ್ಲಿಯರೆನ್ಸ್ ಬೋರ್ಡಿಗೆ ಕೊಟ್ಟಿದ್ದಾರೆ, ನಮ್ಮ ಸರ್ಕಾರದವರು ಸುಮಾರು 52 ಸಾವಿರ ಮನೆಗಳನ್ನು ಕಟ್ಟಿದಾರೆ, ಮತ್ತು 7 ಲಕ್ಷ ಸೈಟ್‌ಲೆಸ್ ಜನರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಇದೆಲ್ಲಾ ನಮ್ಮ ಸರ್ಕಾರದ ಪ್ರಗತಿಪರ ಕಾರ್ಯವಲ್ಲವೇ ?

ರೂರಲ್ ಬ್ಯಾಂಕುಗಳ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇವುಗಳನ್ನು ಸರ್ಕಾರದವರು ಈದಾಗಲೇ ಘಟಪ್ರಭಾ ಮತ್ತು ಮಲಪ್ರಭಾ ಪ್ರದೇಶಗಳಲ್ಲಿ ಮಾಡಿದಾರೆ, ಮತ್ತು ನಮ್ಮ ನಮ್ಮ ರಾಜ್ಯದಲ್ಲಿ ಸರಾಸರಿ 23 ರಷ್ಟು ಬೀಳು ಪ್ರದೇಶ ಇದೆ. ಇದರಿಂದ ಮಳೆಯೂ ಕಡಿಮೆಯಾಗಿದೆ ಇಂಥ ಕಡೆ ಅರಣ್ಯ ಇಲಾಖೆಯವರು ಅಫಾರೆಸ್ಟೇಷನ್ ಕೆಲಸಗಳನ್ನು ತೆಗೆದುಕೊಂಡು ಹೆಚ್ಚಿನ ರೀತಿಯಲ್ಲಿ ಅರಣ್ಯವನ್ನು ಬೆಳೆಸುವುದು ಸೂಕ್ತವೆಂದು ನಾನಾದರೂ ಭಾವಿಸುತ್ತೇನೆ,

ಇನ್ನು ರಸ್ತೆಗಳ ಸಂಬಂಧಪಟ್ಟಹಾಗೆ ಎರಡು ಮಾತುಗಳನ್ನು ಹೇಳುತ್ತೇನೆ. ರಸ್ತೆ ಸುಧಾರಣೆಯ ಬಗ್ಗೆ ನೇಮಿಸಿದಂಥ ಕಮಿಟಿಯವರು ಸಹ ರಿಪೋರ್ಟ್ ಕೊಟ್ಟಿದ್ದಾರೆ. ಇವರ ಸಲಹೆಯ ಮೇರೆಗೆ ಬೇಕಾದಷ್ಟು ಹಳ್ಳಿಗಳಿಗೆ ರೋಡುಗಳ ಸೌಕರ್ಯವಾಗುತ್ತದೆ. ಅಲ್ಲದೆ ರೋಡ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿರುವುದರಿಂದ ಕುದುರೆಮುಖ ಮುಂತಾದ ಯೋಜನೆಗಳಿಗೆ ಸಹಾಯಕವಾಗುತ್ತದೆ.

ಸಿರಿಕಲ್ಚರ್ ಇಂಡಸ್ಟ್ರೀಸ್‌ಗೆ ಕೇಂದ್ರ ಸರ್ಕಾರದವರು ಸುಮಾರು 70 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ ಸುಮಾರು 80 ಪರ್ಸೆಂಟ್ ಮಲ್ಬರಿ ಸಿಲ್ಕ್ ತಯಾರು ಮಾಡತಕ್ಕ ಇಂಡಸ್ಟ್ರಿ ನಮ್ಮ ದೇಶದಲ್ಲಿದೆ. It is a queen of textile industry, ಎಂದು ಹೇಳುತ್ತಾರೆ. ಇದು ಶ್ರೀಮಾನ್ ಶ್ರೀರಾಮುಲು ಅವರ ಕಾಲದಲ್ಲಿ ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಗತಿಪರವಾಗಿ ಬೆಳೆಯುವುದಕ್ಕೆ ಅವಕಾಶವಾಗಬೇಕು.

ಡಯರಿ ಡೆವಲಪ್‌ಮೆಂಟ್ ಪ್ರೋಗ್ರಾಂ—ಇದರ ಕಾರ್ಯಾಚರಣೆಯಲ್ಲಿ ಕೌಸ್ ಪೌಡರ್ ಹೆಚ್ಚು ಹೆಚ್ಚಾಗಿ ದೊರೆಯುವಂತೆ ಮಾಡಬೇಕು ಎಂದು ನಾನು ಪಶುಸಂಗೋಪನ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಓಲ್ಡ್ ಏಜ್ ಪೆನ್‌ಷನ್ ಬಗ್ಗೆ—ನಮ್ಮ ರಾಜ್ಯದಲ್ಲಿ ಇದನ್ನು ಸುಮಾರು 1.56 ಲಕ್ಷ ಜನ ಪಡೆಯುತ್ತಿದ್ದಾರೆ. ನಾನು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರದವರು ಮಾಡಿರತಕ್ಕ ಸಾಧನೆಯ ಕೆಲಸ ಕಾರ್ಯಗಳನ್ನು ನಾನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಘಂಟಾಘೋಷವಾಗಿ ತಿಳಿಸಬಯಸುತ್ತೇನೆ. ನಾನು ಈ ಮಾತನ್ನು ಹೇಳುವಾಗ ಅಂಕಿ ಅಂಶಗಳ ಆಧಾರದಿಂದ ಹೇಳುತ್ತಿದ್ದೇನೆಂದು ಮಾನ್ಯ ಸದಸ್ಯರು ತಿಳಿಯಬೇಕು. ನಮ್ಮ ಕಾರ್ಯಕ್ರಮಗಳಲ್ಲಿ ನಾವು ಪ್ರಾರಂಭದಲ್ಲಿದ್ದೇವೆನ್ನುವ ಮಾತನ್ನು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಅಧ್ಯಕ್ಷಿಣಿಯವರೇ, ರಾಜ್ಯಪಾಲರು ತಮ್ಮ ಭಾಷಣದ ಆರಂಭದಲ್ಲಿ ''ನೀವು ಇದೀಗ ಚುನಾವಣೆಯ ರಂಗದಿಂದ ಮರಳಿ ಬಂದಿದ್ದೀರಿ ಜನ ಸಂಪರ್ಕವನ್ನು ನೀವು ನಿಜವಾಗಿಯೂ ನವೀಕರಿಸಿಕೊಂಡಿದ್ದೀರಿ ಜನತೆಯ ನಾನಾ ತೊಂದರೆಗಳನ್ನು ಸಮಸ್ಯೆಗಳನ್ನೂ ಚೆನ್ನಾಗಿ ಅರಿತವರಾಗಿದ್ದು ಆ ತೊಂದರೆಗಳನ್ನು ನಿವಾರಿಸಲು ನಮ್ಮ ಸರ್ಕಾರವು ಏನು ಮಾಡಿದೆ, ಇನ್ನೂ ಏನು ಮಾಡಬೇಕು ಎಂಬುದನ್ನು ಚರ್ಚಿಸಲು ಬಂದಿದ್ದೀರಿ'' ಎಂದು ಪ್ರಸ್ತಾಪ ಮಾಡಿದ್ದಾರೆ. ನಾನಾದರೂ ಯಾವುದನ್ನೂ ಉತ್ಪ್ರೇಕ್ಷೆ ಮಾಡಿ ಹೇಳದೆ ಒಂದೆರಡು ವಿಚಾರಗಳನ್ನು ತಮ್ಮ ಮುಂದೆ ಇಡುತ್ತೇನೆ. ಮೊನ್ನೆ ಚುನಾವಣೆ ನಡೆದಾಗ 45 ದಿನಗಳಲ್ಲಿ ಸುಮಾರು 15 ಸಾವಿರ ಕುಟುಂಬಗಳನ್ನು ಸಂಪರ್ಕ ಮಾಡಿಕೊಂಡು ಬಂದಿದ್ದೇನೆ. ನನ್ನ ಈ ಸಂದರ್ಶನ ಕಾಲದಲ್ಲಿ ನನಗೆ ಎತ್ತಿ ತೋರತಕ್ಕದ್ದು ಏನೆಂದರೆ ಸರ್ಕಾರದ ಬಡತನವನ್ನು, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಪೂರ್ಣವಾಗಿ ವಿಫಲವಾಗಿದೆ ಎನ್ನುವುದು. ಇದು ಯಾವ ಉತ್ಪ್ರೇಕ್ಷೆಯ ಮಾತಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಮೊದಲನೆಯದಾಗಿ, ಸರ್ಕಾರದವರು ಎಷ್ಟೇ ಹಣವನ್ನು ಖರ್ಚು ಮಾಡಿರಲಿ, ಎಷ್ಟೇ ಕೆಲಸ ಮಾಡಿರಲಿ, ದೇಶದಲ್ಲಿ ಬಡತನ ಮಾತ್ರ ದಿನೇ ದಿನೇ ಹೆಚ್ಚು ಆಗುತ್ತಿದೆಯೇ ಹೊರತು ಕಡಿಮೆಯಾಗುವ ಸಾಧ್ಯವೇ ಇಲ್ಲ. ನಗರಗಳಲ್ಲಿರತಕ್ಕ ಸಂಸಾರಗಳಲ್ಲಿ ಒಂದೇ ರೂಮಿನಲ್ಲಿ 7–8 ಜನರು ಇರತಕ್ಕದ್ದನ್ನು ನಾವು ನೋಡಿದ್ದೇವೆ ಸರ್ಕಾರದವರು ಈ ಸಮಸ್ಯೆಯನ್ನು ಎಲ್ಲಿಯವರೆಗೆ ಬಗೆಹರಿಸುವುದಿಲ್ಲವೋ ಅಲ್ಲಿಯವರೆಗೆ ಜನಗಳು ಕಷ್ಟಪಟ್ಟು ತೊಂದರೆಗೀಡಾಗುವುದು ತಪ್ಪಿದಲ್ಲ. ಇದು ನಿಜವಾಗಿಯೂ ಶೋಚನೀಯವಾದ ವಿಚಾರ ಜೊತೆಗೆ ನಿರುದ್ಯೋಗ ಸಮಸ್ಯೆಯ ಬಗ್ಗೆ ನಾವು ಎಲ್ಲಿಂದ ಎಲ್ಲಿಗೆ ಹೋಗಲಿ ಕೆಲಸ ಇಲ್ಲ ಕೆಲಸ ಇಲ್ಲ ಎಂದು ಒಂದು ಕಡೆ ವಿದ್ಯಾವಂತರು ಹೇಳಿದರೆ ಇನ್ನೊಂದು ಕಡೆ ಅವಿದ್ಯಾವಂತರು ಸಹ ಮತ್ತು ಗಂಡು ಹೆಣ್ಣು ಮಕ್ಕಳೂ ಸಹ ಕೆಲಸ ಇಲ್ಲ ಎಂದು ಹೇಳುವ ಪರಿಸ್ಥಿತಿಯನ್ನು ನಾವು ಕಂಡಿದ್ದೇವೆ ಇದಕ್ಕೆ ಮುಖ್ಯವಾದ ಕಾರಣವಾದರೂ ಇಷ್ಟೆ ಜನರ ಜೀವನದ ಮಟ್ಟ ದಿನೇ ದಿನೇ ಏರಿ, ಸಾಮಾನಿನ ಬೆಲೆಗಳೂ ಸಹ ಏರುತ್ತಿದ್ದಾಗ ಖಂಡಿತವಾಗಿಯೂ ಎಂಥ ಕಡೆಯಲ್ಲಾದರೂ ಸಂಸಾರಗಳನ್ನು ನಡೆಸುವುದು ಕಷ್ಟ. ಒಂದೊಂದು ಮನೆಯಲ್ಲಿ ಒಬ್ಬರು ದುಡಿಮೆ ಮಾಡಿ ಸಂಸಾರ ನಡೆಸುವುದು ಕಷ್ಟವಾಗಿರುವಾಗ ಈಗಿನ ಪರಿಸ್ಥಿತಿಯಲ್ಲಿ ಎಷ್ಟು ಜನ ದುಡಿದರೂ ಸಂಸಾರ ತೂಗಿಸುವುದು ಕಷ್ಟವಾಗಿದೆ. ಬಡತನ ನಿವಾರಣೆಯ ಸಮಸ್ಯೆ, ನಿರುದ್ಯೋಗದ ಸಮಸ್ಯೆ, ಇವೆರಡನ್ನೂ ಬಗೆಹರಿಸದೆ ಹೋದ ಪಕ್ಷದಲ್ಲಿ ಸರ್ಕಾರದವರು ಎಷ್ಟು ಹಣವನ್ನು ಖರ್ಚು ಮಾಡಿದರೂ ಏನೂ ಪ್ರಯೋಜನ ಇಲ್ಲ. ಸರ್ಕಾರದವರು ಇದರ ಬಗ್ಗೆ ತೀವ್ರ ಗಮನ ಕೊಡಬೇಕು. ಇಲ್ಲದೇ ಹೋದರೆ ಬಹಳ ಜನಗಳ ಶಾಪಕ್ಕೆ ಸರ್ಕಾರ ತುತ್ತಾಗಬಹುದು ಎಂದು ಹೇಳಿದರೆ ಅದು ತಪ್ಪಾಗಲಾರದು. ಎರಡನೆಯದಾಗಿ, ರಾಜ್ಯಪಾಲರ ಭಾಷಣವನ್ನು ನಾವು ವಿಶ್ಲೇಷಣೆ ಮಾಡಿದರೆ ಅದರಲ್ಲಿ ಹೀಗೆ ಹೇಳಿದ್ದಾರೆ ''ನಮ್ಮ ಅರ್ಥ ವ್ಯವಸ್ಥೆಯು ನವ ಚೇತನವನ್ನು ಪಡೆದಿದೆ. 25 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೊಳಿಸುವ ಕಾರ್ಯಕ್ರಮಕ್ಕೆ ನಮ್ಮ ಸರ್ಕಾರವು ಮುಂದೆಯೂ ಬದ್ಧವಾಗಿದೆ' ಎಂದು ಹೇಳಿದ್ದಾರೆ. ಈ 20—25 ಅಂಶಗಳ ಕಾರ್ಯಕ್ರಮದಿಂದ ಎಷ್ಟು ಪ್ರಯೋಜನವಾಗಿದೆ, ಎಷ್ಟು ಹಣ ಇದಕ್ಕೆ ಖರ್ಚಾಗಿದೆ ಎಂದು ನಾನು ಕೇಳತಕ್ಕ ಪ್ರಶ್ನೆ. ಏಕೆಂದರೆ, ಈ 20 ಅಂಶಗಳ ಪೈಕಿ ನಮ್ಮ ಸರ್ಕಾರದವರು ದೊಡ್ಡ ಮನಸ್ಸು ಮಾಡಿ 5 ಅಂಶಗಳನ್ನು ಉಳಿಸಿಕೊಂಡಿದ್ದಾರೆ. ಬೇರೆ ಕಡೆಗಳಲ್ಲಿ ಇದನ್ನೂ ಕಿತ್ತು ಹಾಕಿದ್ದಾರೆ. ಒಟ್ಟಿನಲ್ಲಿ 21 ಅಂಶಗಳ ಕಾರ್ಯಕ್ರಮ ಏನು ಇದೆ ಇದು ಒಂದು ಪ್ರಚಾರದ ವ್ಯವಸ್ಥೆ ಆಯಿತೇ ಹೊರತು ಅದರಿಂದ ಬಡತನವಾಗಲಿ ಸಾಮಾನ್ಯ ಜನಗಳಿಗೆ ಹೆಚ್ಚಿನ ಅನುಕೂಲವಾಗಲೀ ಆಗಿಲ್ಲ, ಎಂದು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟ

ಪಡುತ್ತೇನೆ. ಮೊದಲನೆಯದಾಗಿ ಪ್ರತಿಯೊಬ್ಬರಿಗೂ ಕೂಡ ಭೂಸುಧಾರಣೆಯ ಬಗ್ಗೆ ಒಂದು ದೊಡ್ಡ ಕ್ರಾಂತಿಯನ್ನೇ ಮಾಡಿದ್ದೇವೆ, ಇದರಿಂದ ಸ್ವರ್ಗವನ್ನು ಭೂಲೋಕಕ್ಕೆ ಇಳಿಸಿದ್ದೇವೆ ಎಂದು ಅನೇಕರು ಹೇಳುತ್ತಿದ್ದರು. ಆದರೆ ಇದರಿಂದ ಉಳುಮೆ ಮಾಡತಕ್ಕ ರೈತರಿಗೆ ಒಂದು ಕಡೆ ತಡೆ, ಇನ್ನೊಂದು ಕಡೆ ಉಳುಮೆ ಮಾಡದೆ ಇದ್ದವರಿಗೆ ಮಾಡತಕ್ಕವರಿಂದ ಭೂಮಿಯನ್ನು ಕಿತ್ತು ಕೊಂಡಿದ್ದಾರೆ. ಸಮಾಜ ವಾದದಲ್ಲಿ ನಂಬಿಕೆ ಇದ್ದ ಸರ್ಕಾರದವರು ಜನರಿಂದ ಜಮೀನನ್ನು ಕಿತ್ತುಕೊಂಡು, ಬಡತನದಲ್ಲಿದ್ದ ಸಣ್ಣ ಹಿಡುವಳಿದಾರರಿಗೆ ಮತ್ತು ವ್ಯವಸಾಯವನ್ನೇ ನಂಬಿ ಕೊಂಡವರಿಗೆ ತೊಂದರೆಯಾಗಿ ಅವರು ಇವತ್ತು ನಿರ್ಗತಿಕರಾಗಿ ಬೀದಿ ಪಾಲಾಗಿದ್ದಾರೆ. ಅವರ ಬಗ್ಗೆ ಏನಾದರೂ ಸರ್ಕಾರದವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆಯೇ ಎಂದು ನಾನು ಪ್ರಶ್ನೆ ಮಾಡಬೇಕಾಗುತ್ತದೆ. ಇಲ್ಲಿ ಏನಾಗಿದೆ ಎಂದರೆ, ಉಳುವವನಿಗೆ ಭೂಮಿಯನ್ನು ಕೊಡ ಬೇಕು ಎಂದು ಮಾಡಿದರು, ಈ ತತ್ವವನ್ನು ಯಾರೂ ವಿರೋಧಿಸಿಲ್ಲ. ಆದರೆ ಭೂಮಿಯನ್ನು ನಂಬಿ ಕೊಂಡಿದ್ದವರು. ಭೂಮಿಯನ್ನು ಕಳೆದುಕೊಂಡಿದ್ದರೆ ಅಂಥವರಿಗೆ ಪರಿಹಾರ ಕೊಡತಕ್ಕ ವಿಷಯ ದಲ್ಲಿ ಕಳೆದ ನಾಲ್ಕು ವರ್ಷದಿಂದ ಅವರಿಗೆ ಪರಿಹಾರ ಸಿಕ್ಕದೆ ಅವರೂ ಸಹ ತೊಂದರೆಯಲ್ಲಿದ್ದಾರೆ. ಅನೇಕರು ಬೀದಿಪಾಲಾಗಿ ಕಂಗಾಲಾಗಿದ್ದಾರೆ. ಅದರಲ್ಲಿಯೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂಸುಧಾರಣೆಯನ್ನು ಜಾರಿಗೆ ತಂದು ಜನರಿಗೆ ಬಹಳ ಅನ್ಯಾಯ ಮಾಡಿದಂತಾಗಿದೆ. ಜಮೀನನ್ನೇ ನಂಬಿಕೊಂಡಿದ್ದವರಿಗೆ ಇದರಿಂದ ಬಹಳ ತೊಂದರೆಯಾಗಿ ಅವರ ಜೀವನ ಮಾತ್ರ ಕೆಟ್ಟು ಹೋಗಿದೆ. ಇದನ್ನು ಬೇಗ ಸರ್ಕಾರದವರು ಸರಿಪಡಿಸಬೇಕು ಎಂದು ನಾನು ಒತ್ತಾಯಪೂರ್ವಕ ವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಡವರಿಗೆ ಸಣ್ಣ ಹಿಡುವಳಿದಾರರಿಗೆ ಈಗ ಸಾಲ ಸಿಕ್ಕು ವುದು ಕಷ್ಟವಾಗಿದೆ. ಅವಶ್ಯಕವಾಗಿ ಬೇಕಾದಂಥ ಸಾಲ ಸುಲಭವಾಗಿ ಬ್ಯಾಂಕುಗಳಿಂದ ಅನೇಕ ರಿಗೆ ಸಿಕ್ಕುವುದಿಲ್ಲ. ಆದ್ದರಿಂದ ಪ್ರೊಡಕ್ಟೀವ್ ಮತ್ತು ನಾನ್ ಪ್ರೊಡಕ್ಟೀವ್ ಈ ಎರಡು ಕೆಲಸ ಗಳಿಗೂ ಸಾಲ ಸಿಕ್ಕುತ್ತಿಲ್ಲ. ಇಂಥ ಪರಿಸ್ಥಿತಿ ಇರುವಾಗ ಸರ್ಕಾರದವರು ವ್ಯವಸಾಯಕ್ಕೆ ಅನು ಕೂಲವಾಗುವ ಹಾಗೆ ಕ್ರೆಡಿಟ್ ಫೆಸಿಲಿಟೀಸ್ ಮಾಡಬೇಕು ಎಂದು ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ,

ಮೂರನೆಯದಾಗಿ, ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ, ಕರ್ನಾಟಕದಲ್ಲಿ ಆಹಾರ ಧಾನ್ಯಗಳ ಮತ್ತು ಅಗತ್ಯ ಸರಕುಗಳ ಬೆಲೆಗಳು ಇಳಿಮುಖವಾಗಿದ್ದು, ಖಾದ್ಯ ತೈಲಗಳ ಬೆಲೆ ಮಾತ್ರ ಏರಿದೆ ಎಂದು ತಿಳಿಸಿದ್ದಾರೆ. ಇದು ಸತ್ಯಕ್ಕೆ ದೂರವಾದ ಮಾತು ಎಂದು ಹೇಳುತ್ತೇನೆ. ಏಕೆಂದರೆ, ಈ ವರ್ಷದಲ್ಲಿ ಸಾಮಾನಿನ ಬೆಲೆ ಏರಿರುವಷ್ಟು ಮತ್ಯಾವ ವರ್ಷದಲ್ಲೂ ಏರಿರಲಿಲ್ಲ. ಈ ದಿನ ಬೆಳಿಗ್ಗೆ ನಾನು ಒಂದು ಷಾಪಿಗೆ ಹೋಗಿ, ಕೆಲವು ಆಹಾರ ಧಾನ್ಯಗಳ ಬೆಲೆಯನ್ನು ಗುರುತು ಹಾಕಿಕೊಂಡು ಬಂದಿದ್ದೇನೆ. ಕಳೆದ ವರ್ಷದಲ್ಲಿ ಆಹಾರ ಧಾನ್ಯಗಳಿಗಿದ್ದ ಬೆಲೆಯು ಈ ವರ್ಷದಲ್ಲಿ ಎಷ್ಟು ಏರಿದೆ ಎಂಬುದನ್ನು ಇದರಲ್ಲಿ ನೋಡಬಹುದಾಗಿದೆ.

ಅಕ್ಕಿ (ಕ್ವಿಂಟಾಲ್)	250 ರೂ.	(1976)	380–390 ರೂ.	(1977)
ಉದ್ದಿನಬೇಳೆ ,,	250 ರೂ.	,,	310–360 ರೂ.	,,
ಹೆಸರುಬೇಳೆ ,,	203 ರೂ.	,,	360–390 ರೂ.	,,
ಮೆಣಸಿನಕಾಯಿ (5 ಕೇಜಿ)	60 ರೂ.	,,	75–90 ರೂ.	,,
ಧನಿಯ	1[illegible]0 ರೂ.	,,	240–250 ರೂ.	,,
ಕಡಲೆಕಾಯಿಬೀಜ	30 ರೂ.	,,	48–50 ರೂ.	,,
ಬನ್ಸಿ ರವೆ (ಕ್ವಿಂಟಾಲ್)	230 ರೂ.	,,	310 ರೂ.	,,
ರಾಗಿ (ಕ್ವಿಂಟಾಲ್)	100 ರೂ.	,,	142 ರೂ.	,,
ಬೆಲ್ಲ (ಹತ್ತು ಕೇಜಿ)	18 ರೂ.	,,	20–23 ರೂ.	,,
ಕಡಲೆಕಾಯಿ ಎಣ್ಣೆ (ಒಂದು ಕೇಜಿ)	6 ರೂ.	,,	9–83 (ಪೈಸೆ)	,,

ಇದರಿಂದ ಪ್ರತಿಯೊಂದು ಸಾಮಾನಿನ ಬೆಲೆಯೂ ಹಿಂದಿನ ವರ್ಷಕ್ಕಿಂತ ಈ ವರ್ಷ ಬಹಳ ವಾಗಿ ಏರಿರುವುದನ್ನು ಕಾಣಬಹುದು. ಆದುದರಿಂದ, ಮಾನ್ಯ ರಾಜ್ಯಪಾಲರ ಅಗತ್ಯ ಸರಕು ಗಳ ಬೆಲೆ ಇಳಿಮುಖವಾಗಿದೆ ಎಂಬುದನ್ನು ನಾವು ಖಂಡಿತವಾಗಿ ಒಪ್ಪುವುದಕ್ಕಾಗುವುದಿಲ್ಲ.

ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಇನ್ನೂ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಪ್ರಗತಿದಾಯಕವಾದ ಕಾರ್ಯಗಳಾಗಲೀ, ಅಭಿವೃದ್ಧಿ ಕಾರ್ಯಗಳಾಗಲೀ ನಡೆದಿರುವುದು ಬಹಳ ಕಡಿಮೆ ಎಂದು ಹೇಳುತ್ತೇನೆ. ದುಡ್ಡು ಮಾತ್ರ ಖರ್ಚಾಗಿದೆ. ಆದರೆ, ಜನಸಾಮಾನ್ಯರಿಗೆ ಏನೂ ಪ್ರಯೋಜನವಾಗಿಲ್ಲವೆಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಈ ವರ್ಷ ಶಿಕ್ಷಣ ಇಲಾಖೆ ಔಷಧಿ ಇಲಾಖೆ ಮುಂತಾದ ಇಲಾಖೆಗಳಿಗೆ ಹೆಚ್ಚುವರಿ ಹಣ ಕೊಟ್ಟಿದ್ದರೂ ಕೂಡ ಇದೆಲ್ಲಾ ಸಿಬ್ಬಂದಿ ಖರ್ಚು ಹೆಚ್ಚಾಗಿದೆಯೇ ಹೊರತು, ಆದರಿಂದ ನ್ಯಾಯವಾಗಿ ದೊರೆಯಬೇಕಾದ ಪ್ರತಿಫಲ ಬಹಳ ಕಡಮೆಯಾಗಿದೆ. ಔಷಧಿಗಳು ಸಿಗುವುದು ಬಹಳ ಕಷ್ಟವಾಗಿರುವುದಲ್ಲದೆ, ಇವುಗಳ ಬೆಲೆಯೂ ಜಾಸ್ತಿಯಾಗಿದೆ. ಶಿಕ್ಷಣ ಇಲಾಖೆಗೆ ಕಳೆದ ವರ್ಷ ಸುಮಾರು 112 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಕಳೆದ ಹತ್ತು ವರ್ಷಗಳ ಹಿಂದೆ ಸುಮಾರು 30 ಕೋಟಿ ರೂಪಾಯಿಗಳನ್ನು ಒದಗಿಸಲಾಗಿತ್ತು. ಈ ವರ್ಷ ಸುಮಾರು 135 ಕೋಟಿ ರೂಪಾಯಿಗಳನ್ನು ಒದಗಿಸುವ ನಿರೀಕ್ಷೆಯಿದೆ. ಇಷ್ಟೆಲ್ಲಾ ಖರ್ಚು ಮಾಡಿದರೂ ಕೂಡ, ಕೇವಲ ಹಣ ವ್ಯಯವಾಗುತ್ತಿದೆಯೇ ಹೊರತು, ವಿದ್ಯಾಭ್ಯಾಸದ ಗುಣಮಟ್ಟ ಮಾತ್ರ ದಿನೇದಿನೇ ಕುಸಿದು ಬೀಳುತ್ತಿದೆ. ಶಿಕ್ಷಣ ಇಲಾಖೆಯಲ್ಲಿ ಶಿಸ್ತು ಕಡಮೆಯಾಗುತ್ತಿದೆ. ಶಿಕ್ಷಣ ಇಲಾಖೆಯಲ್ಲಿರುವವರಿಗೆ ಸಂಬಳ ಸಾರಿಗೆಗಳನ್ನು ಕಾಲಕಾಲಕ್ಕೆ ಸರಿಯಾಗಿ ಕೊಡುತ್ತಿದ್ದರೂ ಕೂಡ ಮಕ್ಕಳಿಗೆ ದೊರೆಯಬೇಕಾದ ಸೌಲಭ್ಯಗಳು ಮತ್ತು ಪಾಠಪ್ರವಚನಗಳು ಸರಿಯಾಗಿ ನಡೆಯದೇ ಇರುವುದು ಬಹಳ ಶೋಚನೀಯವಾದ ವಿಚಾರ. ಆದುದರಿಂದ, ಸರ್ಕಾರ ತನ್ನ ಗಮನವನ್ನು ಅತಿ ಮುಖ್ಯವಾಗಿ ಶಿಕ್ಷಣ ಇಲಾಖೆಯ ಕಡೆ ಹರಿಸಬೇಕಾಗಿದೆ. ಇಲ್ಲದಿದ್ದರೆ, ಬಹಳ ತೊಂದರೆಯಾಗುತ್ತದೆಂದು ಹೇಳುತ್ತೇನೆ.

ಈ ಸದನದಲ್ಲಿ ಕೊಳಚೆ ಪ್ರದೇಶ ನಿರ್ಮೂಲನೆ ಬಗ್ಗೆ ಅನೇಕ ಸಂದರ್ಭಗಳಲ್ಲಿ ವಿಚಾರ ನಡೆದಿದೆ. ಇದರ ಹೆಸರಿನಲ್ಲಿ ದುಡ್ಡು ಖರ್ಚಾಗುತ್ತಿದೆಯೇ ಹೊರತು, ಕೊಳಚೆ ಪ್ರದೇಶಗಳು ನಿರ್ಮೂಲವಾಗುತ್ತಿಲ್ಲ. ಇದನ್ನು ನಿರ್ಮೂಲನೆ ಮಾಡಲು ಆಗಿರುವ ಖರ್ಚನ್ನು, ಆಗಿರುವ ಕೆಲಸದೊಂದಿಗೆ ಹೋಲಿಸಿ ನೋಡಿದಾಗ, ಯಾವ ಪ್ರಯೋಜನವೂ ಆಗಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಪ್ರತಿ ವರ್ಷ, ಕೊಳಚೆ ನಿರ್ಮೂಲನೆಕ್ಕಾಗಿ ಒಂದು ಲಕ್ಷ ಅಥವಾ ಎರಡು ಲಕ್ಷ ಇಡುತ್ತಾ ಬಂದರೆ, ಸಮಸ್ಯೆ ಬಗೆಹರಿಯುವುದಿಲ್ಲ. ಕೊಳಚೆ ನಿರ್ಮೂಲನೆ ಮಾಡಬೇಕೆನ್ನುವ ಆಸಕ್ತಿ ಸರ್ಕಾರಕ್ಕಿದ್ದರೆ, ಮೊದಲನೆಯದಾಗಿ, ಹೊಸದಾಗಿ ಉದ್ಭವವಾಗುವ ಕೊಳಚೆ ಪ್ರದೇಶಗಳಿಗೆ ಅವಕಾಶ ಕೊಡಬಾರದು. ಕಳೆದ ಐದು ವರ್ಷಗಳಿಂದೀಚೆಗೆ ಸುಮಾರು ಮೂವತ್ತು ಕೊಳಚೆ ಪ್ರದೇಶಗಳು ಬೆಂಗಳೂರಿನಲ್ಲಿ ಉದ್ಭವವಾಗಿವೆ. ಕೊಳಚೆ ಪ್ರದೇಶಗಳನ್ನು ಬೆಳೆಯುಗೊಡುವುದು ಕ್ಯಾನ್ಸರ್ ಕಾಯಿಲೆಯನ್ನು ಬೆಳೆಯಗೊಳಿಸಿದಂತಾಗುತ್ತದೆ. ಆದುದರಿಂದ, ಒಂದು ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು ಇನ್ನೈದು ವರ್ಷದೊಳಗಾಗಿ ಕೊಳಚೆ ಪ್ರದೇಶಗಳನ್ನು ನಿರ್ಮೂಲನೆ ಮಾಡುವ ಗುರಿ ಇಟ್ಟುಕೊಳ್ಳಬೇಕು. ಹಾಗೆ ನಿರ್ಮೂಲನೆ ಮಾಡಿದ ಮೇಲೆ, ಪುನರ್ವಸತಿ ಸೌಕರ್ಯ ಕಲ್ಪಿಸುವಾಗ ಸ್ವಚ್ಛವಾದ ಮನೆಗಳನ್ನು ಕಟ್ಟಬೇಕೇ ಹೊರತು, ಪುನ: ಗುಡಿಸಲುಗಳನ್ನು ಕಟ್ಟಿಸಿಕೊಟ್ಟರೆ, ಸಮಸ್ಯೆ ಬಗೆಹರಿಯುವುದಿಲ್ಲ.

ರಾಜ್ಯಪಾಲರು ತಮ್ಮ ಭಾಷಣದಲ್ಲಿ ವಿದ್ಯುಚ್ಛಕ್ತಿ ಬಗ್ಗೆ ಮಾತನಾಡಿದ್ದಾರೆ. ದೇಶದ ಕೈಗಾರಿಕಾಭಿವೃದ್ಧಿಗೆ ಉತ್ಪನ್ನದ ಏರಿಕೆಗೆ ಮತ್ತು ನಿರುದ್ಯೋಗ ನಿವಾರಣೆಗೆ ಇದು ಬಹಳ ಅತ್ಯಗತ್ಯವಾದುದು. ಆದುದರಿಂದ, ಕಾಳಿನದಿ ಯೋಜನೆಯನ್ನು ಬೇಗ ಮುಗಿಸುವುದರ ಜೊತೆಗೆ ಥರ್ಮಲ್ ಯೂನಿಟ್‌ನ್ನು ಬೇಗ ಮುಗಿಸಬೇಕು.

ಇಂಥ ಕಷ್ಟಕಾಲದಲ್ಲಿ ವ್ಯವಸಾಯ ಕೆಟ್ಟು ಹೋಗದಿರುವ ಹಾಗೆ ಮಾಡಲು ಥರ್ಮಲ್ ಯೂನಿಟನ್ನು ಆದಷ್ಟು ಜಾಗ್ರತೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಸಾರ್ವಜನಿಕರಿಗೆ ಆಹಾರಧಾನ್ಯದ ಸರಬರಾಜು ಮಾಡುವ ಮತ್ತು ಹಂಚುವ ವಿಚಾರದ ಬಗ್ಗೆ ತಮಗೆ ಹೇಳುವುದಾದರೆ ಇದರಲ್ಲಿ ಮುಖ್ಯವಾಗಿ ಏನಾಗಿದೆಯೆಂದರೆ ಇದರ ಬಗ್ಗೆ ಸಾಕಾದಷ್ಟು ಅಂಕಿಅಂಶಗಳನ್ನು ಕೊಟ್ಟಿಲ್ಲವೆಂದು ತಿಳಿದುಕೊಂಡಿದ್ದೇನೆ. ಏತಕ್ಕೆಂದರೆ ಈ ಡಿಪಾರ್ಟ್‌ಮೆಂಟಿನಲ್ಲಿ ಫುಡ್‌ಗ್ರೇನ್ಸ್‌ನಿಂದ ಆಗುತ್ತಿರತಕ್ಕಂಥ ವೇಸ್ಟ್ ಮತ್ತೆ ಯಾವುದನ್ನೂ ಆಗುತ್ತಿಲ್ಲ ವಿಪರೀತವಾಗಿ ವೇಸ್ಟ್ ಆಗುತ್ತಿರುವಂತಹದ್ದು ಶೇಖರಣೆ ಮಾಡಿರತಕ್ಕಂಥ ಕ್ರಮದಿಂದ ಹಾಗೂ ಸರಿಯಾಗಿ ಕೊಳ್ಳುವಂತ

ಕ್ರಮ ಇಲ್ಲದೇ ಇರುವುದರಿಂದ ವೇಸ್ಟ್ ಆಗುತ್ತಿದೆ ಇದರಿಂದ ಅಗತಕ್ಕಂಥ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ನಾಗರೀಕರ ಮೇಲೆ ಹೇರುತ್ತಿದ್ದೀರಿ. ಆದುದರಿಂದ ಸರ್ಕಾರದವರು ಇದರ ಬಗ್ಗೆ ತೀವ್ರ ಗಮನವನ್ನು ಕೊಡದೇ ಹೋದರೆ ಜನ ಅನಾವಶ್ಯಕವಾಗಿ ಹೆಚ್ಚಿನ ವ್ಯಯವನ್ನು ಆಹಾರ ಸಾಮಗ್ರಿಗಳ ಮೇಲೆ ಖರ್ಚು ಮಾಡಬೇಕಾಗುತ್ತದೆ. ಅತಿಮುಖ್ಯವಾಗಿ ಗೋಡೌನ್‌ಗಳಲ್ಲಿ ಮತ್ತು ಸಾಮಾನುಗಳನ್ನು ಕೊಳ್ಳುವಾಗ ಆಗುತ್ತಿರತಕ್ಕಂಥ ಅಪವ್ಯಯವನ್ನು ತಪ್ಪಿಸದೇಹೋದಲ್ಲಿ ಜನಗಳು ಅದರಿಂದ ಬಹಳ ಕಷ್ಟಪಡಬೇಕಾಗುತ್ತದೆ. ಮತ್ತೆ ಫೇರ್ ಪ್ರೈಜ್ ಷಾಪ್ಸ್ ಕೊಡುವ ಆಹಾರಪದಾರ್ಥಗಳ ಗುಣ ಮಟ್ಟ ಕಡಿಮೆಯಾಗಿರುವುದರಿಂದ ಹೆಚ್ಚು ಕಡಿಮೆ ಅನೇಕ ಜನ ಫೇರ್ ಪ್ರೈಜ್ ಷಾಪ್ಸ್‌ಗಳಲ್ಲಿ ಆಹಾರ ಪದಾರ್ಥಗಳನ್ನು ತೆಗೆದುಕೊಳ್ಳುವುದಕ್ಕೆ ಬದಲು 10–20 ಪೈಸೆ ಜಾಸ್ತಿ ಹೋದರು ಹೊರಗಡೆ ಕೊಂಡು ಕೊಳ್ಳಬೇಕಾಂಥ ಪರಿಸ್ಥಿತಿ ಬಂದಿದೆ. ಸಾಮಾನುಗಳನ್ನು ಕೊಡುವಾಗ ಅಗತಕ್ಕಂಥ ವೇಸ್ಟನ್ನು ಕೂಡ ತಪ್ಪಿಸುವುದಕ್ಕೆ ಕ್ರಮ ಕೈಕೊಳ್ಳಬೇಕು ಇಲ್ಲದೇ ಹೋದರೆ ಬಹಳ ತೊಂದರೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ಬೆಂಗಳೂರು ವಾಟರ್‌ಸಪ್ಲೈ ಬಗ್ಗೆ ಹೇಳುವುದಾದರೆ ಫಸ್ಟ್ ಸ್ಟೇಜ್ ಕಾವೇರಿಯಿಂದ ನೀರು ಬಂದಿದೆ ಮತ್ತೆ ತಿಪ್ಪಗೊಂಡನಹಳ್ಳಿಯಿಂದ 4ನೇ ಸ್ಟೇಜ್ ಕೂಡ ಆಗಿದೆ. ಆದುದರಿಂದ ಸೆಕೆಂಡ್‌ಸ್ಟೇಜ್ ಕಾವೇರಿಯಿಂದ ನೀರನ್ನು ತರಿಸುವ ಬಗ್ಗೆ ಸ್ವಲ್ಪ ವ್ಯವಸ್ಥೆ ಮಾಡಬೇಕು. ಹಾಗೆ ಮಾಡದೆ ಹೋದರೆ ಮುಂದೆ ಬಹಳ ತೊಂದರೆಯಾಗುತ್ತದೆ. ನೀವು ಈ ರೀತಿ ಬಡಾವಣೆಗಳನ್ನು ಮುಂದುವರಿಸಿ ಕೊಳ್ಳುತ್ತಾ ಹೋಗುತ್ತಿದ್ದರೆ ಮತ್ತು ಸೈಟ್‌ಗಳನ್ನು ಹಂಚುತ್ತಾ ಹೋಗುತ್ತಿದ್ದರೆ ನೀರಿಗೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ತಾವು ನೀರಿಗೆ ಸರಿಯಾದ ವ್ಯವಸ್ಥೆಯನ್ನು ಮಾಡದೇ ಹೋದ ಪಕ್ಷದಲ್ಲಿ ಬಹಳ ಕಷ್ಟಪಡಬೇಕಾಗುತ್ತದೆ. ಒಟ್ಟಿನಲ್ಲಿ ನಿಜವಾಗಿಯೂ ಜನಸಾಮಾನ್ಯರ ಮೇಲೆ ಒಂದು ವಿಧವಾದ ಕನಿಕರ ಸರ್ಕಾರಕ್ಕೆ ಇದ್ದ ಪಕ್ಷದಲ್ಲಿ ಮುಖ್ಯವಾಗಿ ಬೆಲೆಗಳು ಸಾಮಾನುಗಳ ಬೆಲೆಗಳು ಗಗನಕ್ಕೆ ಏರುತ್ತಿರುವುದನ್ನು ತಡೆಗಟ್ಟಬೇಕು ಸಾಮಾನುಗಳ ಬೆಲೆಗಳ ಏರುವಿಕೆಯಲ್ಲಿ ಕೇಂದ್ರ ಸರ್ಕಾರದ ನೀತಿಯ ಜೊತೆಗೆ ರಾಜ್ಯಸರ್ಕಾರದವರ ನೀತಿ ಇದರಲ್ಲಿ ಸೇರಿ ಬೆಲೆಗಳು ಇನ್ನೂ ಹೆಚ್ಚಾಗುತ್ತಿವೆ ಇವತ್ತು ನಾಗರೀಕರು ಅನೇಕ ವಿಧವಾದಂಥ ತೆರಿಗೆಗಳನ್ನು ಕೂಡ ಸರ್ಕಾರಕ್ಕೆ ಕೊಡುತ್ತಿದ್ದಾರೆ ಆದರಲ್ಲಿ ಸೇಲ್ಸ್ ಟ್ಯಾಕ್ಸ್ ಇನ್‌ಕಂ ಟ್ಯಾಕ್ಸ್ ಪ್ರೊಫೆಷನಲ್ ಟ್ಯಾಕ್ಸ್ ಇನ್ನು ಅನೇಕ ವಿಧವಾದ ತೆರಿಗೆಗಳನ್ನು ವಿಧಿಸುತ್ತಿರುವುದರಿಂದ ಸಾಮಾನುಗಳ ಬೆಲೆ ಏರುತ್ತಿದೆ ಇದು ಸರ್ಕಾರದ ನೀತಿಯಿಂದ ಆಗುತ್ತಿದೆಂದು ಹೇಳಿದರೆ ಅದು ತಪ್ಪಾಗಲಾರದು. ಸಾಮಾನುಗಳ ಬೆಲೆಗಳನ್ನು ಇಳಿಸಬೇಕಾದರೆ ಉತ್ಪನ್ನಗಳ ಕಡೆಗೆ ಹೆಚ್ಚಿನ ಗಮನವನ್ನು ಕೊಡುವುದರ ಜೊತೆಗೆ ಹೆಚ್ಚಿನ ತೆರಿಗೆಗಳನ್ನು ವರ್ಷೇ ವರ್ಷೇ ಹಾಕತಕ್ಕಂಥ ಪದ್ಧತಿಯನ್ನು ಕಡಿಮೆ ಮಾಡಿ ಸಾಮಾನುಗಳ ಬೆಲೆಯನ್ನು ಇಳಿಸದಿದ್ದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಇದರ ಕಡೆಗೆ ಸರ್ಕಾರದವರು ಆದ್ಯ ಗಮನವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಎರಡನೆಯದಾಗಿ ನಾನು ಈಗಾಗಲೇ ಹೇಳಿರುವ ಹಾಗೆ ಬಡತನ ನಿವಾರಣೆಯಾಗಬೇಕಾದರೆ ಸಾಮಾನುಗಳ ಬೆಲೆಗಳನ್ನು ಇಳಿಸುವದರ ಜೊತೆಗೆ ಉದ್ಯೋಗ ಸಮಸ್ಯೆಯನ್ನು ಕೂಡ ಬಗೆಹರಿಸಬೇಕು. ಇನ್ನು ಸೈಟ್‌ಗಳನ್ನು ಹಂಚುವ ಬಗ್ಗೆ ಕೂಡ ಆದಷ್ಟು ತೀವ್ರವಾಗಿ ಕ್ರಮಗಳನ್ನು ಕೈಗೊಂಡು ನಿಮ್ಮ ಉದ್ದೇಶ ಎಷ್ಟರಮಟ್ಟಿಗೆ ಆಗಿದೆ ಎಂಬುದನ್ನು ಸಹ ನೋಡಿ ಮಾಡಬೇಕೆಂದು ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಭೈರಪ್ಪಾಜಿ (ತುರುವೇಕೆರೆ)—ಸನ್ಮಾನ್ಯ ಅಧ್ಯಕ್ಷರೇ ಮಾನ್ಯ ರಾಜ್ಯಪಾಲರು ಎರಡೂ ಸದನಗಳನ್ನು ಉದ್ದೇಶಿಸಿ ಮಾಡಿದಂಥ ಭಾಷಣವನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ನಾಲ್ಕು ಮಾತುಗಳನ್ನು ಈ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರೇ ಶ್ರೀಮಾನ್ ದೇವರಾಜ್ ಅರಸ್‌ರವರ ಮುಖಂಡತ್ವದಲ್ಲಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಸಾಧಿಸಿರತಕ್ಕಂಥ ಕಾರ್ಯಗಳನ್ನು ಮತ್ತು ಮುಂದೆ ಸಾಧಿಸಲಿರುವ ಕಾರ್ಯಗಳನ್ನು ಕುರಿತು ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಬಸವಲಿಂಗಪ್ಪನವರು ಬಹಳ ಸವಿಸ್ತಾರವಾಗಿ ಸರ್ಕಾರದ ಸಾಧನೆಗಳನ್ನು ಕುರಿತು ಹೇಳಿದ್ದಾರೆ ನಾನಾದರೂ ಕೂಡ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಆರ್ಥಿಕ ಸಾಮಾಜಿಕ ಸ್ಥಿತಿಗಳನ್ನು ಸಾಧಿಸಿರತಕ್ಕಂಥ ಅನೇಕ ಕಾರ್ಯಗಳು ನಮ್ಮ ರಾಜ್ಯದಲ್ಲಿ ಕಳೆದ ಒಂದು ವರ್ಷದಿಂದ ಈಚೆಗೆ ನಡೆದಿದೆ ಎನ್ನುವುದನ್ನು ನಾವು ಮನಗೊಂಡಿದ್ದೇವೆ, ಅನೇಕ ವರ್ಷಗಳಿಂದ ಕಾಣುತ್ತಿದ್ದ ಕನಸು ನನಸಾಗುವಂತೆ ಮಾನ್ಯ

ಮುಖ್ಯಮಂತ್ರಿಯವರು ಮಾಡಿದ್ದಾರೆ. ಈ ರಾಜ್ಯದಲ್ಲಿ ಜಮೀನು ಉಳುವವನಿಗೆ ಜಮೀನು ಕೊಡತಕ್ಕಂಥ ಕಾರ್ಯ ಮಾಡಿ ಎಂದು ನಾವು ಮೊದಲಿನಿಂದಲೇ ಹೇಳುತ್ತಿದ್ದೇವೆ. ಸುಮಾರು 40 ಲಕ್ಷ ಎಕರೆ ಜಮೀನನ್ನು ಯಾರು ಜಮೀನನ್ನು ಉಳುತ್ತಿದ್ದನೋ ಅವನಿಗೆ ಕೊಡಬೇಕು ಎನ್ನುವ ಬಗ್ಗೆ ಒಂದು ಕಾನೂನನ್ನು ತಂದು ಇವತ್ತು ಲಕ್ಷಾಂತರ ಜನರಿಗೆ ಕೊಟ್ಟಿದ್ದೇವೆ. ಇದು ಪ್ರಗತಿಯ ಮುನ್ನಡೆ ಅಲ್ಲವೇ ಇದು ಪ್ರಗತಿಯ ಸಾಧನೆ ಅಲ್ಲವೆ ಎಂದು ನಾನಾದರೂ ಕೇಳುತ್ತೇನೆ. ಹಿಂದಿದ್ದ ಸರ್ಕಾರಗಳು ಈ ಕೆಲಸವನ್ನು ಏತಕ್ಕೆ ಮಾಡಿರಲಿಲ್ಲ ? ಹಿಂದೆ ದಿವಾನ್ ಜತ್ತಿಯವರು ಇದ್ದಂಥ ಕಾಲದಲ್ಲಿ ಸಮಿತಿಯನ್ನು ರಚನೆ ಮಾಡಿದ್ದರು ಅದರ ವರದಿ ಹೊರಗಡೆಗೇ ಬರಲಿಲ್ಲ ಅದು ವಿಧಾನ ಸೌಧದಲ್ಲಿಯೇ ಏತಕ್ಕೆ ಉಳಿಯಿತು ? ಅದನ್ನು ಏತಕ್ಕೆ ಕಾರ್ಯರೂಪಕ್ಕೆ ತರಲಿಲ್ಲ ಎಂದು ನಾನಾದರೂ ಮಾನ್ಯ ಸ್ನೇಹಿತರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ಮಾಡಿದಂಥ ಮಹತ್ಕಾರ್ಯವನ್ನು ಮಹತ್ತ ಸಾಧನೆಯನ್ನು ಜನ ನೋಡಿ ಮೆಚ್ಚಿ ಅದಕ್ಕೆ ಉತ್ತರವಾಗಿ ಕಳೆದ ಚುನಾವಣೆಯಲ್ಲಿ ಜನತೆ ಕೊಟ್ಟಂಥ ಬೆಂಬಲವನ್ನು ನಾನಾದರೂ ಕೂಡ ಈ ಸಂದರ್ಭದಲ್ಲಿ ಸ್ಮರಿಸುವುದಕ್ಕೆ ಪ್ರಯತ್ನ ಪಡುತ್ತೇನೆ ಇವತ್ತು ದಕ್ಷಿಣ ಕನ್ನಡ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಶಿವಮೊಗ್ಗ ಜಿಲ್ಲೆಗಳಲ್ಲಿ ಲಕ್ಷಾಂತರ ಜನ ಬೆವರು ಸುರಿಸಿ ದುಡಿಮೆ ಮಾಡುತ್ತಿದ್ದರು ಅಂಥವರು ಅವರೇ ಜಮೀನನ್ನು ಪಡೆದಿದ್ದಾಗ ಅವರೇ ಮಾಲೀಕರು ಎಂದು ಹೇಳಿದಾಗ ಅವರಿಗಾದ ಸಂತೋಷವೆಷ್ಟು ಎನ್ನುವುದನ್ನು ಕೂಡ ನಾನು ನೋಡಿದ್ದೇನೆ. ಲ್ಯಾಂಡ್ ಟ್ರಿಬ್ಯೂನಲ್‌ಗಳಲ್ಲಿ ಉಳುವವನಿಗೆ ಭೂಮಿ ಎಂದು ನಾವು ಅವನಿಗೆ ಅವನ ಜಮೀನನ್ನು ಕೊಟ್ಟಿದ್ದೇವೆಂದು ತಿಳಿಸಿದಾಗ ಅವನಿಗೆ ಆದ ಸಂತೋಷ ಅಷ್ಟಿಷ್ಟು ಅಲ್ಲ. ಆದುದರಿಂದ ಬಂಧುಗಳೇ ಯಾವ ಸರ್ಕಾರ ಹೆಚ್ಚುವರಿ ಭೂಮಿಯನ್ನು ಪಡೆಯುವುದಕ್ಕೆ ಪ್ರಯತ್ನ ಪಟ್ಟಿತ್ತು ಅವರು ಪ್ರಯತ್ನ ಪಡಲಿಲ್ಲ ಅದಕ್ಕೆ ಹೆದರಿಕೊಂಡರು. ಆ ರೀತಿ ಕಾನೂನನ್ನು ತಂದರೆ ದೊಡ್ಡ ದೊಡ್ಡ ಜಮೀನುದಾರರಿಗೆ ತೊಂದರೆಯಾಗುತ್ತದೆ ಎಂಬುದನ್ನು ಅರಿತುಕೊಂಡು ದೊಡ್ಡ ದೊಡ್ಡ ಜಮೀನ್ದಾರರು ಆಗ ಹಿಂದಿದ್ದ ಸರ್ಕಾರಗಳ ಮೇಲೆ ಅಸ್ತ್ರವನ್ನು ಪ್ರಯೋಗ ಮಾಡಿ ಆ ಕಾನೂನನ್ನು ಜಾರಿಗೆ ತರದೇ ಇರುವ ಹಾಗೆ ಮಾಡಿದ್ದರೆ ಅದರೆ ನಮ್ಮ ಸರ್ಕಾರದವರು ಹೆಚ್ಚುವರಿ ಭೂಮಿಯಿರತಕ್ಕಂಥವರಿಂದ ಹೆಚ್ಚಿನ ಭೂಮಿಯನ್ನು ಪಡೆದು ಭೂಮಿ ಇಲ್ಲದೇ ಇರತಕ್ಕಂಥವರಿಗೆ ಕೊಡತಕ್ಕಂಥ ಕಾರ್ಯವನ್ನು ಮಾಡಿದ್ದಾರೆ. ಇದರಿಂದ ಸುಮಾರು ಸಾವಿರಾರು ಎಕರೆ ಲಕ್ಷಾಂತರ ಎಕರೆ ಹೆಚ್ಚುವರಿ ಭೂಮಿಯನ್ನು ನಾವು ವಾಪಸ್ಸು ಪಡೆದು ಬಡವರಿಗೆ ಭೂ ಹೀನರಿಗೆ ಹಂಚತಕ್ಕ ಕೆಲಸವನ್ನು ಮಾಡಿದ್ದೇವೆ ಅದೇ ಹಿಂದೆ ಇದ್ದ ಸರ್ಕಾರ ಏತಕ್ಕೆ ಮಾಡಲಿಲ್ಲ ಎನ್ನುವುದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತು ಲ್ಯಾಂಡ್ ಟ್ರಿಬ್ಯೂನಲ್ಸ್‌ಗಳನ್ನು ಮಾಡಿ ಬೆವರು ಸುರಿಸಿ ದುಡಿಯತಕ್ಕಂಥ ಜನಕ್ಕೆ ಭೂಮಿಯನ್ನು ಕೊಡತಕ್ಕಂಥ ಕಾರ್ಯ ಮಹತ್ಸಾಧನೆಯಲ್ಲವೇ? ಇಂಥ ಹಲವಾರು ಉತ್ತಮವಾದ ಕಾರ್ಯಗಳನ್ನು ಬಡವರಿಗಾಗಿ ಮಾಡಿರುವುದು ಒಂದು ಮಹತ್ ಸಾಧನೆಯಲ್ಲವೇ ಎಂದು ತಮ್ಮ ಮುಖಾಂತರ ವಿರೋಧ ಪಕ್ಷದ ಸ್ನೇಹಿತರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

1-00 P.M.

ಸ್ನೇಹಿತರೇ ನಮ್ಮ ಸರ್ಕಾರದವರು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಭೂಮಿ ಇಲ್ಲದೆ ಇರುವವರು, ಮನೆ ಇಲ್ಲದೆ ಇರುವವರು ನಿರ್ಗತಿಕರು ಹಾಗೂ ಬಿಕಾರಿಗಳಾಗಿ ಸಾಯಬಾರದು ಎನ್ನುವ ಒಂದು ಧ್ಯೇಯವನ್ನು ಇಟ್ಟುಕೊಂಡು ಇವೊತ್ತು ಸರ್ಕಾರದವರು ಮುಫತ್ತಾಗಿ ಅವರಿಗೆ ಸೈಟುಗಳನ್ನು ಹಂಚಿದ್ದಾರೆ ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಹಿಂದಿನ ಸರ್ಕಾರದವರು ಏತಕ್ಕೆ ಪ್ರಯತ್ನ ಮಾಡಲಿಲ್ಲ ? ನಮ್ಮ ಸರ್ಕಾರದವರು ಅದನ್ನು ಮಾಡಿ ತೋರಿಸಿದ್ದಾಯಿತು ಒಳ್ಳೆಯ ಕೆಲಸವನ್ನು ಮಾಡಿದ್ದೇವೆ. ಈ ರೀತಿ ನಮ್ಮ ಸರ್ಕಾರದವರು ಒಳ್ಳೆಯ ಕೆಲಸ ಮಾಡಿದ್ದನ್ನು ನೋಡಿ ಸಂತೋಷ ಪಡುವಂತಹ ಒಂದು ಮನೋಭಾವನೆ ನಮ್ಮ ಎದುರು ಪಕ್ಷದ ಸ್ನೇಹಿತರಿಗೆ ಇರಬೇಕು. ಇವೊತ್ತು 7 ಲಕ್ಷ ನಿರ್ಗತಿಕರಿಗೆ ಮುಫತ್ತಾಗಿ ಸೈಟುಗಳನ್ನು ಕೊಟ್ಟು ಒಂದು ಲಕ್ಷ ಚಿಲ್ಲರೆ ಮನೆಗಳನ್ನು ಕಟ್ಟಿಸಿಕೊಡುವುದಕ್ಕೆ ಮಂಜೂರಾತಿಯನ್ನು ಮಾಡಿದೆ' ಈಗಾಗಲೇ ಸರ್ಕಾರದವರು ಮುಫತ್ತಾಗಿ ಮನೆಗಳನ್ನು ಕಟ್ಟಿಸಿ ಕೊಟ್ಟಿರುವ ಕೆಲವು ಹಳ್ಳಿಗಳಿಗೆ ಹೋಗಿ ನೋಡಿದಾಗ ಮನೆಗಳು ಇಲ್ಲದೆ ಇದ್ದವರಿಗೆ ಮುಫತ್ತಾಗಿ ಮನೆಗಳು ಸಿಕ್ಕಿ ಅವರು ಅವುಗಳಲ್ಲಿ ವಾಸ ಮಾಡುತ್ತಾ ಇರುವಾಗ ಅವರ ಆನಂದ

ಅಸ್ತಿಷ್ಟಲ್ಲ. ಕೂಲಿಯಿಂದ ಜೀವನ ಮಾಡುತ್ತಿದ್ದವರಿಗೆ ಮುಫತ್ತಾಗಿ ಮನೆಗಳು ಸಿಕ್ಕಿ ಅವರು ಸುಖವಾಗಿ ಜೀವನ ಮಾಡುತ್ತಿದ್ದಾರೆ, ಅವರು ಮನೆಗಳನ್ನು ಕಾಣುವುದು ಕನಸಿನ ಗಂಟಾಗಿತ್ತು. ಇವತ್ತು ಅವರ ಕನಸು ನನಸಾಗವಂತಹುದು ಕಾರ್ಯತಃ ನಡೆದಿದೆ. ಏನೂ ಇಲ್ಲದ ನಿರ್ಗತಿಕರಿಗೆ, ತಂದೆ ತಾಯಿ ಅಣ್ಣ ತಮ್ಮ ತಂಗಿ ಯಾರೂ ಇಲ್ಲದ ನಿರ್ಗತಿಕರಾಗಿದ್ದವರಿಗೆ ಸುಮಾರು ಒಂದೂವರೆ ಲಕ್ಷ ಜನಗಳಿಗೆ ಮಾಸಾಶನವನ್ನು ಕೊಟ್ಟಿದ್ದಾರೆ ಇಂಥಾ ಒಂದು ಮಹತ್‌ಕಾರ್ಯವನ್ನು ನಮ್ಮ ಸರ್ಕಾರ ಮಾಡಿದ್ದಾರೆಂದು ನಮ್ಮ ರಾಜ್ಯಪಾಲರು ಅವರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಮತ್ತು ನಮ್ಮ ಸರ್ಕಾರದವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿದ್ದಾರೆ ಎಂದು ನಮ್ಮ ರಾಜ್ಯಪಾಲರು ಹೇಳಿದ್ದಾರೆ. ಅದು ಏನೆಂದರೆ ಅಂಗವಿಹೀನರನ್ನೂ ಸಹ ವಯೋವೃದ್ಧರಂತೆ ಪರಿಗಣಿಸಿ ಅವರಿಗೂ ಕೂಡ ಮಾಸಾಶನವನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗಾಗಲೇ ಸರ್ಕಾರ ಇದನ್ನು ಘೋಷಣೆ ಮಾಡಿದೆ. ಈ ರೀತಿಯಾಗಿ ನಿರ್ಗತಿಕರಿಗೆ, ಏನೂ ಇಲ್ಲದೇ ಇರತಕ್ಕವರು ಬಿಕಾರಿಗಳಾಗಿ ಸಾಯುತಕ್ಕವರಿಗೆ ಒಂದು ವ್ಯವಸ್ಥೆಯನ್ನು ಮಾಡಿರತಕ್ಕ ಸರ್ಕಾರಕ್ಕೆ ನಮ್ಮ ಎದುರು ಪಕ್ಷದ ಸ್ನೇಹಿತರು ತಮ್ಮ ಮೆಚ್ಚಿಗೆಯನ್ನು ಸೂಚಿಸತಕ್ಕದ್ದು ತಮ್ಮ ಕರ್ತವ್ಯವೆಂದು ನಾನು ಹೇಳುತ್ತೇನೆ.

ನಮ್ಮ ಸರ್ಕಾರದವರು ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಮಾನ್ಯ ಸದಸ್ಯರಾದ ಶ್ರೀ ಶಾಮಣ್ಣನವರು ಮಾತನಾಡುತ್ತಾ ಸರ್ಕಾರಿ ನೌಕರರ ಸಂಬಳ ಸಾರಿಗೆಯ ಬಗ್ಗೆ ಪ್ರಸ್ತಾಪ ಮಾಡಿದರು. ಇಡೀರಾಷ್ಟ್ರದಲ್ಲೇ ಒಂದು ಅತ್ಯುತ್ತಮವಾದಂತಹ ವೇತನ ಶ್ರೇಣಿಯನ್ನು ನಮ್ಮ ರಾಜ್ಯದ ಹಣಕಾಸಿನ ಸಚಿವರಾದ ಶ್ರೀಮಾನ್ ಘೋರ್ಪಡೆಯವರು ನಮ್ಮ ಸರ್ಕಾರಿ ನೌಕರರಿಗೆ ಕೊಟ್ಟಿದ್ದಾರೆ. ನಮ್ಮ ಘೋರ್ಪಡೆಯವರು ನಮ್ಮ ಸರ್ಕಾರಿ ನೌಕರರ ಮೇಲೆ ಹೆಚ್ಚಿನ ವಿಶ್ವಾಸ ಇಟ್ಟು ಹೆಚ್ಚು ಹಣವನ್ನು ನಮ್ಮ ಸರ್ಕಾರಿ ನೌಕರರಿಗೆ ಕಳೆದ ಐದು ವರ್ಷಗಳಲ್ಲಿ ಕೊಟ್ಟಿದ್ದಾರೆ. ನಾವು ಯಾರೂ ಕೂಡ ಸರ್ಕಾರಿ ನೌಕರರನ್ನು ಉಪಯೋಗಿಸಿಕೊಂಡಿಲ್ಲ. ಅವರು ಅವರ ಕರ್ತವ್ಯವನ್ನು ಮಾಡಿಕೊಂಡು ಹೋದರೆ ಸಾಕು. ರಾಜ್ಯ ಮತ್ತು ರಾಷ್ಟ್ರದ ಪ್ರಜೆಗಳು ನೆಮ್ಮದಿಯಾಗಿರಬೇಕು. ಈ ದೃಷ್ಟಿಯಿಂದ ಅವರು ಒಳ್ಳೆಯ ಕಾರ್ಯವನ್ನು ಮಾಡುತ್ತಾರೆ. ಈ ಒಂದು ಭಾವನೆಯಿಂದ ಅವರಿಗೆ ಒಂದೇ ಗಂಟಿನಲ್ಲಿ 30 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಒಟ್ಟು 5 ವರ್ಷಗಳಲ್ಲಿ ಅವರಿಗೆ 50 ಕೋಟಿ ರೂಪಾಯಿಗಳನ್ನು ಕೊಟ್ಟಿದೆ. ಸರ್ಕಾರಿ ನೌಕರರು ಸಮೃದ್ಧಿಯಾದ ಜೀವನವನ್ನು ಮಾಡುವುದಕ್ಕೆ ಅನುಕೂಲವನ್ನು ಮಾಡಿಕೊಟ್ಟಿದೆ. ಇದಕ್ಕಿಂತ ಹೆಚ್ಚಿನ ಕಾರ್ಯವನ್ನು ಇನ್ನೇನು ಮಾಡಬೇಕಾಗಿದೆ ? ಆದ್ದರಿಂದ ಸರ್ಕಾರಿ ನ ಕರರಿಗೂ ಕೂಡ ನಮ್ಮ ಸರ್ಕಾರ ಸಹಾನುಭೂತಿಯಿಂದ ವರ್ತಿಸಿ ಎಲ್ಲಾ ಸೌಕರ್ಯಗಳನ್ನೂ ಅವರಿಗೆ ಒದಗಿಸಿಕೊಟ್ಟಿದೆ.

ಜನಾರೋಗ್ಯದ ಬಗ್ಗೆ ಹೇಳುವುದಾದರೆ $7\frac{1}{2}$ ಸಾವಿರ ಜನಸಂಖ್ಯೆಗೆ ಒಂದು ಆಸ್ಪತ್ರೆಯನ್ನು ಒದಗಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಿದೆ. ಹಿಂದೆ ಇಂಥಾ ಒಂದು ವ್ಯವಸ್ಥೆ ಇರಲಿಲ್ಲ. ಈ ಬಗ್ಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟು ಇದಕ್ಕಾಗಿ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕಂಥಾ ಒಂದು ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡಿದೆ. ಹಿಂದೆ ಇಂಥಾ ಒಂದು ಕಾರ್ಯವನ್ನು ಮಾಡಿರಲಿಲ್ಲ. ಈ ರೀತಿ ಮಾಡುವುದಕ್ಕೂ ಅವರ ಕೈಯಲ್ಲಿ ಆಗಿರಲಿಲ್ಲ ಅನೇಕ ಕ್ಷೇತ್ರಗಳಲ್ಲಿ ಆಸ್ಪತ್ರೆಗಳನ್ನು ಮಾಡಲು ಮಂಜೂರಾತಿಯನ್ನು ಕೊಟ್ಟು ಆಸ್ಪತ್ರೆಗಳು ನಡೆಯುತ್ತಿವೆ. ಆ ಆಸ್ಪತ್ರೆಗಳಿಗೆ ಹೆಚ್ಚು ವೈದ್ಯರನ್ನು ಕೊಡುವ ವ್ಯವಸ್ಥೆಯನ್ನು ಮಾಡಿ ವ್ಯವಸ್ಥಿತ ರೀತಿಯಲ್ಲಿ ಆಸ್ಪತ್ರೆಗಳು ನಡೆಯುತಕ್ಕಂಥಾ ಕಾರ್ಯವನ್ನು ಮಾಡುತ್ತಿದ್ದಾರೆ.

ವಿದ್ಯಾಭ್ಯಾಸದ ಬಗ್ಗೆ ಹೇಳಬೇಕಾದರೆ ಬಹುಶಃ ನಮ್ಮ ಸರ್ಕಾರ ವಿದ್ಯಾಭ್ಯಾಸಕ್ಕಾಗಿ ಬೇರೆ ಯಾರೂ ಮಾಡಿಲ್ಲ ನಮ್ಮ ಸರ್ಕಾರ ವಿದ್ಯಾಭ್ಯಾಸಕ್ಕಾಗಿ ಬಹಳ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದಾರೆ. ಮುಂದೆಯೂ ಕೂಡ ಇದೇರೀತಿ ಖರ್ಚು ಮಾಡುತ್ತಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪ ಮಾಡಿದ್ದಾರೆ ನಮ್ಮ ರಾಜ್ಯದಲ್ಲಿ ಒಂದೇ ಸಾರಿ 200 ಕಾಲೇಜುಗಳನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡಿದ್ದೇವೆ ಎಂದು, ಇವೊತ್ತು ಶಾಲೆಗಳು ಇಲ್ಲದೇ ಇರುವಂತಹ ಹಳ್ಳಿಗಳೇ ನಮ್ಮ ರಾಜ್ಯದಲ್ಲಿ ಇಲ್ಲ. ಶಾಲಾಕಟ್ಟಡಗಳು ಇಲ್ಲದ ಹಳ್ಳಿಗಳೇ ಇಲ್ಲ. ಎಲ್ಲೆಲ್ಲಿ ಹೈಸ್ಕೂಲುಗಳನ್ನು ಕೊಡಬಹುದೋ ಅಂಥಾ ಕಡೆಗಳಿಗೆಲ್ಲಾ

ಹೈಸ್ಕೂಲುಗಳನ್ನು ಕೊಟ್ಟಿದ್ದಾರೆ. ಅನೇಕ ಕಡೆ ಜೂನಿಯರ್ ಕಾಲೇಜುಗಳನ್ನೂ ಮತ್ತು ಫಸ್ಟ್ ಗ್ರೇಡ್ ಕಾಲೇಜುಗಳನ್ನೂ ಕೊಟ್ಟಿದ್ದಾರೆ ಸುಮಾರು 112 ಕೋಟಿ ರೂಪಾಯಿಗಳನ್ನು ಸರ್ಕಾರದವರು ಈ ಬಾಬಿಗಾಗಿ ಖರ್ಚು ಮಾಡತಕ್ಕಂಥಾ ಒಂದು ವ್ಯವಸ್ಥೆಯನ್ನು ಮಾಡಿದೆ. ಜನಸಂಖ್ಯೆಗನುಗುಣವಾಗಿ ಜನಸಂಖ್ಯೆ ಬೆಳೆದಹಾಗೆ ನಾವು ಈ ಕಾರ್ಯವನ್ನು ಮಾಡಬೇಕಾಗಿದೆ ಜನತೆ ಸಮಾಧಾನಪಟ್ಟುಕೊಳ್ಳುವ ರೀತಿಯಲ್ಲಿ ಸಂತೋಷಪಟ್ಟುಕೊಳ್ಳುವ ರೀತಿಯಲ್ಲಿ ವಿದ್ಯಾಭ್ಯಾಸದ ಪ್ರಗತಿ ಈ ರಾಜ್ಯದಲ್ಲಿ ನಡೆಯುತ್ತಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಒಟ್ಟಿನಲ್ಲಿ ಈ ರಾಜ್ಯದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆರ್ಥಿಕ ಅಭಿವೃದ್ಧಿಗಾಗಿ ಸಮಾಜಿಕ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿದ್ದಾರೆ. ಸರ್ಕಾರದವರು ಮಾಡಿರತಕ್ಕ ಇನ್ನೂ ಹಲವಾರು ಕಾರ್ಯಕ್ರಮಗಳನ್ನು ಅಂಕಿ ಅಂಶಗಳ ಸಮೇತ ಹೇಳುವುದಕ್ಕೆ ಇದ್ದರೂ ಕೂಡ ಈಗ ಅವುಗಳನ್ನು ಹೇಳುವುದಕ್ಕೆ ಕಾಲಾವಕಾಶ ಇಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀಮಾನ್ ದೇವರಾಜ ಅರಸ್ ಅವರ ಮುಖಂಡತ್ವದಲ್ಲಿ ದೇಶದ ಅಭಿವೃದ್ಧಿ ಕಾರ್ಯಕ್ರಮಗಳು ಬಹಳ ಚೆನ್ನಾಗಿ ನಡೆದಿವೆ. 20 ಅಂಶಗಳ ಕಾರ್ಯಕ್ರಮಗಳನ್ನು ಈ ರಾಜ್ಯದಲ್ಲಿ ವ್ಯವಸ್ಥಿತವಾಗಿ ನಡೆದಿವೆ. ರಾಜ್ಯದಲ್ಲಿ ಜನತೆಯು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದೆ ಬರುವುದಕ್ಕೆ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ತನ್ಮೂಲಕ ರಾಜ್ಯದಲ್ಲಿ ಜನತೆ ನೆಮ್ಮದಿಯಿಂದ ಜೀವನ ಮಾಡುತ್ತಿದ್ದಾರೆ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲ ಒಂದು ದುರಾದೃಷ್ಟದ ಸಂಗತಿ ಉಂಟಾಗಿದೆ. ಅದೇನೆಂದರೆ ನಮ್ಮ ರಾಜ್ಯದ 20 ತಾಲ್ಲೂಕುಗಳಲ್ಲಿ ಕ್ಷಾಮ ಪರಿಸ್ಥಿತಿ ಬಂದಿದೆ, ಆದರೂ ಸಹ ಆಹಾರಧಾನ್ಯಗಳ ಬೆಲೆಗಳು ಮಟ್ಟ ಜಾಸ್ತಿಯಾಗಿಲ್ಲ. ಅದಕ್ಕೆ ಕಾರಣ ಇಷ್ಟೆ. ನಮ್ಮ ಸರ್ಕಾರ ಕೈಗೊಂಡ ಬಿಗಿ ಕ್ರಮ ಜಿಲ್ಲೆಯಿಂದ ಜಿಲ್ಲೆಗೆ ಆಹಾರಧಾನ್ಯವನ್ನು ಸಾಗಾಣಿಕೆ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ 4 ರೂಪಾಯಿ ೮ ರೂಪಾಯಿಗೆ ಒಂದು ಕೆ. ಜಿ. ಅಕ್ಕಿ ಸಿಕ್ಕುತ್ತಿತ್ತೋ ಇಲ್ಲವೋ ಇದು ಶಂಕೆ ಪಡಬೇಕಾದ ವಿಷಯ. ಇವೊತ್ತು ನಮ್ಮ ರಾಜ್ಯದಲ್ಲಿ ಒಂದು ರೂಪಾಯಿ 40 ಪೈಸೆಗೆ ಒಂದು ಕೆ. ಜಿ. ರಾಗಿ ಸಿಕ್ಕುತ್ತದೆ. ಇವೊತ್ತು ರಾಜ್ಯದಲ್ಲಿ ಘೋರ ಕ್ಷಾಮ ಬಂದಿದ್ದರೂ ಕೂಡ ಜನತೆಗೆ ಆಹಾರ ಸಿಕ್ಕುತ್ತಾ ಇಲ್ಲ, ರಾಗಿ ಸಿಕ್ಕುತ್ತಾ ಇಲ್ಲ ಅಕ್ಕಿ ಸಿಕ್ಕುತ್ತಾ ಇಲ್ಲ, ಜೋಳ ಸಿಕ್ಕುತ್ತಾ ಇಲ್ಲ, ಎನ್ನುವ ಪರಿಸ್ಥಿತಿ ಇಲ್ಲ. ಅಭಾವ ಇಲ್ಲ. ಏತಕ್ಕೆಂದರೆ ಕೆಲವು ಕಡೆ ಘೋರ ಕ್ಷಾಮ ಬಂದಂತಹ ಕಾಲದಲ್ಲಿ ಸರ್ಕಾರ ಬಿಗಿ ಕ್ರಮವನ್ನು ಕೈಗೊಳ್ಳದಿದ್ದರೆ ಆಹಾರಧಾನ್ಯಗಳ ಬೆಲೆ ಈಗ ಇರುವುದರ ಎರಡರಷ್ಟಾಗುತ್ತಿತ್ತು ಎನ್ನುವುದನ್ನು ಹಳ್ಳಿಗಳಿಗೆ ಹೋದಾಗ ಜನತೆ ಹೇಳುತ್ತಿದ್ದಾರೆ. ನೂರಾರು ಹಳ್ಳಿಗಳಲ್ಲಿ ಈ ಒಂದು ಸರ್ಕಾರ ಮಾಡಿದಂತಹ ಅಭಿವೃದ್ಧಿ ಕಾರ್ಯವನ್ನು ಜನತೆ ಹೇಳಿದ್ದಾರೆ. ಜನತೆ ಅದನ್ನು ಒಪ್ಪಿದ್ದಾರೆ. ಕೆಲವು ಸಾಮಾನುಗಳ ಬೆಲೆ ಜಾಸ್ತಿಯಾಗುವುದಕ್ಕೆ ಕಾರಣ ಇದೆ. ಹೊರಗಡೆಯಿಂದ ಬರತಕ್ಕ ಸಾಮಾನುಗಳ ಬೆಲೆ ಜಾಸ್ತಿ ಆಗಿದೆಯೇ ವಿನಾ ನಮ್ಮಲ್ಲಿ ಉತ್ಪಾದನೆಯಾಗತಕ್ಕ ಸಾಮಾನುಗಳ ಬೆಲೆ ಅಷ್ಟು ಹೆಚ್ಚಾಗಿಲ್ಲ. ಕೃತಕ ಅಭಾವದಿಂದ ಬೆಲೆ ಜಾಸ್ತಿಯಾಗಿದೆಯೇ ಹೊರತು . ಸರ್ಕಾರ ಮಾಡಿದಂತ ಕೆಲಸದಿಂದ ಬೆಲೆ ಜಾಸ್ತಿಯಾಗಿಲ್ಲವೆಂದು ಒತ್ತಿ ಹೇಳುತ್ತೇನೆ. ಒಟ್ಟಿನಲ್ಲಿ ಬೆಲೆಗಳು ಸಾಮಾನ್ಯವಾದ ಜನತೆ ಕೊಳ್ಳತಕ್ಕ ಮಟ್ಟದಲ್ಲಿವೆ. ಸರ್ಕಾರದ ಒಂದು ಧೈರ್ಯ ಮತ್ತು ಸ್ಥೈರ್ಯದಿಂದ ಹಾಗೂ ಸರ್ಕಾರದ ನಿಲುವಿನಿಂದ ಬೆಲೆಗಳು ಸಾಧಾರಣವಾಗಿವೆ. ಸರ್ಕಾರದ ನಿಲುವನ್ನು ನಾನು ಮತ್ತೊಮ್ಮೆ ಸಮರ್ಥಿಸಿ, ರಾಜ್ಯಪಾಲರ ಭಾಷಣಕ್ಕೆ ಸಂಪೂರ್ಣವಾದ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತನ್ನು ಮುಗಿಸುತ್ತಾ, ಅಧ್ಯಕ್ಷರಿಗೆ ನನ್ನ ವಂದನೆಗಳನ್ನು ಅರ್ಪಿಸುತ್ತೇನೆ.

ಅಧ್ಯಕ್ಷರು.—ಸಭೆ ಈಗ ಎದ್ದು, 4ನೇ ತಾರೀಖು ಸೋಮವಾರ ಒಂದು ಗಂಟೆಗೆ ಪುನಃ ಸೇರುತ್ತದೆ.

The House adjourned at Eleven Minutes Past One of the clock to meet again at One of the Clock on Monday the 4th April 1977.

WD 8406—GPB—55—27-6-1977